# ಆರ್ಯಮತಸಂಜೀವಿನಿ.

ಕರ್ಣಾಟಕಮಂಡಲಾಧೀಶ್ವರ

ಶ್ರೀ ಚಿಕದೇವರಾಯ ವಿರಚಿತವಪ್ಪ

## "ಚಿಕದೇವರಾಯ ಬಿನ್ನಪಂ."

(೩)


**Edited by M. A. Ramanuja Iyengar.**

Hosa Agrahar, MYSORE.



ಮೈಸೂರು: ಸದ್ವಿದ್ಯಾಮಂದಿರ ಮುದ್ರಾಶಾಲೆಯಲ್ಲಿ

ಮುದ್ರಿಸಲ್ಪಟ್ಟಿತು.

೧೮೯೦

UNIVERSAL LIBRARY
OU_200643
UNIVERSAL LIBRARY

# ಶೋಧನೆ ಪತ್ರ

| ಪುಟ | ಪಙ್ತಿ | ಅಶುದ್ಧಂ | ಶುದ್ಧಂ | ಪುಟ | ಪಙ್ತಿ | ಅಶುದ್ಧಂ | ಶುದ್ಧಂ |
|---|---|---|---|---|---|---|---|
| ೧ | ೧೯ | ಸೂರ್ಕಿನಿಂ | ಸೊರ್ಕಿನಿಂ | ೧೦ | ೨೦ | ಬದುಂಕೆ | ಬರ್ದುಂಕೆ |
| ೨ | ೨ | ಪ್ರೊಯುದ್ಧ | ಪೊಯ್ಯುದ್ಧ | , | ೨೨ | ವಂನೀನೆ | ವೃಂನೀನೆ |
| , | ೭ | ಗ್ಗನೆೊಳ್ದೊ | ಗ್ಗನೊಳೊ | ೧೧ | ೯ | ನೊರ್ವನೆ | ನೋರ್ವನ |
| , | ೮ | ಪರಿತೆರೆ | ಪರಿತರೆ | , | ೧೦ | ಪುಟ್ಟ | ಪುಟ್ಟ |
| , | ೧೧ | ಶಾಹನಕರಂ | ಶಾಹನಂಕರಂ | , | ೧೭ | ರಿಯುವಾದೊಡೆ | ರಿದಾದೊಡ |
| , | ೧೫ | ಬಾಳ್ವೆಸಂ | ಬಾಳ್ವೇಣಸಂ | , | ೨೪ | ಮೂರುಂ | ಮಾರುಂ |
| , | ೨೧ | ಗೊಂಪೆಣದೆ | ಗೊಂದಣದೆ | ೧೨ | ೧೩ | ವನುಳ್ದು | ಮನುಳ್ದು |
| ೩ | ೧ | ಧಟಿಸ್ಟ್ರೆ | ಧಟಿಸ್ದ | , | ೧೬ | ಶ್ಕ್ಶ್ಶ | ಯೊಳ್ಕೈ |
| , | ೨೫ | ಆರವತ್ತ್ರುಂ | ಆರುವತ್ತ್ರುಂ | ೧೩ | ೨ | ತೊರ್ಪ್ಯ್ | ತೋರ್ಪ್ಪ |
| ೪ | ೩ | ಯುನೆಪನ | ಯುಪ[illegible] | , | ೬ | ನಾಕ್ಕಂ | ನಾಲ್ಕುಂ |
| , | ೫ | ಓದ | ಓದೆ | , | ೧೪ | ತೊರಿಸು | ತೋರಿಸು |
| , | ೯ | ರಭಸದಿಂ | ರಭಸದಿಂ | , | ೨೨ | ಶಿಕ್ಷೇ | ಶಿಕ್ಷೆ |
| , | ೨೩ | ಗತಿಯುಂ | ಗತಿಯುಂ | ೧೪ | ೧ | ಗಳವುಂ | ಗಳುಮಂ |
| ೫ | ೧೨ | ಪ್ರಕಟಿಸುವಂ | ಪ್ರಕಟಿಸುವಂ | , | ೩ | ಬಾಹ್ಯಂ | ಬ್ರಾಹ್ಮಂ |
| , | ೨೦ | ಪ್ರ್ರತಿ | ಪ್ರತಿ | , | ೨ | ನೆಗಳ್ದುರಿಂ | ನೆಗಳ್ದುದರಿಂ |
| ೬ | ೨೬ | ಳಿಪ್ಪತಾದ | ಳಿಪ್ಪದ | ೧೬ | ೧೪ | ನಿರ್ನಯ | ನಿರ್ಣಯ |
| ೭ | ೮ | ಪದಿನೆಂಟು | ಪದಿನೆಂಟು | ೧೭ | ೧೨ | ನಾನೀ | ನಂನಿ |
| | ೧೮ | ಇಪ್ಪತ್ತು | ಇಪ್ಪತ್ತು | , | ೧೩ | ಗಿರ್ಪ್ | ಗಿರ್ಪ |
| ೮ | ೩ | ಪ್ರಾವಂ | [illegible] | , | ೨೩ | ಅಪ್ರೊಂಡೇ | ಆವ್ರೊಂಪೇ |
| ೯ | ೬ | ವೆಳ್ಪು | ವೇಳ್ಪು | , | , | ವಸ್ತ್ರನಂ | ವಸ್ತ್ರುವಂ |
| , | ೮ | ಗಳುಂಟು | ಗಳ[illegible]ರ್ತುಂಟು | ೧೮ | ೭ | [illegible]ವ್ಯ | ಸಾವ್ಯ |
| , | ೧೨ | ಗಳುವಿತ್ತು | ಗಳುವಿತ್ತು | ೨೧ | ೩ | ರೂಪನ | ರ್ರೂಪಮನ |
| , | ೧೫ | ವಿಡಿವು | ಪಿಡಿವು | , | ೧೫ | ಈಣ್ಬ | ಈಣ್ಬ |
| , | ೨೨ | ಬಿಪ್ಪುರ್ಗಂಕು | ಬರ್ಪುರ್ಗಂಕು | ೨೧ | ೨೫ | ವೆಸ್ಬ | ವೆಸ್ಕ |
| , | ೨೬ | ಸುತ್ತು | ಸುತ್ತು | ೨೨ | ೧೧ | ಬೆಳ್ಬ | ಬೆಳ್ಬು |
| ೧೦ | ೧೧ | ಸೆಸ್ಸಳಂ | ಸೊಳಂ | ೨೪ | ೬ | ವುದಂ | [illegible] |
| , | ೧೫ | ನೀನೇ | ನೀನೆ | , | ೭ | ಪ್ಪುದಂ | |
| , | ೧೯ | ವದು | ವೃದು | , | ೨೫ | ಪೊನ್ನುಯಿ | |
| , | ೨೦ | ಅವ್ರದುರಿಂ | ಅವ್ರದರಿಂ | ೨೫ | ೨೦ | ಘಪ್ರಣವ | [illegible] |

| ಪುಟ | ಪಙ್ಕ್ತಿ | ಅಶುದ್ಧಂ | ಶುದ್ಧಂ | ಪುಟ | ಪಙ್ಕ್ತಿ | ಅಶುದ್ಧಂ | ಶುದ್ಧಂ |
|---|---|---|---|---|---|---|---|
| ೨೬ | ೧೧ | ಪೃಥಿವೀ | ಪೃಥಿವಿ | ೩೮ | ೨೬ | ಮನುಷ್ಯರುಂ | ಮನುಷ್ಯರಂ |
| " | ೧೯ | ಬೆಳಗನೊ್ಣ | ಬೆಳಗನೆನೊ್ಣ | ೩೯ | ೮ | ತನೆಗೆ | ತನಗೆ |
| " | ೨೪ | ಜಾಣ್ನ | ಜಾಣ್ಣಂ | " | ೧೮ | ಎಳ್ಪುಪ್ಪ | ಎಳ್ಪುಪ್ಪು |
| ೨೭ | ೨೧ | ಪಿುಕ್ಕ್ಯಂ | ಐಕ್ಕ | " | ೨೩ | ದೊಡೆ | ದೊಡ |
| ೨೮ | ೧೩ | ಕಾರಣ | ತಾಣ | ೪೦ | ೧೦ | ಯುಗಗಳ | ಯುಗಗೆ |
| " | ೨೧ | ಅಯ್ವತ್ತು | ಐವತ್ತು | ೪೧ | ೧೪ | ತ್ರತ್ರ್ಕರಿ | ಕರ್ತರಿ |
| " | ೨೬ | ಎಳ್ಪತ್ತು | ಏಳ್ಪತ್ತು | " | " | ಗಾ್ರಿ | ಕಾಗೆ |
| ೩೦ | ೧೩ | ನಿರ್ನ್ನಿರ್ೀತ | ನಿರ್ಣೀತ | " | ೨೩ | ಗುಂಭ | ಗುಂಬ |
| " | " | ಪೊಂದುಂ | ಪೊಂದು | ೪೨ | ೭ | ಪಾವು | ಗೋರಕಪಾವು |
| ೩೨ | ೨೦ | ಅಯ್ದುಂ | ಐಯ್ದುಂ | ೪೨ | ೧೧ | ಪೇಣದೀನಿ | ಪೇಣದಿನಿ |
| ೩೩ | ೨೩ | ದೊಂಟ | ದೋಂಟ | ೪೪ | ೧೨ | ನಿಧಿ | ನಿದಿ |
| ೩೫ | ೧೮ | ದೆಸವು | ದೆಸೆವು | ೪೮ | ೮ | ಪೊಳ್ವ | ಪೊಳ್ವ |
| ೩೬ | ೪ | ವರ್ಣ | ವಣ್ಣ | ೪೯ | ೯ | ಕಳದಿ | ಕಳೆದಿ |
| " | ೯ | ಕೋಟಿ ಳಗ | ಕೋಂಟಿ ಳಂಗ | ೫೧ | ೨೫ | ನಡೆತೆ | ನಡತೆ |
| " | ೧೧ | ಗಿರ್ಕ್ಕು | ಗಿರ್ಚ್ಚು | ೫೨ | ೨ | ಮರಲ್ದು | ಮರಳ್ದು |
| " | ೨೦ | ಬಿಸಯು | ಬಿಸಿಯು | " | ೬ | ಪಡಯು | ಪಡೆಯು |
| ೩೭ | ೨ | ತೊಂಭತ್ತು | ತೊಂಬತ್ತು | ೫೪ | ೧೦ | ಪೋದದರಿಂ | ಪೋದುದರಿಂ |
| " | ೧೦ | ನಿಷದ | ನಿಷಧ | " | ೧೩ | ದರಿಚುವ | ದರಚುವ |
| " | ೧೮ | ನಾಲ್ಕು | ನಾಲ್ಕುಂ | ೫೯ | ೪ | ಯಿರ್ದು | ಇರ್ದು |
| ೩೮ | ೧೮ | ಳ್ಬಳ್ವರ್ | ಳ್ಬೞ್ವರ್ | ೬೦ | ೬ | ಳ್ಬೆಳೆ | ಳ್ಬುಳೆ |

## ಪಾಠಾಂತರಗಳು

| | | | | |
|---|---|---|---|---|
| ೧೦ | ೬ | *ನರಮುನಿಯಿಂದ | ಎಂಬುದಕ್ಕೆ | ನಾರಾಯಣಮುನಿಯಿಂದ. |
| ೧೧ | ೧ | ಕೆಲವುಂ | " | ಕೆಲಂಬರಂ* |
| ೩೩ | ೫ | ಶಕ್ತಿಯುಮಣಗಿರ್ಪ್ಪ | " | ಶಕ್ತಿಯುಮುಳ್ಳರಾಗಿರ್ಪ್ಪ* |
| ೩ | ೨೦ | ಕೆೀಗೆರ್ಪೆಂಬು | " | ಕಿರುಗೆಱೆಂಬು* |
| | ೧ | *ಕಾಯ್ದ | " | ಕಾದ |
| | ೮ | ನೀರಕಾಗೆ | " | ನೀರ್ಕ್ಕಾಗೆ |
| | ೧೦ | ಸವಿಪಾ | : | ಸಲಿಸುವೆ;* ಸಲಿಪನುಂ, |

ಈ ಶೋಧನೆಯಲ್ಲಿ ಒಂದು ಕಡೆ ಶೋಧಿಸಿರುವ ಪದವನ್ನು ಪುನ ಲ್ಲ. ಪಾಠಕರು ಕ್ಷಮಿಸಬೇಕು. ಗುರುತುಮಾಡಿರುವ ಪಾಠಾಂತರವ ಬದಾಗಿ ತೋರುತ್ತದೆ.

# ಶ್ರೀ ಚಿಕದೇವರಾಯ ಬಿನ್ನಪಂ.

ಶ್ರೀರಮಣನಖಿಳಸದ್ಗುಣ ।
ವಾರಿಧಿ ಯಾನಂದಮಯವಿಮಾನೋದರವಿ॥
ಸ್ಫಾರಿತರೂಪಂ ಯದುಗಿರಿ।
ನಾರಾಯಣನಾಳ್ದನಕ್ಕೆ ನರಪತಿಗನಿಶಂ॥ ೧ ॥

( ಶಾರ್ದೂಲವಿಕ್ರೀಡಿತಂ )

ಆನಂದೈಕರಸಂ ಸಮಸ್ತಜಗದಾನಂದಂಗೆ ಚಕ್ರಾಯುಧಂ ।
ಸೇನಾಚಕ್ರವಿಮರ್ದಿತಾಹಿತಮಹೀಚಕ್ರಂಗೆ ವೈಕುಂಠನ ॥
ನ್ಯೂನೋಪಾಯವಿಕುಂಠಿತಾರಿಧರಣೀಭೃದ್ದುರ್ಗಸರ್ವಸ್ವಂಗೆ ಲ ।
ಕ್ಷ್ಮೀನಾರಾಯಣನೀವನಕ್ಕೆ ಚಿಕದೇವೇಂದ್ರಂಗೆ ಸಾಮ್ರಾಜ್ಯಮಂ॥೨॥

ಶ್ರೀಮದ್ಯಾದವಶೈಲವಲ್ಲಭಪದಾಂಭೋಜಾತಭೃಂಗಂ ಗುಣಾ ।
ರಾಮಂ ಪಶ್ಚಿಮರಂಗಧಾಮನಗರೀಸಿಂಹಾಸನಾಧೀಶನು ॥
ದ್ದಾಮಶ್ರೀಯದುವಂಶಕಲ್ಪಕತರುಪ್ರಾಥಪ್ರವಾಳಂ ಜಗ ।
ತ್ಪ್ರೀಮಂ ಚಿತ್ತಂ ನೆಗಳ್ಗೆ ಬಾಳ್ಗೆ ಚಿಕದೇವೇಂದ್ರಂ ಮಹೀಚಂದ್ರಮಂ॥

ಮಯನೋಶಂಬರನೋದಶಾಸ್ಯಸುತನೋಮಾರೀಚನೋಎಂಬಿನಂ।
ಭಯದಿಂದಾ ಗರೆ ಢಿಳ್ಳಿ ಭಾಗನಗರ ಪ್ರಾಂತಂಗಳೊಳ್ನಾಡುಗರ್ ।
ಜಯಜೀಯೆಂದಿದಿರಿಟ್ಟಕಪ್ಪದೊದವಿಂ ಪೆಂಪೇರಿ ಬಂದಾಶಿವಾ ।
ಜಿಯಸೊರ್ಕಂ ಮುರಿದಿಕ್ಕೆ ಯಪ್ರತಿಮವೀರಾಭಿಖ್ಯೆಯಂ ತಾಳ್ದಿದಂ ॥

ಢಿಳ್ಳಿಯಬಾಗಿಲೊಳ್ಪರಿದುಕೊಳ್ಳೆಯಕೊಂಡುರೆಗೋಲುಕೊಂಡೆಯಂ
ಜಳ್ಳಿಸಿ ಯಾಕ್ಕಲಿಕ್ಕಿ ವಿಜಯಾಪುರಮಂ ಬರಿಗೈದು ಸೂರ್ಕಿನಿಂ ॥
ಡಳ್ಳರಿವಾಶಿವಾಜಿಸುತಶಂಭುಜಿಯೇಳ್ಗೆಯನುರ್ಬ್ಬಕೊರ್ಬ್ಬಮಂ ।
ತೆಳ್ಳನೆಗೆಯ್ದನದ್ಭುತಪರಾಕ್ರಮದಿಂ ಚಿಕದೇವಭೂವರಂ ॥೫॥

ಮೂಗಂ ಕೊಯ್ದೆಸೆವಂತರಾವಣನವಂಗಿತ್ತಸ್ತ್ರಸನ್ಯಾಸಮಂ |
ಲೋಗರ್ಭಾಪೆನೆ ಪ್ರೊಯ್ದು ಚಿತ್ರವಧೆಗೆಯ್ದಾಜೀತಜೀಘಾಟಿಯುಂ ||
ಬೇಗಂ ದಾದಜಿಕಾಕಡಾಂಕ*ನಣಲಂ ಕೊಯ್ದಲ್ಲದೇಶಕ್ಯಮು |
ದ್ವೇಗಂಪ್ರೋಪಿನನಾಳ್ಧನಪ್ರತಿಮವೀರಂ ಮೇದಿನೀಚಕ್ರಮಂ ||೬||

ನೆರದುಸುರಾಸುರರ್ಶರಧಿಯಂಕಡೆವೃತ್ತ್ರರೆ ಯೆಂಟುದಿಕ್ಕಿನೊಳ್ |
ತೆರೆಕವಿದೆಯ್ದುನುಗ್ಗುಗನುಸಿಗೆಯ್ದುಪಳಂಚುವ ಮಂದರಾದ್ರಿಯೋಳ್||
ಪಿರಿಕಿರದೆಂನದೇಣ್ದೆಸೆಯ ಮನ್ನೆಯರೊಳ್ಗನೊಳ್ದನ್ದವೇಳೆಯೊಳ್
ಪರಿತೆರೆಪ್ರೊಯ್ದುಪ್ರೊಯ್ದು ಭರಭಂ ಬರಿಗೈದನ ಭೇದ್ಯವಿಕ್ರಮಂ||೭||

ಬಳಸಿಯುಮೊನ್ದುಗೂಡಿ ಪರಿತಂದ ರಿಪುಕ್ಷಿತಿಪಾಲವರ್ಗಮಂ |
ಘುಳಿಲನೆ ಪ್ರೊಯ್ಬನೆಂದೊಡದು ಪೇರ್ಮೆಯೆಯುಪ್ರತಿಮಂಗಿದರ್ಬಿಡಂ ||
ಬಳಯುತರಪ್ಪ ಬಲ್ಕುತು ಪಶಾಹನನೇದುಲಶಾಹನ ಕರಂ |
ಮುಳುಗಿಸಿ ಮೃಮೆವೆತ್ತನೆನಲೊಪ್ಪುಗುಮೀ ಚಿಕದೇವಭೂವರಂ ||೮||

ತಳ್ವದೆ ಢಿಳ್ಳಿಯಾಳ್ವ ಧೊರೆಯಂ ಕರೆತಂದವನತ್ತಿಶಿನ್ದಮೇ |
ತೋಳ್ವಳೆವೆತ್ತ ಭಾಗನಗರಾಧಿಪನಂ ವಿಜಯಾಪುರೇಶನಂ ||
ಬಾಳ್ವನೆಂಬಿನಂ ಪಿಡಿದು ಕೈಸೆರೆಗೊಂಡುರೆ ಪಾಡುಪಂತದಿಂ |
ಬಾಳ್ವನಭೇದ್ಯವಿಕ್ರಮನೆನಲ್ ಚಿಕದೇವನರೇಂದ್ರಚಂದ್ರಮಂ ||೯||

( ಲಯಗ್ರಾಹಿ )

ಅಂದಿವನಿನಳ್ಕಿಭಯದಿಂದೆಮಣಿದಿರ್ದ್ದ ನೃಪಬೃಂದಮನಿ ತುಂ
ಭರದೊಳೊನ್ದುವೆರೆದೊಳ್ಪಂ | ಸಂದಿಸಿಶಿವಾಜಿಗನುವಿಂದೊರೆದು ಮ
ರ್ಮಮನವನ್ದಿರೊಡಗೂಡಿ ಯವನಂದುಕವಡಿಂದು ||
ಸಂದಣಿಯಕಾಳಗದೊಳೊಂದಿನಿಸು ಮುಂಬರಿಯೆ ಬಂದೆರಗಿ ಪಾಪ್ರಗ
ಳ ಗೊಂದಣದೆ ನಿಷ್ಣು | ಸ್ಯಂದನದ ಮಾಳ್ಕೆಯೊಳೆಕೊಂದು ಕೊಡೆ
ಯಾಡಿದಳವಿಂದೆ ಚಿಕದೇವನೃಪನಿಂದು ಸೊಗವಾಳ್ಗಂ || ೧೦ ||

ಒನ್ದುದೆಸೆಯೊಳ್ತುರುಕರೊನ್ದುಕಡೆಯೊಳ್ಮರಸರೊನ್ದೆಸೆ
ಯೊಳಾರೆಯರ | ಬಿನ್ದಮಳವಿ ಮ್ಬೇರೊನ್ದುಬಳಯೊಳ್ತುಗುಳರೊ
ನ್ದಿರವಿನೊಳ್ಕೊಡಗರೊನ್ದುಕೆಲದೊಳ್ಮಲೆಗರೊನ್ದುವೆರೆದೆಲ್ಲರ್ ||

ಗನ್ದಳಿಸಿ ಕಾಳಗಕೆ ಮುಂದುವರಿವನ್ನಮಥಟನ್ದವರ ಥಟ್ಟುಗಳ |
ಪನ್ದಲೆಗಳ ನ್ದಿಗ್ಬಲನ್ದ ಬಲಿಯಿತ್ತು ಗೆಲವಿನ್ದ ಚಿಕದೇವನೃಪ ನನ್ದ
ಮಿಗಪೇರ್ಜಗಸಮನೂನ್ದಿ ಸೊಗವಾಳ್ಗುಂ ॥ ೧೧ ॥

ಶ್ರೀಪತಿಯ ಸೇವೆಯೆನ್ದೇ |
ಈಪರಿಯೊಳ್ ಕ್ಷಾತ್ರಧರ್ಮ ಮೆಸಗುತೆ ಶಾಸ್ತ್ರ ॥
ಲಾಪಙ್ಗಳ ತತ್ವಾರ್ಥನಿ |
ರೂಪಣದಿಂ ಪೊಳ್ತುಗಳೆವ ನಪ್ರತಿಮಾಜ್ಞಂ ॥ ೧ ॥

ಓದಿ ತಿಳಿದೊಳ್ಪಿನಿನ್ದಂ |
ವೇದಾಂತದತತ್ವಗತಿಯ ನೆಲ್ಲರು ಮರಿವ ॥
ನಾತ್ತದರದಿ ನ್ದಪ್ರತಿಮಂ |
ಯಾದವಗಿರಿಯೊಡೆಯ ನಡಿಗೆ ಬಿನ್ನತಿಗೆಯ್ದಂ ॥೨॥

ಮೂವತ್ತುಂ ಬಿನ್ನಪದಿ |
ನ್ದಾವೇದಾನ್ತಾರ್ಥತತ್ವ ಮನಿತುಂ ಸೊಗದೊಳ್ ॥
ಭಾವನೆಗೆ ಬರ್ಪಿನಂ ಚಿಕ |
ದೇವಂ ಯದುಶೈಲನಾಥನಡಿ ಗುಸುರ್ದ ನಿದಂ ॥೩॥

ಕ್ಷಿಪ್ರದೊ ಳೆಲ್ಲರು ಮರಿವ |
ನ್ತಪ್ರತಿಪತ್ತ್ಯಾದಿ ದೋಷಮಂ ಕಳೆದೊಳ್ಪಂ ॥
ದಪ್ರತಿಮವೀರನರಪತಿ |
ಯಪ್ರಾಕೃತನಡಿಗೆ ಮಣಿದು ಬಿನ್ನತಿಗೆಯ್ದಂ॥೪॥

( ಗದ್ಯಂ )

ಅದೆಂತೆನೆ, — ಸ್ವಸ್ತಿ ಶ್ರೀಮನ್ಮಹಾರಾಜಾಧಿರಾಜಂ ರಾಜಪರಮೇಶ್ವರಂ ಪ್ರೌಢಪ್ರತಾಪಂ ಅಪ್ರತಿಮವೀರನರಪತಿ ಶ್ರೀಚಿಕದೇವಮಹಾರಾಯಂ ಶ್ರೀರಂಗಪಟ್ಟಣದೊಳ್ ಸಿಂಹಾಸನಾರೂಢನಾಗಿ ಸಾಮ್ರಾಜ್ಯದೀಕ್ಷೆಯಂ ತಳೆದು, ದೇವಬ್ರಾಹ್ಮಣಪರಿಪಾಲನಮಂ ಪ್ರಧಾನಂಗೆಯ್ದು, ಸಕಲಪ್ರಜೆಗಳಂ ಪಾಲಿಸುತ್ತಿರ್ಪಿನಂ; ಉತ್ತರದೇಶದೊಳುದ್ವೃತ್ತಚರಿತ್ರನೆನಿಸಿ, ಅರವತ್ತುಂ ಸಾಸಿರಂ ವಾರುವಂಗಳುಂ ಲಕ್ಕದೆಣಿಕೆಯಕಾಲಾಳ್ಗಳುಂ ಬೆರಸುನಡೆದು. ಡಿಳ್ಳಿಯ

ನಾತನನಿತುಮಂ ಕೊಳ್ಳೆಯೊಳಂ ಕಳ್ಳಗಾಳಗದೊಳಂ ಜಳ್ಳುಗೈದು, ವಿಜಯಾಪುರದರಸಂಜಯಿಸಿ, ಅವರ ನಾಡುಬೀಡುಗಳಂಕೊಂಡು, ಗೋಲಕೊಂಡೆಯನವನು ಬುಡುಗೆಯ್ದು, ಅವನಿತ್ತಕಪ್ಪಮನೊಪ್ಪುಗೊಣ್ಡು, ಆ ಸೊರ್ಕಿನಿಂ ಗಳ್ಕನೆ ಕನ್ನಡನಾಡಂಪೊಕ್ಕು ಶಿವಾಜಿಯುಂ ಆ ಜಿರಂಗದೊಳೋಡಗೆಡಿಸಿ, ಅವನಸೇನಾನಿಗಳೊಳ್ ಜೈತಜಿಕಾಟಕರನು ಘೋಟಕಖುರಪುಟಂಗಳಂ ತೊತ್ತಳದುಳಸಿ, ಮಾಗುಕಿವಿಕೊರಳ್ಕೈಕಾಳ್ಗಳಂ ಖಂಡಿಸಿ, ಆ ತುಂಡುಗಳಂ ಪೇತುಪಿಂಡುಗಳಂ ತಣಿಯಿಸಿ, ಮತ್ತಮಾದಾದಜಿಕಾಕಡೆಯೆನಿಪನ ಅಣಲಂ ಕೊಯ್ದು, ಆ ಪನ್ನಲೆಯಂ ಮನ್ನಿಯೊಳ್ಮೆರೆಯಿಸಿ, ಆ ರಭಸದಿಂ ಶಂಭೋಜಿಯಂ ಭಯಾರ್ಣವದೊಳ್ಮುಳುಂಗಿಸಿ, ಅವಂಗೆ ಸೆರವಾಗಿಬಂದ ಎಕ್ಕೋಜಿಯ ಜನ್ಮಮಂ ಸಾಕುಮಾಡಿ, ಅವನ ಮಹಾಪ್ರಧಾನನೆನಿಸುವ ಎಸಮಂತರಾಪ್ಪುವ ನಾಸಾಚ್ಛೇದನಂಗೆಯ್ದು, ಮತ್ತಮಾಶಂಭೋಜಿಗೆ ಕಪ್ಪವಿತ್ತಂ ಕೂಟಮಂಕಳುಪಿ ಪೆಂಪುಗೆಯ್ದ ಗೋಲಕೊಂಡೆವಿಜಯಾಪುರದವರಂ ಕೇಣಂಗೊಣ್ಡು, ಅವರನಂಪಲೆವುದರ್ಕೆ ಥಿಳ್ಳಿಯಾಳ್ವ ಮಹಾಪಾದುಶಾಹನೆನಿಸುವ ಅವರಂಗಶಾಹನಂ ಬರಿಸಿ, ಅವನಿಂದಿವರೀರ್ವರ ದೇಶಕೋಶಂಗಳಂ ಕವರ್ದು ಕೈಸೆರೆಗೊಂಡು, ಮತ್ತಮಾಮರಾಟರಾಟೋಪಮಂ ನಂಬಿ ಮುಂಬರಿದು ಎಪಬಲಪೊಳಸಿಸಿನಿಸುಂ ಪೊಣರ್ವ ಪೊರರಸತಿಗುಳಕೊತಗಮುಲೆಯಾಳನಾಪಮನ್ನೆಯರು ಬನ್ನಂಬಡಿಸಿ, ಈ ತೆರದೊಳೇಣ್ದೆಸೆಯಂ ಗೆಲ್ದು, ಸುಖಸಂಕಥಾವಿನೋದಪಿಂ ಇರುತ್ತೆ; ಚಿತ್ತದೊಳ್ದಯಾರಸಮುಣ್ಮೆ ಯಾಳೋಚಿಸಿದಂ. ಏಣ್ದೆಸೆಯುಪಗೆಗಳಪಂಗಿದುದರಿಂ ಪ್ರಜೆಗಳ್ಗೆ ರಾಜಿಕಭಯಮಿಲ್ಲದೆಯುಂ, ದೇವತಾಪ್ರಸಾದದಿಂ ಮಳೆಬೆಳೆಗಳುಂಟಾದುದರಿಂ ದೈವಿಕಭಯಮಿಲ್ಲದೆಯುಮಿಪ್ಪುರ್ದರಿಂ, ಪ್ರಜೆಗಳನಿಬರುಂ ಇಹದೊಳ್ ಸೊಗವಾಳ್ದಪರ್. ಇವರ್ಗೆ ವರಗತಿಯುಂ ಸಂಪಾದಿಸವೇಳ್ಪುದೆನ್ದಾರ್ಕೈದು,

॥ಶ್ಲೋ॥ ಮಾಂಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿಸ್ಯುಃ
ಪಾಪಯೋನಯಃ । ಸ್ತ್ರಿಯೋ ವೈಶ್ಯಾಸ್ತ
ಥಾ ಶೂದ್ರಾ ಸ್ತೇಽಪಿ ಯಾನ್ತಿ ಪರಾಂಗತಿಮ್ ॥

ಎನ್ದು ಗೀತೆಯೊಳ್ ಶ್ರೀಕೃಷ್ಣಂ ತಾನೇ ನಿರೂಪಿಸಿದ ತೆರದೊಳ್

ಪಿನ್ತಣ್ಗೆನಿತಾನುಂ ಪಾಪಿಗಳಾದೊಡಂ ಆವಜಾತಿಯೊಳ್ಪುಟ್ಟಿದೊರ್ಡ
ನೀಗಳುಂ ತತ್ವಜ್ಞಾನದಿಂ ತನ್ನೊಳ್ಭಕ್ತಿಗೆಯ್ದು ನಂಬಿದವರ್ಗೆಮು
ಕ್ತಿ ತಪ್ಪದೆನ್ದೆಣಿಸಿ, ಅಕ್ಷರಮನರಿಯದೊಕ್ಕಲಿಗರ್ಗಂ ಪೆಣ್ಗಳ್ಗಂ
ಸಕ್ಕದದಿಂ ತತ್ವಜ್ಞಾನಮಪ್ಪುದರಿದು ಎಂದು, ಎಲ್ಲರುಮರಿವಂತೆ
ಕನ್ನಡಮಾತಿನೊಳಂ ಮೆಲ್ನುಡಿಗಳಿಂದೆ ಅಖಿಲತತ್ವಾರ್ಥಂಗಳಂ ಸಂಗತಿ
ಗೊಳಿಸಿ, ತಾನ್ತನ್ನ ಕುಲದೇವತೆಯಪ್ಪ ಯಾದವಗಿರಿನಾರಾಯಣನ
ಡಿದಾವರೆಗಳ್ಗೆ ಬಿನ್ನಪಂಗೆಯ್ವುಸೆವದೊಳ್ ಮೂವತ್ತುಂಬಿನ್ನಪಂಗ
ಳಂ ಪವಣ್ಗೆಯ್ದುಂ. ಅವರಲ್ಲಿ:—

೧ — ಒಂದನೆಯ ಬಿನ್ನಪದೊಳ್, ಅವಾಪ್ತಸಮಸ್ತಕಾಮನಾ
ದ ಶ್ರೀಮನ್ನಾರಾಯಣಂ ಪರವ್ಯೂಹವಿಭವಾನ್ತರ್ಯಾಮ್ಯರ್ಚಾವತಾ
ರಂಗಳನಂಗೀಕರಿಸಿಪ್ಪುದು ಭಕ್ತಾನುಗ್ರಹಾರ್ಥಮೆಂದವನ ದಯಾ
ತಿಶಯಮುಂ ಪ್ರಕಟಿಸಿದಂ.

೨ — ಎರಡನೆಯ ಬಿನ್ನಪದೊಳ್, ಶ್ರೀಮನ್ನಾರಾಯಣನೇ ಜಗ
ತ್ಕಾರಣನೆಂದು ನಿರೂಪಿಸಿದಂ.

೩ — ಮೂರನೆಯ ಬಿನ್ನಪದೊಳ್, ಆ ಜಗತ್ಕಾರಣವಸ್ತುವಂ ತಿಳಿ
ಯಕೂಡದೆಂಬಾಕ್ಷೇಪಮಂ ಪರಿಹರಿಸಿದಂ

೪ — ನಾಲ್ಕನೆಯಬಿನ್ನಪದೊಳ್, ಆ ಜಗತ್ಕಾರಣವಸ್ತುವಂ ತಿಳಿ
ವುದುಂ ವೇದಶಾಸ್ತ್ರಂಗಳಿಂದಮೇ ಎಂದು ಬಣ್ಣಿಸಿದಂ.

೫ — ಐದನೆಯ ಬಿನ್ನಪದೊಳ್, ಆ ವೇದಶಾಸ್ತ್ರಂಗಳನಿತುಂ
ಶ್ರೀಮನ್ನಾರಾಯಣನನೆ ಪ್ರತಿಪಾದಿಸುವ ತೆರನಂ ತಿಳುಪಿದಂ.

೬ — ಆರನೆಯ ಬಿನ್ನಪದೊಳ್, ಆ ವೇದಶಾಸ್ತ್ರಂಗಳೊಳ್ತೋರು
ವ ವಿರೋಧಂಗಳಂ ಮಾಣಿಸಿದಂ.

೭ — ಏಳನೆಯ ಬಿನ್ನಪದೊಳ್, ಆ ವೇದಶಾಸ್ತ್ರಸಿದ್ಧಮಾಗಿ,
ನಾರಾಯಣಂಗೆ ಶರೀರಮಾದ ಜಗತ್ತು ಮಿಥ್ಯೆಯಲ್ತು, ಸತ್ಯಮಾಗಿ
ಪ್ಪುದೆಂಬುದಂ ಪ್ರತಿಪಾದಿಸಿದಂ.

೮ — ಎಂಟನೆಯ ಬಿನ್ನಪದೊಳ್ಸ್ವಪ್ನದೃಷ್ಟಾನ್ತದಿಂ ಪ್ರಪಂಚಂ
ಮಿಥ್ಯೆಯೆಂದು ಭ್ರಮಿಸದಂತೆ ಕನಸಿನೊಳ್ಕಾಣ್ಬ ವಸ್ತುಗಳಂ ತತ್ಕಾಲ
ದೊಳ್ಜಗದೀಶ್ವರನುಂಟುಮಾಳ್ಪುದರಿಂ ಸತ್ಯಮೆಂದುಪಪಾದಿಸಿದಂ.

೯ – ಒಂಭತ್ತನೆಯ ಬಿನ್ನಪದೊಳ್, ಜಗಮಂ ವಿಷಮಮಾಗಿ ಸೃಜಿಸುವುದರಿಂ, ಜಗದೀಶ್ವರಂ ವಿಷಮನುಂ ನಿರ್ದಯನು ಮಕ್ಕುಮೆಂಬಾಕ್ಷೇಪಮಂ ತೀರ್ಚಿದಂ.

೧೦ – ಪತ್ತನೆಯ ಬಿನ್ನಪದೊಳ್, ಘಟಪಟಾದಿದೃಷ್ಟಾನ್ತದಿಂ ಜಗಕ್ಕೆ ಮೂರುಂತೆರದ ಕಾರಣಂಗಳ್ ಬೇರೆಬೇರೊಳವೆಂಬಾಕ್ಷೇಪಮಂ ಚಿದಚಿದ್ವಸ್ತುಶರೀರಕನಾದ ಜಗದೀಶ್ವರನೊರ್ವನೇ ಮೂರುಂತೆರದ ಕಾರಣಮಾಗಿರ್ಕುಮೆಂದು ಸಮಾಧಾನಂಗೆಯ್ದಂ: ಇಂತು ಪತ್ತುಂ ಬಿನ್ನಪಂಗಳೊಳ್ ಶ್ರೀಮನ್ನಾರಾಯಣನೇ ಪರಮದಯಾಳುವುಂ ಜಗತ್ಕಾರಣನುಂ, ಅಪರಿಚ್ಛೇದ್ಯಮಹಿಮನುಂ, ಸಕಲವೇದವೇದ್ಯನುಂ, ಆಶ್ಚರ್ಯಚರಿತ್ರನುಂ, ಚೇತನಾಚೇತನಶರೀರಕನುಂ, ಅಘಟಿತಾರ್ಥಘಟಕನುಂ, ಸರ್ವಸಮನುಂ, ತ್ರಿವಿಧಕಾರಣನುಮೆಂದು ತಿಳಿಪುವುದರಿಂ; ಈಶ್ವರತತ್ವನಿರೂಪಣಂಗೆಯ್ದಂ.

---

೧೧ – ಪನ್ನೊಂದನೆಯ ಬಿನ್ನಪದೊಳ್, ಜೀವತತ್ವಸ್ವರೂಪಮಂ ವಿವರಿಸಿದಂ.

೧೨ – ಪನ್ನೆರಡನೆಯ ಬಿನ್ನಪದೊಳ್, ತತ್ವಸೃಷ್ಟಿಕ್ರಮಮಂ ತೋರಿಸಿದಂ.

೧೩ – ಪದಿಮೂರನೆಯ ಬಿನ್ನಪದೊಳ್, ಬ್ರಹ್ಮಾಂಡಸೃಷ್ಟಿಪ್ರಕಾರಮಂ ಬಗೆಗೊಳಿಸಿದಂ

೧೪ – ಪದಿನಾಲ್ಕನೆಯ ಬಿನ್ನಪದೊಳಾ ಬ್ರಹ್ಮಾಣ್ಡದೊಳಪ್ಪ ಪದಿನಾಲ್ಕುಂ ಲೋಕಂಗಳ ನೆಲೆಯಂ ನಿರ್ಣಯಿಸಿದಂ.

೧೫ – ಪದಿನೈದನೆಯ ಬಿನ್ನಪದೊಳ್, ಭೂಮಣ್ಡಲಪರಿಮಾಣಮಂ ಗಣನೆಗೆಯ್ದಂ.

೧೬ – ಪದಿನಾರನೆಯ ಬಿನ್ನಪದೊಳ್ಸುಖಾನುಭವಸ್ಥಾನಮಾದ ಭೂಸ್ವರ್ಗಂಗಳ ತೆರನ ನರಿವುಗೊಳಿಸಿದಂ.

೧೭ – ಪದಿನೇಳನೆಯ ಬಿನ್ನಪದೊಳ್ ದುಃಖಾನುಭವಸ್ಥಾನಂಗಳಾದ ನರಕಂಗಳ ಸ್ಥಿತಿಯಂ ಬಿತ್ತರಿಸಿದಂ.

೧೮ – ಪದಿನೆಂಟನೆಯ ಬಿನ್ನಪದೊಳ್ಪಾಪಫಲಂಗಳ್ಕ್ರೂರಮಾಗಿರ್ಪುವೆಂದು ತೋರಿ, ಆ ಪಾಪಂಗಳನಿತುಂ ಶ್ರೀಮನ್ನಾರಾಯಣನ

ಚರಣಾರವಿಂದ ಭಕ್ತಿಯೊಳೇ ಪರಿಹರಿಪುದೆಂಬುದ ನಿರ್ದೇಶಗೊಳಿಸಿದಂ. ಇಂತು ಪರತತ್ವಸ್ವರೂಪಮೆಂಬುದಾದಿಯಾಗಿ, ಈವರೆಗ ಮೇಳುಂ ಬಿನ್ನಪದೊಳ್ಪ್ರಾಕೃತ ಸೃಷ್ಟಿಕ್ರಮಮುಂ ಆ ತತ್ವಂಗಳಿಂ ಪುಟ್ಟಿದ ಬ್ರಹ್ಮಾಂಡ ವಿಸ್ತಾರಮುಂ, ಆ ಬ್ರಹ್ಮಾಂಡದೊಳಿರ್ಪ ಪದಿನಾಲ್ಕುಂ ಲೋಕಂಗಳ ನೆಲೆಯುಂ, ಅವರೊಳ್ಭೂಮಂಡಲದ ಪರಿಮಾಣಮುಂ, ಭೂಸ್ವರ್ಗಂಗಳಂ, ನರಕಯಾತನೆಗಳಂ, ಆ ಯಾತನಾಪರಿಹಾರೋಪಾಯಮುಂ ಪೇಳ್ದುದರಿಂದೆ ಅಚಿತ್ತತ್ವಸ್ವರೂಪನಿರೂಪಣಂಗೆಯ್ದಂ.

---

ಇಂತು ಪದಿನೆಂಟು ಬಿನ್ನಪಂಗಳಿಂ ಈಶ್ವರಚೇತನಾಚೇತನಂಗಳೆಂಬ ತತ್ವತ್ರಯಮುಂ ನಿರೂಪಿಸಿದಂ. ಈ ಮೂರುಂ ತತ್ವಂಗಳ ನೆಲೆಯುಂ ವಿಚಾರಿಸೆ, ಚಿದಚಿತ್ತತ್ವಂಗಳೆರಡುಂ ಅಲ್ಪಸುಖಂಗಳುಂ ಅನಿತ್ಯಮುಮೆಂದು ಅವರೊಳ್ವೈರಾಗ್ಯಮುಂ ಈಶ್ವರತತ್ವಮೊಂದೇ ನಿರವಧಿಕಾನಂದಮೆಂದು ಅದರೊಳನುರಕ್ತಿಯುಂ ಪುಟ್ಟುಗುಂ. ಇಂತು ವಿಷಯವಿರಕ್ತಿಯುಂ ಪರಮಾತ್ಮಭಕ್ತಿಯುಂ ಪುಟ್ಟಿದವರ್ಗೆ ಮೋಕ್ಷೋಪಾಯಮುಪೇಕ್ಷಿತಮೆಂದು ಇನ್ನೀರಾರುಂ ಬಿನ್ನಪಂಗಳಿಂದಂ ಬಿತ್ತರಿಸಿದಪಂ. ಅದೆಂತೆನೆ—

೧೯ – ಪತ್ತೊಂಭತ್ತನೆಯ ಬಿನ್ನಪದೊಳ್ನಾಲ್ಕುಂ ಪುರುಷಾರ್ಥಂಗಳೊಳ್ಮೋಕ್ಷಮೇ ಪಿರಿದೆಂದು ಪಡಿಗಟ್ಟಿದಂ.

೨೦ – ಇಪ್ಪತ್ತನೆಯ ಬಿನ್ನಪದೊಳ್ಸಾತ್ವಿಕಶಾಸ್ತ್ರಂಗಳಿಂದಮೇ ಮೋಕ್ಷೋಪಾಯಮುಂ ತಿಳಿಯ ವೇಳ್ಪುದೆಂದೊರೆದಂ.

೨೧ – ಇಪ್ಪತ್ತೊಂಧನೆಯ ಬಿನ್ನಪದೊಳೆಲ್ಲಾ ತಂತ್ರಂಗಳೊಳಂ ಶ್ರೀಪಾಂಚರಾತ್ರಮೇ ಪ್ರಬಲಪ್ರಮಾಣಮೆಂಬುದಂ ನಿರಿಗೆಗೊಳಿಸಿದಂ.

೨೨ – ಇಪ್ಪತ್ತೆರಡನೆಯ ಬಿನ್ನಪದೊಳ್ಮೋಕ್ಷೋಪಯೋಗಿಯಾದ ವಿಷಯವೈರಾಗ್ಯಂ ದುರ್ಘಟಮೆಂಬಾಕ್ಷೇಪಮುಂ ನಿವಾರಿಸಿದಂ.

೨೩ – ಇಪ್ಪತ್ತಮೂರನೆಯ ಬಿನ್ನಪದೊಳ್ಕೇವಲಕರ್ಮದಿಂ ಮುಕ್ತಿಯಿಲ್ಲೆಂಬುದಂ ದೃಢೀಕರಿಸಿದಂ.

೨೪ – ಇಪತ್ತನಾಲ್ಕನೆಯ ಬಿನ್ನಪದೊಳ್ಕಾಲಕರ್ಮಸ್ವಭಾವಾದಿಗಳಿಂದಮೇ ಅಪೇಕ್ಷಿತಫಲಮಕ್ಕುಮೆಂಬ ಭ್ರಮೆಯುಂ ತೊಲಗಿಸಿದಂ.

೨೫ — ಇಪತ್ತೈದನೆಯ ಬಿನ್ನಪದೊಳ್ಬಯಸಿದನಿತುಮನೀವ ಸರ್ವೇಶ್ವರಂ ಮಿಕ್ಕ ಪುರುಷಾರ್ಥಮಂ ಬಯಸಿದವರ್ಗೆ ಅವರ್ ಬಯಸುವ ನಿರ್ಬಂಧದಿಂ ಆಯಾ ಪುರುಷಾರ್ಥಮನೀವಂ, ಮೋಕ್ಷಮಂ ಬಯಸುವರ್ಗೆ ಮನವೊಲ್ದು ಮೋಕ್ಷಮನೇ ಸಂತೋಷದಿಂದೀವನೆಂಬುದಂ ಕಾಣಿಸಿದಂ.

೨೬ — ಇಪ್ಪತ್ತಾರನೆಯ ಬಿನ್ನಪದೊಳ್ಶ್ರೀಮನ್ನಾರಾಯಣಂಗಲ್ಲದೆ ಮಿಕ್ಕಿನವರ್ಗೆ ರಕ್ಷಣಸಾಮರ್ಥ್ಯಮಿಲ್ಲೆಂಬುದಂ ಸೊಲ್ಲಿಸಿದರೆಃ

೨೭ — ಇಪ್ಪತ್ತೇಳನೆಯ ಬಿನ್ನಪದೊಳ್ಮೋಕ್ಷಮಂ ಬಯಸುವಂ ತನ್ನ ದೋಷಂಗಳನೆಣಿಸಿ ಅಳ್ಕವೇಡ ಭಗವದ್ಗುಣಂಗಳನೇ ಎಣಿಸಿ ಧೈರ್ಯಮಾಗಿಪ್ಪುದೆಂದು ಏಸ್ಪಡಿಸಿದಂ.

೨೮ — ಇಪ್ಪತ್ತೆಂಟನೆಯ ಬಿನ್ನಪದೊಳ್ಸಂಸಾರದ ಬೇರೆನಿಸಿದ ಅವಿದ್ಯಾಕರ್ಮವಾಸನಾರುಚಿ ಪ್ರಕೃತಿಸಂಬಂಧಂಗಳಂ ಜಗದೀಶ್ವರಂ ತಾನೇ ಬಿಡಿಸುವನೆಂಬುದಂ ಪ್ರಕಾಶಂಗೆಯ್ದಂ.

೨೯ — ಇಪ್ಪತ್ತೊಂಭತ್ತನೆಯ ಬಿನ್ನಪದೊಳ್ಶ್ರೀಮನ್ನಾರಾಯಣನ ದಿವ್ಯರೂಪಂ ಅಪ್ರಾಕೃತಮಾಗಿ, ಮುಕ್ತಭೋಗ್ಯಮಾಗಿಪ್ಪುದೆಂಬುದಂ ಅನುವದಿಸಿದಂ.

೩೦ — ಮೂವತ್ತನೆಯ ಬಿನ್ನಪದೊಳ್ಪರವಾಸುದೇವನೊಳಗಂ ಮುಕ್ತರ್ಗೆ ಪರಮಭೋಗ್ಯಮಾಗಿಪ್ಪುದೆಂಬುದಂ ಪೇಳ್ದು, ಕೃತಿಯನ್ನೆರವೇರಿಸಿದಂ.

ಅದೆಂತೆನೆ:— ॥ ಕಂ ॥ ಪರವಾಸುದೇವಭಕ್ತರ ।
ಪೊರೆಯಲ್ ವ್ಯೂಹಾದಿಭಾವಮಂ ತಳೆದೈಯೆಂ॥
ದೊರೆದುಯದುಶೈಲನಾಥನ ।
ಚರಣಾಬ್ಜಕೆ ಬಿನ್ನವಿಸಿದ ನಪ್ಪ್ರತಿಮಾಜ್ಞಂ ॥

( ಗದ್ಯಂ )

ಶ್ರೀಮನ್ನಾರಾಯಣಾ! ನೀಂ ಶ್ರೀಪತಿಯುಂ ಅಖಿಲದೋಷಪ್ರತ್ಯನೀಕನುಂ ಸಕಲಕಲ್ಯಾಣಗುಣಾಕರನುಂ ಅವಾಪ್ತಸಮಸ್ತಕಾಮನುಮೆನಿಸಿ, ವೈಕುಂಠದೊಳ್ ದಿವ್ಯ ಮಹಿಷೀವರ್ಗಸಮೇತನಾಗಿ,

ಅನಂತ ಗರುಡ ವಿಷ್ವಕ್ಸೇನಾದಿ ನಿತ್ಯರ್ಗ್ಗಂ ಮುಕ್ತರ್ಗ್ಗಂ ನಿನ್ನ ಸೇವಾಸಾಮ್ರಾಜ್ಯದೊಳ್ ನಿರವಧಿಕಾನಂದಮನೆ ಸುಗುತ್ತೆ ; ಚಿತ್ತದೊಳ್ ಪೊಣ್ಮಿದ ಆಕಸ್ಮಿಕದಯೆಯಿಂ ಪ್ರಳಯಕಾಲದೊಳವ್ಯಕ್ತಸೂಕ್ಷ್ಮಪ್ರಕೃತಿಯೊಳಡಂಗಿ, ಮೇಣದೊಳ್ಪುದುಗಿದ ಚಿನ್ನದೊರೆವುಡಿಯಂತೆ, ರೂಪಳಿದಿರ್ದ ಬದ್ಧಾತ್ಮವರ್ಗಮುಂ ನಿತ್ಯ ಮುಕ್ತರಂತೆ ಮೋಕ್ಷಾನಂದದೊಳಿರಿಸವೇಳ್ಪುದೆಂದು ನಿನ್ನ ಸತ್ಯಸಂಕಲ್ಪದಿಂ ಪ್ರಕೃತಿಯೊಳ್ ಪೊಕ್ಕು ಮಹದಹಂಕಾರಂಗಳಂ ಪಂಚತನ್ಮಾತ್ರಗಳಂ ಪಞ್ಚಮಹಾಭೂತಂಗಳನುಂಟುಮಾಡಿ, ಅವರಿಂ ಬ್ರಹ್ಮಾಂಡಮನೊಡರ್ಚ್ಚಿ, ಅದರೊಳ್ ಬ್ರಹ್ಮಾದಿಸುರರುಂ ನರರುಂ ತಿರ್ಯಕ್ಕುಗಳುಂ ಸ್ಥಾವರಂಗಳುಮೆಂದು ನಾಲ್ಕುಂ ತೆರದೊಳ ವರವರ ಪೂರ್ವಕರ್ಮಾನುಗುಣವಾದ ದೇಹಂಗಳಂ ತತ್ತದ್ದೇಹೋಚಿತವಾದ ಜ್ಞಾನಶಕ್ತ್ಯಾದಿಗಳುಮಿತ್ತು, ನೀನಿತ್ತ ಕರಣಕಳೇಬರಾದಿಗಳಿಂದೆ ಅವರ್ ಏನಾನುಂ ಪೊಲ್ಲದುದಂ ಎಸಗಿ ಪುರುಳಳಿಯದಂತೆ, ತಕ್ಕುದಿದು ಮಿಕ್ಕುದಿದು ಎಂದು ತಿಳಿಪುವಾವೇದಶಾಸ್ತ್ರಂಗಳನಿತ್ತು ಕರುಣಿಸಿದೈ : ಇಂತಾದೊಡಂ, ಒಡೆಯನಾಣತಿ ವಿಡದು ನಡೆಯಲಾರದ ಜಡರೆಡರಂ ಬಿಡಿಸಿ ಕಾಪಿಡಲ್ಕೆ ಅವರೊಡನೆ ಇರ್ಪೆನೆಂದು ಮೂರ್ತಿತ್ರಯಮಧ್ಯದೊಳಂ ಕ್ಷೀರಾಬ್ಧಿಯೊಳಂ ಸಗ್ಗಂಮೊದಲಾದ ಬಹುಗಣ್ಣರ ಬೀಡುಗಳೊಳಂ ನಿಂದೈ: ಅಂತಾದೊಡಂ, ದೇವರ್ಗ್ಗಂ ಮುನಿಗಳ್ಗಂ ಯೋಗಿಗಳ್ಗಮಲ್ಲದೆ ಮಿಕ್ಕ ಮನುಜಾದಿಗಳ್ಗೆ ಪತ್ತೆಸಾರಲುಂ ಸಲ್ಲದುದರಿಂ ಮನುಜರೊಳ್ ಬಾಲಗೋಪಾಲಕರ್ಗ್ಗಂ ಕರುತುರು ಕರಡಿ ಮುಸು ಕೋಡಗಂಮೊದಲಾದ ತಿರ್ಯಗ್ಜಾತಿಗಳ್ಗಂ ಸೇರಿಬರ್ಪ್ಪಂತುಮಂತೆ, ರಾಮಕೃಷ್ಣಾದ್ಯವತಾರಂಗಳಂ ತಳೆದೈ : ಅಂತಾದೊಡಂ, ಆಯಾದೇಶದೊಳಂ ಆಯಾಕಾಲದೊಳಂ ಇರ್ದರ್ಗ್ಗಲ್ಲದೆ ಉಳಿದರ್ಗ್ಗೆ ಉಪಕಾರಮಲ್ತೆಂಬುದರಿಂ, ಸರ್ವದೇಶಸರ್ವಕಾಲಸರ್ವಾವಸ್ಥೆಯೊಳಿರ್ಪ್ಪ ಸರ್ವಚೇತನಾಚೇತನವರ್ಗದೊಳ್ ವ್ಯಾಪಿಸಿರ್ದು ಮನೋವಾಕ್ಕಾಯಂಗಳಂ ಪ್ರೇರಿಸುತ್ತ ಅನ್ತರ್ಯಾಮಿಯೆನಿಸಿದೈ: ಅಂತಾದೊಡಂ ಎತ್ತಾನುಂ ಓರ್ವಂಗೆ ಅನೇಕಜನ್ಮಸಾಧ್ಯಯೋಗಧ್ಯಾನವಿಷಯನೆಂಬುದಲ್ಲದೆ ಮಿಕ್ಕೆಲ್ಲರ್ಗ್ಗಂ ಒಡನಿರ್ಪ್ಪಂ ಇಲ್ಲದಂತಾದು

ದರಿಂ, ಸಕಲ ಜನಮುಂ ಚರ್ಮಚಕ್ಷುಸ್ಸಿಂದಮೇ ಸಾಕ್ಷಾತ್ಕರಿಸಿ ತಂ ತಂಮ ಮನಮೊಳಸಿದ ಸೇವೆಗಳನೆಸಗಿ ಕೃತಾರ್ಥರಪ್ಪಂತೆ ಸರ್ವಸು ಲಭಮೆನಿಸಿದ ಅರ್ಚಾವತಾರಮನೆಸಗಿ, ಕೆಲವುಂ ಕಾಲಂ ಸತ್ಯಲೋಕದೊಳ್ ಬ್ರಹ್ಮನಿಂ ಪೂಜೆಗೊಂಡು, ಬಳಿಕ್ಕೆ ಸನತ್ಕುಮಾರುಂಗೊಲ್ದು, ಆತನೊಡನುತ್ತರಬದರಿಕಾಶ್ರಮಕ್ಕೆ ಬಂದು, ಅಲ್ಲಿ ಸಾಷ್ಟಾದಷ್ಟಾಕ್ಷರೋಪದೇಶ ದೇಶಿಕನೆನಿಸಿ, ನಿನ್ನ ರೂಪಾಂತರವಾದ ನರಮುನಿಯಿಂದ ಅರ್ಚನಂ ಬೆತ್ತು, ಮತ್ತವಿಾ ಕರ್ಣಾಟಮಂಡಲ ಮಂಡನಮೆನಿಪ ಯದುಶಿಖರಿಶಿಖರಮಂ ನೆಲೆವೀಡುಗೊಂಡು ನಿಂದು, ಸಕಲಜನರಕ್ಷಣ ದೀಕ್ಷಿತನೆನಿಸಿದೈ : ಅಂತು ಸರ್ವಜನ ಸಾಧಾರಣಮಲ್ಲದೆ ಈ ಯದುವಂಶದೊಳ್ಪುಟ್ಟಿದವರ್ಗ್ಗೆ ಕುಲದೇವತೆಯೆನಿಸಿ ದಯಾವಿಶೇಷದಿಂ ಪೊರೆವನಪ್ಪುದರಿಂದೆಂಮ್ಮೊಳಂ ಅಕಾರಣಕರುಣಾಬ್ಧಿ ಕಲ್ಲೋಲಂಗಳಂ ಕವಿಸಿ ಮನ್ನಿಪುದು ಮನ್ನಿಪುದನನ್ಯಜನಸುಲಭ ಶ್ರೀಯದುಶೈಲವಲ್ಲಭಾ ! * * * *

— ಎರಡನೆಯ ಬಿನ್ನಪಂ —

॥ಕಂ॥ ಸಿರಿಯರಸ ನೀನೇ ಜಗಮಂ ।
ಪರಿವಿಡಿಯಿಂ ಪಡೆದು ಪೊರೆದು ಪೊಪೆಯೊಳ್ಕೊಳ್ವೈ ॥
ಪರ ಬೊಮ್ಮ ಮದರಿನೆಂದೀ ।
ನರಪತಿ ಯದುಗೊತ್ರಪತಿಗೆ ಬಿನ್ನತಿಗೆಯ್ದಂ ॥

( ಗದ್ಯಂ )

ಪರಬ್ರಹ್ಮಸ್ವರೂಪ! ಈಜಗವಾವ ವಸ್ತುವಿನಿಂ ಪುಟ್ಟುವದು, ಆವುದುರಿಂ ಬದುಂಕಿರ್ಪುದು, ಆವುದರೊಳಡುಗುವದು, ಆವಸ್ತುವೇ ಪರಬ್ರಹ್ಮಮೆಂದು ಕುರುವುಗೆಯ್ದು, ಇಂತಪ್ಪ ಜಗತ್ಕಾರಣವಸ್ತುವಂ ನೀನೇ ಎಂದು ವೇದಾಂತಗಳ್ ಪಲವುಂ ತೆರದೊಳ್ ಸಾಮಾನ್ಯ ವಿಶೇಷಶಬ್ದಂಗಳಿಂ ನಿನ್ನನೇ ಪೊಗಳ್ದುವು. ಇಂತಿರ್ಪ ನೀಂ ಮಹದಾದಿ ತತ್ವಕ್ರಮದಿಂ ಪಞ್ಚಮಹಾ ಭೂತಂಗಳ ನುಂಟುಮಾಡಿ, ಅವರಿಂ ಬ್ರಹ್ಮಾಣ್ಡಮಂ ಸಮೆದು, ಅದರೊಳ್ ಬ್ರಹ್ಮಾದಿದೇವತೆಗಳಂ

ಸೃಜಿಸಿ, ಅವರವರಿಗೊಂದೊಂದಧಿಕಾರಮುಂ ಮಿತಿಮಾಡಿ, ಕೆಲವುಂ ಸೃಷ್ಟಿ ಸ್ಥಿತಿ ಸಂಹಾರಂಗಳಪ್ಪ ನಿನ್ನೊಳಗದೊಳ್ನಿಯಮಿಸಿದೈ : ಅವರುಂ ಜಗದೊಳೇಕದೇಶಮುಂ ನಿನ್ನನುಮತಿವಿಡಿದು ಪುಟ್ಟುವುದುಂ ಪೊರೆವುದುಂ ಅಳಿಯಿಪುದುಂ ಆಗಿರ್ಪುದರಿಂ, ಅವರಂ ಕೊಣ್ಡಾಡುವೆಡೆಯೊಳ್ ನಾಲ್ಮೊಗನೇಜಗತ್ಕಾರಣಮೆಂದುಂ ರುದ್ರನೇಜಗತ್ಕಾರಣಮೆಂದುಂ ಕೊಂಡಾಡುವರ್; ಈನೆಲೆಯಂ ತಿಳಿಯದವರ್ ಭ್ರಮಿಸುವರ್ ; ಓರ್ವನಂ ಸ್ತುತಿಗೆಯ್ವ ಪ್ರಸ್ತಾಪಮಿಲ್ಲದೆ ಜಗತ್ಸೃಷ್ಟಿಕ್ರಮಮುಂ ಪೇಳ್ವೆಡೆಯೊಳ್ ವಿಚಾರಿಸೆ, ಆದಿಯೊಳ್ ನಾರಾಯಣನೊರ್ವನೇ ಯುಳಿದಿರ್ದನೆಂದುಂ, ಅವನ ನಾಭಿಪದ್ಮದೊಳ್ ಬ್ರಹ್ಮನೊಗೆದನೆಂದುಂ, ಅವನ ಪಣೆಯ ಬೆಮರಿಂ ರುದ್ರಂ ಪುಟ್ಟಿದನೆಂದುಂ, ಪೇಳ್ದುದರಿಂ ನೀನೇ ಜಗದಾದಿ ಕಾರಣಮಾದ ಪರಬ್ರಹ್ಮಮೆಮ್ಬುದಂ ಸಾತ್ವಿಕರಿಂ ತಿಳಿದೆನ್ನ ತಾಪತ್ರಯಮುಂ ಕಳೆಯಲೆಂದು ನಿನ್ನಡಿನೆಳಲಂ ಸೇರಿದೆಂ, ಎನ್ನ ತಪ್ಪುಗೊಳವುದು ತಪ್ಪುಗೊಳವುದು ಅನನ್ಯಜನಸುಲಭ ಶ್ರೀಯದುಶೈಲವಲ್ಲಭಾ ! * * *

---

— ಮೂರನೆಯ ಬಿನ್ನಪಂ —

||ಕಂ|| ಅಗಣಿತಕಲ್ಯಾಣಗುಣಾ ।
ದಿಗಳಂತೆಂದಳವುಗೆಯ್ಯಲರಿಯದಾದೊಡೆಮೇಂ||
ಬಗೆವುಗುವೈ ನೀನೆಂದಾ ।
ಜಗದಾಣ್ಮಂಗಣ್ಮೆನಾಣ್ಮನೆರಕದೊಳೊರೆದಂ ||

( ಗದ್ಯಂ )

ಅಪ್ರಮೇಯ! ಜಗದೊಳ್ಪ್ರಮೇಯಮೆನೆ – ತಿಳಿಯಲ್ತಕ್ಕ ವಸ್ತು. ಆವಸ್ತುವಂ ತಿಳಿವ ಪ್ರಮಾಣಂಗಳ್ ಪ್ರತ್ಯಕ್ಷಮೆಂದುಂ, ಅನುಮಾನಮೆಂದುಂ, ಶಬ್ದಮೆಂದುಂ ಮೂರುಂತೆರನಾಗಿರ್ಕುಂ. ಅವರೊಳ್ಪ್ರತ್ಯಕ್ಷಮೆನೆ —ಇನ್ದ್ರಿಯಾರ್ಥಸಂಬನ್ಧದಿಂಪುಟ್ಟುವ ತಿಳಿವು. ಇದುಂ ಮೂರುಂತೆರನಾಗಿರ್ಕುಂ. ಅದೆಂತೆನೆ: – ಕಣ್ದೆರದೊಂದುವಸ್ತುವಂ ನೋಡೆ, ಈವಸ್ತು ಕರಿದು ಬಿಳಿದು ಎಂಬಿವು ಮೊದಲಾ

ಗಿ ಪುಟ್ಟುವ ತಿಳಿವು ಚಾಕ್ಷುಷಪ್ರತ್ಯಕ್ಷ ಮೆಂಬುದು; ಕಿವಿಯಿಂದಾ
ಲಿಸೆ, ಇದೀಬಗೆಯ ದನಿ ಇದೀಬಗೆಯನುಡಿ ಇದೀಯಕ್ಕರಂ ಎನ್ದಿ
ವು ಮುಂತಾಗಿ ಪುಟ್ಟುವ ತಿಳಿವು ಶ್ರಾವಣಪ್ರತ್ಯಕ್ಷಮೆನಿಪುದು;
ನಾಲಿಗೆಯಿಂ ಸವಿಯೆ, ಇದುಮಧುರಂ ಇದುಪುಳಿ ಇದುಪ್ಪು ಎಂ
ದಿವು ಮುಂತಾಗಿ ಪುಟ್ಟುವ ತಿಳಿವು ಜಿಹ್ವಾಪ್ರತ್ಯಕ್ಷ ಮೆನಿಪುದು ;
ನಾಸಿಕದಿಂದೊಂದನಾಘ್ರಾಣಿಸೆ, ಇದುನಲ್ಗಂಪು ಇದು ಪೊಲಸುಗಂ
ಪು ಎಂದಿವು ಮೊದಲಾಗಿ ಪುಟ್ಟುವ ತಿಳಿವು ಘ್ರಾಣಪ್ರತ್ಯಕ್ಷಮೆ
ನಿಪುದು; ಮೆಯ್ಯೊದವಲಂ ಸೋಂಕೆ, ಇದು ಬಿಸುಪು ಇದು ತಣ್ಪು
ಎಂದಿವು ಮೊದಲಾಗಿ ಪುಟ್ಟುವ ತಿಳಿವು ಸ್ಪಾರ್ಶನಪ್ರತ್ಯಕ್ಷಮೆನಿಪು
ದು; ಮನಸ್ಸಿನೊಳ್ ಭಾವಿಸೆ, ತನಗೀಗಳ್ ಸುಖಮಾಗಿರ್ಕ್ಕುಂ ಈಗ
ಳ್ದುಃಖಮಾಗಿರ್ಕ್ಕುಂ ಎಂಬಿವು ಮೊದಲಾಗಿ ಪುಟ್ಟುವ ತಿಳಿವು ಮಾನ
ಸಪ್ರತ್ಯಕ್ಷಮೆನಿಪುದು ಇಂತು ಪ್ರತ್ಯಕ್ಷಮಾರುಂ ತೆರಮಾಗಿರ್ಕ್ಕುಂ
ಅನುಮಾನಮೆಂಬುದು– ಪೆರತೊಂದುವನುಳಿದು ತಾನೊಂದೆಡೆಯೊಳ
ಮಿರದ ವಸ್ತುವಂ ಕಂಡು ಆಯೆಡೆಯೊಳ್ಪೆರತೊಂದ ತಿಳಿವುದು. ಅದೆಂ
ತೆನೆ:— ಬೆಂಕಿಯನುಳಿದು ಪೊಗೆಯಿರದೆಂಬ ನೇಮಮಂ ಅಡಿಗೆವನೆ
ಳ್ನಿಶ್ಚಯಂಗೆಯ್ದು ಬೆಟ್ಟಮೊದಲಾದ ಪೆರೆತೊಂದೆಡೆಯೊಳ್ಪೊಗೆಯಂ
ಕಂಡು ಅಲ್ಲಿ ಬೆಂಕಿಯುಂಟೆಂದು ತಿಳಿವುದು ಅನುಮಾನಪ್ರಮಾ
ಣಮೆನಿಪುದು. ಶಬ್ದಪ್ರಮಾಣಮೆನೆ: — ಇರ್ದುದನಿರ್ದಂತೆ ತಿಳುಪು
ವನುಡಿ. ಅದುಂ ಲೌಕಿಕಮೆಂದುಂ, ವೈದಿಕಮೆಂದುಂ ಎರಡುಂತೆರನಾ
ಗಿರ್ಕ್ಕುಂ. ಲೌಕಿಕಮೆಂಬುದು:— ಲೋಕದೊಳಾಪ್ತರ್ ನುಡಿವ ನುಡಿ.
ವೈದಿಕಮೆಂಬುದು: — ವೇದಂಮೊದಲಾದ ಪದಿನಾಲ್ಕುಂ ವಿದ್ಯೆಗಳ್.
ಈ ಪ್ರತ್ಯಕ್ಷಾನುಮಾನ ಶಬ್ದಂಗಳೆಂಬ ಮೂರುಂ ಪ್ರಮಾಣಂಗಳಿಂದಂ
ನಿನ್ನ ಸ್ವರೂಪ ರೂಪ ಗುಣ ವಿಭವಾದಿಗಳೊಳನಿಸಿನಿಸುಂ ತಿಳಿವುದಲ್ಲ
ದೆ, ಇಂತೆಂದು ಪರಿಚ್ಛೇದಂಗೆಯ್ವುದರಿದಾದುದರಿಂ ನೀನಪ್ರಮೇ
ಯನೆನಿಸುವೈ. ಆದೊಡಂ ನಿನ್ನ ಭಕ್ತಸುಲಭತೆಯುಂ ಮೆರೆವೆನ್ನ
ದೆ ವನೆಯೊಳ್ನೆಲೆಗೊಂಬುದು ನೆಲಗೊಂಬುದು ಅನನ್ಯಜನಸುಲಭ
ಶ್ರೀಯದುಶೈಲವಲ್ಲಭಾ ! * * * * *

॥ ಕಂ ॥ ವೇದ ತದೇಕಾರ್ತ್ಥಪುರಾ ।
ಣಾದಿಗಳೊಳ್ವ್ಯಕ್ತ್ತಮಾಗಿ ತೋರ್ಪ್ಪೆ ನೀನೆಂ ॥
ದಾದರದಿಂದೆ ಸುಶೀಲಂ ।
ಯೊದವಗಿರಿನಾಥನಡಿಗೆ ಬಿನ್ನತಿಗೆಯ್ದ್ದಂ ॥

( ಗದ್ಯಂ )

ಸಕಲವಿದ್ಯಾಪ್ರವರ್ತ್ತಕಾ ! ವಿದ್ಯೆಗಳ್ – ವೇದಂಗಳ್ನಾಕ್ಕುಂ, ಅಙ್ಗಂಗಳಾರುಂ, ತರ್ಕ್ಕಮುಂ, ಮೀಮಾಂಸೆಯುಂ, ಪುರಾಣಮುಂ, ಧರ್ಮ್ಮಶಾಸ್ತ್ರಮುಂ, ಆಯುರ್ವ್ವೇದಮುಂ, ಧನುರ್ವ್ವೇದಮುಂ, ಗಾಂಧರ್ವ್ವಮುಂ, ಅರ್ಥಶಾಸ್ತ್ರಮು ಮೆಂದು ಪದಿನೆಂಟುಂ ತೆರನಾಗಿರ್ಪ್ಪುವು. ಅವರೊಳ್ ಋುಗ್ಯಜುಸ್ಸಾಮಾಥರ್ವ್ವಣಂಗಳೆಂಬ ನಾಲ್ಕುಂ ವೇದಂಗಳುಂ ಪೂರ್ವ್ವಭಾಗದೊಳ್ ಧರ್ಮ್ಮಾರ್ಥಕಾಮುಮೆಂಬ ತ್ರಿವರ್ಗ್ಗಕ್ಕೆ ಸಾಧನಮಾದ ಕರ್ಮ್ಮಮುಂ ಪೇಳ್ವುದು, ಉತ್ತರಭಾಗದೊಳ್ನಿನ್ನ ಸ್ವರೂಪ ರೂಪ ಗುಣ ವಿಭವಾದಿಗಳಂ ಪೇಳ್ದು ಮೋಕ್ಷೋಪಾಯಮಂ ತೋರಿಸುಗುಂ. ಅಂಗಂಗಳೊಳ್ ಶಿಕ್ಷೆಯೆಂಬುದು – ಸ್ವರವರ್ಣ್ಣಮಾತ್ರಾದಿಗಳಂ ನಿರೂಪಿಸುವುದು. ವ್ಯಾಕರಣಮೆಂಬುದು – ಪ್ರಕೃತಿ ಪ್ರತ್ಯಯಾದಿ ಮುಖದಿಂದ ಅರ್ಥಮಂ ಪೇಳ್ವ ಪದಂಗಳಂ ನಿರೂಪಿಸುವುದು. ಛಂದಸ್ಸೆಂಬುದು ಗಾಯತ್ರಿ ತ್ರಿಷ್ಟುಬನಿಷ್ಟುಪ್ಪು ಮೊದಲಾದ ಛಂದೋಲಕ್ಷಣಮಂ ನಿರೂಪಿಸುವುದು. ಕಲ್ಪಸೂತ್ರಮೆಂಬುದು ವೇದೋಕ್ತ್ತಕರ್ಮಪ್ರಯೋಗಮಂ ನಿರೂಪಿಸುವುದು. ಜ್ಯೋತಿಷಮೆಂಬುದು ಕರ್ಮಾಚರಣಕ್ಕೆ ಕಾಲಮಂ ನಿರೂಪಿಸುವುದು. ವೇದಪುರುಷಂಗೆ ಛಂದಸ್ಸು ಪಾದಂಗಳುಂ, ಕಲ್ಪಸೂತ್ರಂ ಕೈಗಳುಂ, ವ್ಯಾಕರಣಂ ಮೊಗಮುಂ, ಶಿಕ್ಷೆ ಘ್ರಾಣಮುಂ, ಜ್ಯೋತಿಷಂ ಕಣ್ಗಳುಂ, ನಿರುಕ್ತಂ ಕಿವಿಗಳುಮಾಗಿರ್ಪ್ಪುದರಿಂದಾರುಂ ವೇದಾಂಗಂಗಳೆನಿಪುದು. ತರ್ಕ್ಕಮೆಂಬುದು – ವೇದಾರ್ತ್ಥಂಗಳಂ ಯುಕ್ತಿಗಳಿಂ ನೆಲೆಗೆಯ್ವುದು. ಮೀಮಾಂಸೆಯೆಂಬುದು – ವೇದಾರ್ತ್ಥಂಗಳಂ ಪೂರ್ವ್ವಪಕ್ಷಸಿದ್ಧಾಂತ ರೂಪದಿಂ ವಿಚಾರಿಸಿ ನಿಶ್ಚಯಂ ಗೆಯ್ವುದು. ಪು
[illegible]

ಗಳುಮುಂ ವಂಶಮುಂ ವಂಶದೊಳ್ಪುಟ್ಟಿದವರ ಚರಿತ್ರಮುಮಂ ಪೇಳ್ದ ಬ್ರಾಹ್ಮಂ ಪಾದ್ಮಂ ಮೊದಲಾದ ಪದಿನೆಂಟುಂ ತೆರನಾಗಿರ್ಕ್ಕುಂ. ಧರ್ಮ್ಮಶಾಸ್ತ್ರಮೆಂಬುದು – ಆಚಾರವ್ಯವಹಾರ ಪ್ರಾಯಶ್ಚಿತ್ತಂಗಳಂ ಪೇಳ್ವ ಮನು ಯಾಜ್ಞವಲ್ಕ್ಯಂ ಮೊದಲಾಗಿ ಪದಿನೆಂಟುಂತೆರನಾಗಿರ್ಕ್ಕುಂ, ಆಯುರ್ವೇದಮೆಂಬುದು – ವ್ಯಾಧಿನಿದಾನ ಚಿಕಿತ್ಸಾದಿಗಳಂ ನಿರೂಪಿಸುವುದು. ಧನುರ್ವೇದಮೆಂಬುದು – ಅಸ್ತ್ರಶಸ್ತ್ರ ಪ್ರಯೋಗೋಪಸಂಹಾರಾದಿಗಳಂ ನಿರೂಪಿಸುವುದು. ಗಾಂಧರ್ವ್ವಮೆಂಬುದು – ನೃತ್ತ ಗೀತ ವಾದ್ಯಾದಿಗಳಂ ನಿರೂಪಿಸುವುದು. ಅರ್ಥಶಾಸ್ತ್ರಮೆಂಬುದು – ಪ್ರಜಾಪರಿಪಾಲನಾದಿ ರಾಜನೀತಿಗಳಂ ನಿರೂಪಿಸುವುದು. ಈ ಪದಿನೆಂಟು ವಿದ್ಯೆಂಗಳಂ ನೀನೇ ಲೋಕಹಿತಾರ್ಥವಾಗಿ ನೆಗಳ್ದುದರಿಂ ನೀನೇ ಸಕಲ ವಿದ್ಯಾಪ್ರವರ್ತ್ತಕನೆನಿಸುವೈ. ಇನಿತುಂ ವಿದ್ಯೆಗಳೊಳಂ ಪ್ರಧಾನಮಾದ ವೇದಾಂತದೊಳ್ ಪ್ರಕಾಶಮಾದ ನಿನ್ನ ಸ್ವರೂಪಮಂ ತಿಳಪಿ ಎನ್ನ ಮನದ ಜಡರಂ ಕಳೆದು ನಿನ್ನಡಿಯೊಳ್ ಜ್ಞಾನಭಕ್ತಿಗಳಂ ಬಲಿಯಿಪುದು ಬಲಿಯಿಪುದನನ್ಯಜನಸುಲಭಾ, ಶ್ರೀ ಯದುಶೈಲವಲ್ಲಭಾ!

---

— ಐದನೆಯ ಬಿನ್ನಪಂ —

॥ ಕಂ ॥ ಸಕಲಜಗದ್ವ್ಯಾಪಾರಂ ।
ಸಕಲಾತ್ಮಕ ನಿನ್ನದಾಗೆ ವೇದಂ ಸಕಲಂ ॥
ಪ್ರಕಟಿಪುದು ನಿನ್ನನೆಂದಾ ।
ಸುಕಲಂ ಯದುಶೈಲಪತಿಗೆ ಬಿನ್ನತಿಗೆಯ್ದಂ ॥

ಸಕಲ ವೇದವೇದ್ಯಾ! ವೇದಂಗಳ್ – ಪೂರ್ವ್ವಭಾಗದೊಳ್ ಯಜ್ಞಾದಿ ಸತ್ಕರ್ಮ್ಮಂಗಳಂ ಸಾಂಗಮಾಗಿ ಯಾಚರಿಸುವ ಕ್ರಮಮಂ, ಅದರೊಳ್ ಬರ್ಪ್ಪ ಫಲಮಂ ಪೇಳ್ವುದು; ಉತ್ತರಭಾಗದೊಳ್ ಸಂಸಾರಮಂ ಜರೆದು, ಜೀವಸ್ವರೂಪಮಂ ಪರಬ್ರಹ್ಮಸ್ವರೂಪಮಂ ನಿರೂಪಿಸಿ, ಮೋಕ್ಷೋಪಾಯಮಂ ವಿಧಿಸಿ, ಮೋಕ್ಷಾನಂದಮಂ ಪೊಗಳ್ವುದು. ಇಂತು ನಾನಾವಿಧಮಾಗಿರ್ಪ ವೇದಮನಿತುಂ ನಿನ್ನನೇ

ಪೊಗಳ್ವುದೆಂದು ಪಿರಿಯರ್ಪೇಳ್ವರ್. ಆ ನೆಲೆಯಂ ಭಾವಿಸೆ, ಲೋಕದೊಳ್ ಕೈವಾರಿಗಳರಸನಂ ಪೊಗಳ್ವೆಡೆಯೊಳ್ ನಾಡು ಬೀಡುಗರ್ ಅರಸನಾಣತಿವಿಡಿದು ನಡೆವ ಬಗೆಯಂ, ಅದರ್ಕೊಲ್ದರಸನವರ್ಗ್ಗೀತ ಕ್ಕುದನೀವ ಬಗೆಯಂ, ಆಳ್ಗಳ ನೆಲೆಯಂ, ಅರಸನ ನೆಲೆಯಂ, ಅರಸನ ಸಮ್ಮುಖಮಂ ಪಡೆವ ತೆರನಂ, ಸಮ್ಮುಖದೊಳಿರ್ಪರ ಸುಖಮಂ, ಬಣ್ಣಿಸಿದೊಡಂ ಅರಸನನೇ ಪೊಗಳ್ವರೆಂಬರ್; ಇಂತು ವರ್ಣಾಶ್ರಮದವರೆನಿಪ ನಿನ್ನ ನಾಡುಬೀಡುಗರೊಡರ್ಚುವ ಯಜ್ಞಾದಿ ಕರ್ಮಂಗಳೆನಿಪ ನಿನ್ನಾಣತಿಯಾಳಿಗಮಂ, ಅದರ್ಕೊಲ್ದು ನೀಂ ಕೊಡುವ ಐಹಿಕಾಮುಷ್ಮಿಕ ಫಲಮೆನಿಪ ಜೀವಿತಮಂ, ಜೀವಾತ್ಮರೆನಿಪ ನಿನ್ನೊಳಗದವರ ನೆಲೆಯಂ, ಪರಬ್ರಹ್ಮಮೆನಿಪ ನಿನ್ನ ನೆಲೆಯಂ, ಮೋಕ್ಷೋಪಾಯಮೆನಿಪ ನಿನ್ನ ಸಮ್ಮುಖಮಂ ಪಡೆಯಲ್ತಕ್ಕ ನಡೆತೆಯಂ, ಮೋಕ್ಷಾನಂದಮೆನಿಪ ನಿನ್ನ ಸಮ್ಮುಖದೊಳಿರ್ಪರ ಸುಖಮಂ ನಿರೂಪಿಸುವುದರಿಂದೀವೇದಮೆಲ್ಲಮುಂ ನಿನ್ನನೇ ಪೊಗಳ್ವುದೆಂಬುದು ಸಿದ್ಧಂ. ಈಯರ್ಥಮಂ ಚಿತ್ತದೊಳಿಟ್ಟೇ,

"ವೇದೈಶ್ಚ ಸರ್ವೈರಹಮೇವವೇದ್ಯಃ"

ಎಂದು ಗೀತೆಯೊಳ್ಪೇಳ್ದುದು. ಇಂತು ವೇದವೇದ್ಯನಪ್ಪ ನಿನ್ನತಿಶಯಮನೇ ಸಕಲಸ್ಮೃತೀತಿಹಾಸ ಪುರಾಣಾಗಮಂಗಳುಂ ಬಣ್ಣಿಪುವು; ಬಣ್ಣಿಸಿಯುಂ ಕಡೆಗಾಣಲಾರದೆನೆ, ಮಿಕ್ಕಿನಮಾನಿಸರ್ ಸ್ವಯತ್ನದಿಂ ನಿನ್ನ ನೆಲೆಯಂ ತಿಳಿದು ಭಜಿಸಿ ಕಡೆಗಾಣ್ಬರೆಂಬುದು ಮನೋರಥಮಾತ್ರಮೇ. ಅದರಿಂ ನೀನೇ ದಯೆಗೆಯ್ದು ನಿನ್ನ ಸ್ವರೂಪಮಂ ತಿಳುಪಿ ಎನ್ನಂ ನಿನ್ನೊಳಗದವನೆನಿಪುದೆನಿಪುದನನ್ಯ ಜನಸುಲಭಾ, ಶ್ರೀ ಯದುಶೈಲವಲ್ಲಭಾ!

---

## —ಆರನೆಯ ಬಿನ್ನಪಂ.—

॥ ಕಂ ॥ ಪಡಿಬರಿಸಿ ತೋರ್ಪವೇದದ।
ನುಡಿಗಳುಮವಿರುದ್ಧಮಕ್ಕುಮುಪದೇಶದೊಳಂ॥
ದಡಿಗೆರಗಿ ಬಿನ್ನವಿಸಿದಂ।
ಪೊಡೆಯುಲರಂಗರಿನ್ನಪಾಲಮುಸ ಕಶೂಲಂ ॥

ಅದ್ಭುತಚರಿತಾ! ವೇದಂಗಳ್ ನಿನ್ನ ಸ್ವರೂಪಗುಣವಿಭವಂಗಳಂ ಪಲವೆಡೆಯೊಳ್ ಪಲವುಂ ತೆರದಿಂ ಪೇಳ್ದು ತಿಳುಪುಗುಂ. ಗುರುಮುಖದಿಂ ಕೇಳ್ವರ್ಗೆ ಈಯರ್ಥಂ ಸುವ್ಯಕ್ತಮಾಗಿ ತೋರ್ಕುಂ. ತಮ್ಮ ಬುದ್ಧಿಬಲದಿಂದೂಹಿಸುವರ್ಗೆ ಪರಸ್ಪರ ವಿರುದ್ಧಮಾಗಿ ತೋರ್ಕುಂ. ಅದೆಂತೆನೆ:— ನಿನ್ನಂ ಸಗುಣನೆಂದುಂ, ನಿರ್ಗುಣನೆಂದುಂ, ಪಿರಿದರ್ಕಂ ಪಿರಿಯನೆಂದುಂ, ಕಿರಿದರ್ಕಂ ಕಿರಿಯನೆಂದುಂ, ಸಾಕಾರನೆಂದುಂ, ನಿರಾಕಾರನೆಂದುಂ, ಅವಾಙ್ಮನಸಗೋಚರನೆಂದುಂ, ವೇದವೇದ್ಯನೆಂದುಂ, ಪುಟ್ಟುಪೊಂದುಗಳಿಲ್ಲದವನೆಂದುಂ, ಮತ್ಸ್ಯಾದಿರೂಪಗಳಿಂ ಪುಟ್ಟಿದವನೆಂದುಂ, ಪೇಳೆ ಮಂದಮತಿಗಳ್ಗೆ ವಿರೋಧಂ ತೋರ್ಪುದರಿಂ ನಿಶ್ಚಯಂ ಪುಟ್ಟದು. ಪಿರಿಯರುಪದೇಶದಿಂ ತಿಳಿವರ್ಗೆ ಈ ವಿರೋಧಮೊಂದುಂ ತೋರದು. ಸಗುಣನೆನೆ— ವಾತ್ಸಲ್ಯಾದಿ ಗುಣಂಗಳುಳ್ಳವನೆಂದುಂ, ನಿರ್ಗುಣನೆನೆ— ರಾಜಸ ತಾಮಸಾದಿಗಳಿಲ್ಲದವನೆಂದುಂ ತೋರ್ಪುದರಿಂ; ಸದ್ಗುಣಂಗಳನಿತು ಮೊಳವು, ದುರ್ಗುಣಂಗಳೊಂದುಮಿಲ್ಲೆಂದು, ನಿರ್ಣಯಮಕ್ಕುಂ. ಪಿರಿದರ್ಕಂ ಪಿರಿಯನೆನೆ— ಪದಿನಾಲ್ಕುಂ ಲೋಕಂಗಳುಂ ತನ್ನುದರದೊಳಿರ್ಕ್ಕುವನೆಂದುಂ, ಕಿರಿದರ್ಕಂ ಕಿರಿಯನೆನೆ— ಕಿರಿದಾದ ಜೀವಾತ್ಮನೊಳಂತರ್ಯಾಮಿಯಾಗಿರ್ಕುಮೆಂದುಂ; ತೋರ್ಪುದರಿಂ ಸಕಲಪದಾರ್ಥಂಗಳೊಳಗುಂ ಪೊರಗುಂ ವ್ಯಾಪಿಸಿರ್ಪನೆಂದು ನಿಶ್ಚಯಮಕ್ಕುಂ. ಸಾಕಾರನೆನೆ— ಅಪ್ರಾಕೃತಶರೀರಮುಳ್ಳವನೆಂದುಂ, ನಿರಾಕಾರನೆನೆ— ಸಕಲ ಹೇಯಾಸ್ಪದಮಪ್ಪ ಪ್ರಾಕೃತಶರೀರಮಿಲ್ಲದವನೆಂದುಂ, ತೋರ್ಪುದರಿಂ: ತನ್ನ ಸ್ವರೂಪಕ್ಕನುಗುಣಮಾಗಿ ತನ್ನಿಚ್ಛಾನುಗುಣಮಾಗಿರ್ಪ ದಿವ್ಯಮಂಗಳವಿಗ್ರಹಮುಳ್ಳವನೆಂದುಂ ವ್ಯಕ್ತಮಕ್ಕುಂ ಅವಾಙ್ಮನಸಗೋಚರನೆನೆ— ಸ್ವರೂಪಮುಂ ವಿಗ್ರಹಮುಂ ಗುಣಂಗಳುಂ ಐಶ್ವರ್ಯಮುಮಿನಿತೆಂದು ಮಿತಿಗೆಯ್ದು ನುಡಿಯಲುಂ ತಿಳಿಯಲುಂ ಶಕ್ಯನಲ್ಲೆಂಬುದು. ವೇದವೇದ್ಯನೆನೆ— ಶ್ರಿಯಃಪತಿಯುಂ, ಅಖಿಲಹೇಯಪ್ರತ್ಯನೀಕನುಂ ಜಗತ್ಕಾರಣನುಂ ಸರ್ವಾಂತರ್ಯಾಮಿಯುಂ ಮೋಕ್ಷಪ್ರದನೆಂಬಿವು ಮೊದಲಾದ ಮಹಿಮೆಗಳುಂ ವೇದದೊಳ್ ತಿಳಿಯಬರ್ಕುಮೆಂದು ತೋರ್ಪುದರಿಂ ತಾನಿತ್ತಳವನಿತುಮಂ ತಿಳಿದು

ಇನ್ನು ... ಮಹಿಮೆಗಳುಳ್ಳವನೆಂದು ... ನುಡಿದವನು

ಪುಟ್ಟುಪೊಂದುಗಳಿಲ್ಲೆನೆನೆ :- ಕರ್ಮಾಧೀನಮಾದ ಜನನಮಿಲ್ಲೆಂದುಂ, ಮತ್ಸ್ಯಾದಿ ರೂಪದಿಂ ಪುಟ್ಟಿದನೆನೆ :- ದುಷ್ಟನಿಗ್ರಹ ಶಿಷ್ಟಪರಿಪಾಲನ ಧರ್ಮಸ್ಥಾಪನಾದ್ಯರ್ಥಮಾಗಿ ತನ್ನಿಚ್ಛೆಯಿಂ ಮನುಷ್ಯಾದ್ಯಾಕಾರಂದಾವಿರ್ಭವಿಸುವನೆನ್ದುಂ, ತೋರ್ಪುದರಿಂ; ಕರ್ಮಾಧೀನಮಲ್ತು, ಲೋಕಾನುಗ್ರಹಾರ್ಥಮೆನ್ದು ಸಿದ್ಧಮಾದುದು. ಇನ್ತು ವಿರೋಧಮಿಲ್ಲದೆ ಸಕಲ ವೇದಾಂತಗಳನೊಂದು ಗೆಯ್ದು ತಿಳಿದವರ್ ನಿನ್ನಂ ಸರ್ವ್ವೈಶ್ವರ್ಯ್ಯಮಯನೆಂಬರ್. ನಿನ್ನ ನೆಲೆಯಂ ನಿರೂಪಿಸಲ್ಕೆ ಆನೆನಿತರವಂ. ಎನ್ನಂ ನಿನ್ನ ನಿರ್ವ್ಯಾಜದಯಾಮೃತಾಬಿಧತರಂಗದೊಳ್ ತೇಲಿಸಿ ಲಾಲಿಪುದು ಲಾಲಿಪುದನನ್ಯಜನಸುಲಭ, ಶ್ರೀ ಯದುಶೈಲ ವಲ್ಲಭಾ !

---

— ಏಳನೆಯ ಬಿನ್ನಪಂ. —

॥ ಕಂ ॥ ನುನೀ ಜಗಮೆಲ್ಲಮುಂ ಕೇಳ್ ।
ನಿನ್ನೊಡಲಾಗಿರ್ಪ್ಪ ಬಗೆಯೊಳೆನ್ದು ಯದುಕ್ಷ್ಮಾ ॥
ಭೃನ್ನಾಥನ ಡಿಗ ನಲನಿಂ ।
ಬಿನ್ನತಿ ಗೆಯ್ದಿಸದನೊಲ್ದು ನನ್ನಿಯನಲ್ಲಂ ॥

ಸಮಸ್ತಚಿದಚಿದ್ವಸ್ತುಶರೀರಕ ! ಜಗಮೆಲ್ಲಮುಂ ನಿನಗೆ ಶರೀರಮಾಗಿಯುಂ ನೀನೀ ಜಗಕ್ಕೆ ಪರಮಾತ್ಮನಾಗಿಯುಮಿರ್ಪ್ಪುದು, ಜಗಮೆಲ್ಲಮುಂ ನೀನೋರ್ವನಲ್ಲದೆ ಬೇರಿಲ್ಲೆನ್ದು ವೇದಶಾಸ್ತ್ರಂಗಳೊಳ್ಪೇಳ್ವುದು. ಅದರ ತತ್ವಮಂ ತಿಳಿಯದೆ ಕೆಲಂಬರ್ ಭ್ರಮಿಸಿ ಜಗಕ್ಕಂ ನಿನಗಂ ಸ್ವರೂಪಭೇದಮಿಲ್ಲೆನ್ದು ಪೇಳ್ವರ್. ಅವರಾಡುವ ನುಡಿಗಳನಿತುಂ ಯುಕ್ತಿವಿರುದ್ಧಮಾಗಿರ್ಪ್ಪುವು. ಅದೆನ್ತೆನೆ :- ಲೋಕದೊಳ್ ವಸ್ತುರೂಪಮೆರಡಾಗಿರ್ದು ಎರಡರಾಕಾರಗುಣಂಗಳೊಂದಾಗಿರ್ದೊಡೆ, ಅವೊಂದೇ ವಸ್ತುವೆಂ ಕಂಡು, ಇದಕ್ಕುಮಿದಕ್ಕುಂ ಭೇದಮಿಲ್ಲೆನ್ದು ಬುದ್ಧಿಮಂತರ್ ಪೇಳ್ವರ್. ಬ್ರಹ್ಮಕ್ಕಂ ಪ್ರಪಂಚಕ್ಕಂ ಭೇದಮಿಲ್ಲೆಂಬವಂ ಈ ಪ್ರಪಂಚಮೇ ಬ್ರಹ್ಮಮೆಂದೊಡೆ, ಬೇರೆ ಬ್ರಹ್ಮಮಿಲ್ಲೆಂಬ ಶೂನ್ಯವಾದಿಯಕ್ಕುಂ; ಬ್ರಹ್ಮಮೇ ಪ್ರಪಂಚಮ

ನೊಡ್ಡೆ, ಬ್ರಹ್ಮವೊಂದೆ ಯಲ್ಲದೆ ಬೇರೊಂದುಮಿಲ್ಲೆಂದು ನುಡಿವೆ
ತಾನುಂ ತನ್ನ ನುಡಿಯುಂ ತನಗುಪದೇಶವಿತ್ತ ಗುರುವುಂ ಆ ಗುರು
ವ್ಪೇಳಿದ ವೇದಾಂತಮುಮಿಲ್ಲೆಂಬುದರಿಂ ನಾಸ್ತಿಕವಾದಿಯಕ್ಕುಂ.
ಇನ್ತು ಶುದ್ಧಾದ್ವೈತಂ ಶಾಸ್ತ್ರವಿರುದ್ಧಮಾಗಿರ್ಪೊಡಂ, ನಿನ್ನ
ಕಟಾಕ್ಷವಿಷಯರಲ್ಲದ ಮನುಜರ್ ಈ ಪಕ್ಷಮನೆ ಅಂಗೀಕರಿಸಿ ನಿ
ನ್ನ ಜ್ಞಾನಬಲೈಶ್ವರ್ಯ ವೀರ್ಯ ಶಕ್ತಿ ತೇಜಸ್ಸೌಶೀಲ್ಯವಾತ್ಸಲ್ಯ ಮಾ
ರ್ದವಾರ್ಜವ ಸೌಹಾರ್ದ ಸೌಮ್ಯ ಕಾರುಣ್ಯ ಮಾಧುರ್ಯ ಗಾಂಭೀರ್ಯ
ಔದಾರ್ಯ ಚಾತುರ್ಯ ಸ್ಥೈರ್ಯ ಶೌರ್ಯ ಪರಾಕ್ರಮ ಸತ್ಯಕಾಮ ಸತ್ಯಸಂ
ಕಲ್ಪ ಕೃತಿತ್ವ ಕೃತಜ್ಞತಾದ್ಯಸಂಖ್ಯೇಯ ಕಲ್ಯಾಣಗುಣಗಣಂಗಳುಂ,
ದಿವ್ಯಮಂಗಳವಿಗ್ರಹಮುಂ, ದಿವ್ಯಭೂಷಣಂಗಳುಂ, ದಿವ್ಯಾಯುಧಂ
ಗಳುಂ, ದಿವ್ಯ ಮಹಿಷೀವರ್ಗಮುಂ, ನಿತ್ಯಮುಕ್ತರುಂ, ಶ್ರೀ ವೈ
ಕುಂಠಮುಂ, ಇನಿತಿಲ್ಲೆಂದುಂ ಮತ್ತಂ ನಿನ್ನ ಲೀಲಾಪರಿಕರಮಾದ
ಬ್ರಹ್ಮಾಂಡಮುಂ, ಅದರೊಳಿರ್ಪ ಪದಿನಾಲ್ಕುಂ ಲೋಕಂಗಳುಂ,
ಬ್ರಹ್ಮರುದ್ರಾದಿ ದೇವರ್ಕಳುಂ, ಸಪ್ತದ್ವೀಪಂಗಳುಂ, ಸಪ್ತಸಾಗ
ರಂಗಳುಂ, ಪರ್ವತಂಗಳುಂ, ನದಿಗಳುಂ, ದೇಶಂಗಳುಂ, ಗ್ರಾಮಂ
ಗಳುಂ, ತಮ್ಮಂ ಪೆತ್ತ ತಂದೆತಾಯ್ಗಳುಂ, ತಾಮುಮಿಲ್ಲೆನ್ದುಂ ಇ
ಲ್ಲದಿರ್ಪ ವೇದಾಂತಗಳಿಂದೆ ಇವೆಲ್ಲಮಂ ತಿಳಿದೆವೆಂದುಂ ಈ ಪರಿ
ಯೊಳ್ನಿನ್ನ ನಿತ್ಯವಿಭೂತಿ ಲೀಲಾವಿಭೂತಿಗಳನಪಲಪಿಸುವರ್. ಅವ
ರೊಳ್ ನೀಂ ನೆಲಸಿರ್ಪ ತೆರನೆಂತೋ. ಅದನ್ತಿರ್ಕೆ, ನಿನ್ನನೆ ನೆ
ರೆನಂಬಿ ನಿನ್ನ ಕಟಾಕ್ಷಮಂ ಪಡೆದ ಮಹಾತ್ಮರ್ ಸಕಲ ವೇದಶಾಸ್ತ್ರಾ
ನುಗುಣಮುಂ ಯುಕ್ತಿಯುಕ್ತಮುಮಾದ ವಿಶಿಷ್ಟಾದ್ವೈತಮನೆ ಅಂ
ಗೀಕರಿಸಿರ್ಪರ್. ಅದೆನ್ತೆನೆ:- ಒರ್ವನ ಶರೀರದೊಳ್ ಪೃಥಿವ್ಯಾದಿ
ತತ್ವಂಗಳಿರ್ಪತ್ತು ನಾಲ್ಕುಂ ಜೀವಾತ್ಮನುಂ ಅನ್ತರ್ಯಾಮಿಯಾದ
ನೀನುಂ ಕೂಡಿ ಇರ್ಪತ್ತಾರುಂ ತತ್ವಂಗಳಿರ್ದೊಡಂ ಮನುಜನೋ
ರ್ವನಿರ್ದಪನಂತೆ, ಈ ಚೇತನಾಚೇತನಂಗಳೆಲ್ಲಮುಂ ಬೇರಾಗಿರ್ದೊ
ಡಂ ನಿನ್ನ ಶರೀರಮಪ್ಪುದರಿಂ ನೀನೋರ್ವನೆಯೆಂಬುದು ಯುಕ್ತಂ.
ಈ ತತ್ವಜ್ಞಾನಮೆನ್ನ ಮನದೊಳ್ನೆಲಗೊಂಬನ್ತೆ ನೀಂ ಕರುಣಿಪು
ದು ಕರುಣಿಪುದನನ್ಯ ಜನಸುಲಭ, ಶ್ರೀ ಯದುಶೈಲವಲ್ಲಭಾ !

ಕಂ ॥ ಕನಸಿನೊಳೀಕ್ಷಿಪವಸ್ತುಗ ।
ಳನಿತುಂ ನೀಂ ಸೃಷ್ಟಿಗೆಯ್ದ ಬಗೆಯಿಂದಿಟಮೆಂ ॥
ದನುಗೊಳಿಸಿ ಬಿನ್ನವಿಸಿದಂ ।
ಮನವೊಲ್ದಸುರಾರಿಯಡಿಗೆ ಮಲೆವರಗಂಡಂ ॥

ಅಘಟಿತ ಘಟನಾಸಮರ್ಥ ! ಮನುಜರ್ಗೆ ಜಾಗರ ಸ್ವಪ್ನ ಸುಷುಪ್ತಿಗಳೆಂದು ಮೂರವಸ್ಥೆಗಳೊಳವು. ಅವರೊಳ್ ಸುಷುಪ್ತಿಯೆಂಬುದು-ನಿದ್ರೆ, ಸ್ವಪ್ನಮೆಂಬುದು- ಕನಸು, ಜಾಗರಮೆಂಬುದೆಚ್ಚರಿಕೆ. ನಿದ್ರೆಯೊಳ್ ಜೀವಾತ್ಮಂ ಪರಮಾತ್ಮನಾದ ನಿನ್ನೊಳ್ಪುದುಗಿ, ಜ್ಞಾನೇಂದ್ರಿಯ ವ್ಯಾಪಾರಮನುಳಿದಿರ್ಪುದರಿಂ, ಪೊರಗುಮೊಳಗುಂ ತಿಳಿವಿಲ್ಲದಿರ್ಕುಂ ; ಎಚ್ಚರೊಳಂ ಕನಸಿನೊಳಂ ತಿಳಿವುಂಟಾಗಿರ್ಕುಂ. ಎಚ್ಚರೊಳ್ ಕಾಣ್ಬ ವಸ್ತುಗಳಂ ನೀಂ ಸೃಷ್ಟಿಕ್ರಮದಿಂ ಸೃಜಸುದುದರಿಂದೀವಸ್ತುವಿದರಿಂ ಪುಟ್ಟುವುದು, ಇದರ್ಕಿದೇಪೆಸರ್ ಈಯಾಕಾರಂ, ಈಗುಣಂ, ಇದರಿಂದಪ್ಪ ಕಜ್ಜಮಿದು, ಈವಸ್ತು ಇನಿತು ಕಾಲಮಿರ್ಪುದೆಂದು ಮಿತಿಯಾಗಿರ್ಕುಂ; ಇರ್ಪಕಾಲದೊಳೆಲ್ಲರ್ಗಂ ತಿಳಿಯಬರ್ಕುಂ. ಕನಸಿನೊಳ್ಕಾಣ್ಬ ವಸ್ತುಗಳಂ ನೀಂ ತತ್ಕಾಲದೊಳ್ ಸಂಕಲ್ಪಮಾತ್ರದಿಂ ಸೃಜಿಸಿದುದರಿಂದೆ, ಈ ವಸ್ತುವಿದರಿಂ ಪುಟ್ಟುವುದೆಂದುಂ, ಇದರ್ಕಿದೇಯಾಕಾರಂ, ಇದೇ ಗುಣಂ, ಇದೇ ಕಜ್ಜಂ, ಎಂಬಿವು ಮೊದಲಾದ ಮಿತಿಯೊಂದುಮಿಲ್ಲದೆ, ವಿಚಿತ್ರಮಾಗಿ ನಿನ್ನ ಸಂಕಲ್ಪಮಿರ್ದಂತಿರ್ಕುಂ; ಆ ಕಾಲದೊಳ್ ಕನಸಂಕಾಣ್ಬಂಗೋರ್ವಂಗೆ ಕಾಣಿಪುದಲ್ಲದೆ, ಮಿಕ್ಕಿನೋರ್ವಂಗಂ ಕಾಣಿಸದು. ಇಂತು ಜಾಗರದೊಳ್ ಕಾಣ್ಬವಸ್ತುವೆಲ್ಲರ್ಗಂ ಕಾಣಿಸುತ್ತುಂ, ಸ್ಥಿರಮಾಗಿಯುಂ ಕನಸಿನೋಳ್ಕಾಣ್ಬ ವಸ್ತುವೋರ್ವಂಗೆ ಕಾಣಿಸುತ್ತೆಚ್ಚರುವುದುಂ ಪೋಪುದರಿಂದನಿತ್ಯಮುಮಾಗಿರ್ಕುಂ. ಲೋಕಮರ್ಯಾದೆಯಿಂತಿರ್ದೊಡಂ ನೀನೊರ್ವರೊಳ್ದಯೆಗೆಯ್ದು ಮಿತಿಯುಂ ಪಲ್ಲಟಿಸಿ ತೋರಿಸುವೈ. ಅದೆಂತೆನೆ :— ಮುಂ-ಗೋಕುಲದೊಳ್ ಬಲಭದ್ರನ ಚಾಡಿಮಾತಂ ಕೇಳ್ದು ಮಣ್ಣಂ ಮೆಲ್ಲದಿರೆಂದು ಬೆದರಿಸುವ ಯಶೋ

ದೆಗೆ ನಿನ್ನ ಕಿರಿದಪ್ಪ ಚೆಮ್ಮಾಬ್ಬಯ್ದೆರದು ಪದಿನಾಲ್ಕುಂ ಲೋಕಂಗಳ ನಾರುಮರಿಯದಂತೆ ತೋರಿಸಿದ್ದೈ; ಅಂತೆರಡು ಥಟ್ಟಿನ ನಟ್ಟನಡುವೆ ಆರುಮರಿಯದಂತೆ ವಿಶ್ವರೂಪಮನರ್ಜುನಂಗೆ ತೋರಿಸಿದ್ದೈ; ಮತ್ತಂ ಸೈಂಧವನ ಕೊಲ್ಲಿಸಿಯರ್ಜುನನುಳುಪವೆಳ್ಪುದೆಂದು, ಕುರುಕ್ಷೇತ್ರದೊಳ್ ಪಗಲೊಳೆ ಇರುಳನುಂಟುಮಾಡಿದ್ದೈ; ಮತ್ತಂ ಗಂಗೆಯೊಳ್ ಮುಳುಂಗಿದ ಸುಚರಿತನೆಂಬ ಪಾರ್ವನಂ ಕಲ್ಯಾಣಿ ತೀರ್ಥಮಧ್ಯದೊಳುಣ್ಮಿಸಿದ್ದೈ; ಇಂತು ಪರೋಕ್ಷಮಲ್ಲದೆ ಸಾಕ್ಷಾತ್ಕಾರಮಾಗಿ ಯೆನಗೆ ಕನಸಿನೊಳ್ ನೀಂ ಕರುಣಿಸಿದ ನಂದಕಮೆಂಬ ಪೆಸರ್ವೆದತ್ಯುತ್ತಮಮಪ್ಪುದೊಂದು ಕತ್ತಿಯಂ ಸ್ವಾಪ್ನಪದಾರ್ಥದಂತೆ ತತ್ಕಾಲಮಾತ್ರಾನುಭಾವ್ಯಮಲ್ಲದೆ, ನಿತ್ಯಮೆನಿಸಿ ಎಲ್ಲರೊಳಮಗ್ಗಂ ಕಾಣಿಸುತ್ತೆ, ನೀನಿತ್ತ ಮೈಮೆಯಿಂದೊಂದೇ ಸೂಳಿಯಾಳ್ಕವಿದು ಮುತ್ತಿದ ನಾಲ್ವೆರೆಯ ಪಗೆವರ ಮೊತ್ತಮುಂ ಕತ್ತರಿಸಿ, ಗೆಲ್ಲಮಂ ಕೈಕೊಂಡೆನ್ನಂ ನಿನ್ನೊಳಗಕ್ಕೀಡಪ್ಪಂತೆ ನೆಗಳ್ಚಿದ್ದೈ. ನಿನ್ನ ದಿವ್ಯಾದ್ಭುತ ಗುಣಾಬ್ಧಿಯೊಳೆ ವೇದಂಗಳುಂ ಬ್ರಹ್ಮಾದಿಗಳುಮೊಂದು ತುಂತುರ್ವನಿಯನಿತುಮಂ ಈಸಲರಿಯರ್, ಅಸನಿತರಮಂ; ನಿನ್ನ ಮಹಿಮಾರ್ಣವಮಂ ವರ್ಣಿಪೆನೆಂದು ಪೂಣ್ದೆನ್ನ ಸಾಹಸಮಂ ಸೈರಿಸಿ ನಿನ್ನವನೆಂದು ನಲಿಯಿಪುದು ನಲಿಯಿಪುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ! * * * *

— ಒಂಬತ್ತನೆಯ ಬಿನ್ನಪಂ. —

ಕಂ॥ ಮಿತಿಗೆಯ್ದ ಕರ್ಮಗತಿಯಂ ।
ಜೊತೆಗೊಂಡೇಸೃಷ್ಟಿಗೆಯ್ವ ನೀಂಸರ್ವಸಮಂ ॥
ಸತಮೆಂದು ಶೌರಿಯೊಳ್ಬ ।
ನ್ನತಿಯಂ ಲೋಕೈಕವೀರನೊರೆದುರೆ ನೆಗಳ್ದಂ ॥

ಸಕಲಲೋಕ ನಿಯಾಮಕ! ನೀನೀಸಂಸಾರದೊಳೋರೋರ್ವಂಗೆ ಪಟ್ಟಾಭಿಷೇಕಾದಿ ಸುಖಮುಂ, ಒರೋರ್ವಂಗೆ ಶಿರಶ್ಛೇದನಾದಿ ದುಃಖ

ಷ್ಟುಮನೆಸಗುವುದರಿಂ ವಿಷಮನೆಂದುಂ, ಕರ್ಮಾನುಗುಣವಾದ ಫಲಮ ನೀವುದರಿಂ ಕರ್ಮಕ್ಕೆ ಪರತಂತ್ರನೆಂದುಂ, ಪಾಪಿಗಳ್ ಪಡುವ ದುಃಖ ಮಂ ಪರಿಹರಿಸದೆ ನೋಡುತಿಪ್ಪುದರಿಂ ನಿರ್ದಯನೆಂದುಂ, ಸ್ವಲ್ಪ ಬುದ್ಧಿಗಳ್ಗೆ ತೋರ್ಕುಂ. ಇದರ ನೆಲೆಯಂ ವಿಚಾರಿಸೆ, ನೀನಾಳ್ದ ನಾದುದರಿಂ, ನಿನ್ನಾಳ್ಗಳೆನಿಪ ಜೀವರನಿಬರೊಳಂ ಸಮಬುದ್ಧಿಯಿಂ ದೆಲ್ಲರುಂ ನಿನ್ನ ಮನಂ ಬಪ್ಪಂತೆ ಊಳಿಗಮನೆಸಗಿ, ಬದುಕ ವೆಳ್ಪುದೆಂದೆಣಿಸಿ ಇನಿತನ್ತು ನಡೆವರ್ಗೆ ಮೋಕ್ಷಮೆನ್ದುಂ, ಇನಿ ತು ನಡೆವರ್ಗೆ ಇಹಪರಸೌಖ್ಯಮೆನ್ದುಂ ಮಿತಿಮಾಡಿ, ಆ ಮಿತಿ ಯೊಳಾಚಾರಾವ ತೆರದೊಳ್ನಡೆವರ್ ಅವರವರ್ಗೆ ಆ ಮಿತಿಮಾಡಿದ ಫ ಲಮಂ ತಪ್ಪದೆ ಕುಡುವುದರಿಂ, ನೀಂ ಸರ್ವಸಮಂ, ನಿನಗೋರ್ವ ರೊಳಂ ವೈಷಮ್ಯಮಿಲ್ಲ. ಇನ್ತು ಅವರವರ ಕರ್ಮಾನುಗುಣಮಾಗಿ ಫಲಂಗಳನಿತ್ತುಂ ನೀಂ ಸ್ವತಂತ್ರನಲ್ಲದೆ ಪರತನ್ತ್ರನಲ್ತು; ಪಾಪಿ ಗಳ್ಗೆ ಪಾಪಾನುಗುಣಮಾದ ದುಃಖಮನೀವುತಂ, ಅಜಾಮಿಳಂ ಮೊದ ಲಾದ ಓರೋರ್ವರೊಳ್ಕೃಪೆಮಾಡಿ ದಯೆಗೆಯ್ವುದರಿಂ, ಪರಮ ದಯಾ ಳುವೆನಿಸುವೆ. ಅದೆನ್ತೆನೆ:— ಲೋಕದೊಳ್ ಧಾರ್ಮಿಕನಾಗಿಪ್ಪನ ರಸನೋರ್ವನ್ ತನ್ನ ನಾಡೊಳಿನ್ತು ನಡೆವರು ಮನ್ನಿಪರು, ಇನ್ತು ನಡೆವರು ದಂಡಿಪೆನೆಂದು ಮುನ್ನಮೇ ಮಿತಿಮಾಡಿ, ಆ ಮಿತಿಯಿದ್ದಂ ತೆ ಈಷತ್ತಪ್ಪದೆ ನಿಗ್ರಹಾನುಗ್ರಹಂಗಳಂ ನಡೆಯಿಸಿದೊಡೆ, ಪಕ್ಷ ಪಾತಮಿಲ್ಲದೆ ಸರ್ವಸಮನೆಂಬರ್; ತಾಂ ಮಿತಿಮಾಡಿದ ಮಿತಿಯಂ ಬಿ ಡದೆ ತಾಂ ನಡೆಯಿಸುವುದರಿಂ ತಾಂ ಸ್ವತನ್ತ್ರನೆಂಬರ್; ತಪ್ಪಿದರಂ ದಣ್ಡಿಸುವೆಡೆಯೊಳಿತ್ತಾನುಮೋರ್ವನೊಳ್ತಪ್ಪಿರ್ದುಂ ಮನ್ನಿಸಿದೊಡಂ ದಯಾಳುವೆಂಬರ್; ಅನ್ತು ನೀಂ ನಿನ್ನಾಜ್ಞಾರೂಪವಾದ ಕರ್ಮಕ್ಕನು ಗುಣಮಾಗಿ ಫಲಮನೀವುದರಿಂ ಸರ್ವಸಮನುಂ, ಆ ಮಿತಿತಪ್ಪದನ್ತೆ ನಡೆಯಿಸುವದರಿಂ ಸ್ವತನ್ತ್ರನುಂ, ಓರೋರ್ವರ ತಪ್ಪಂ ಮನ್ನಿಪು ದರಿಂ ದಯಾಳುವೆನ್ದು ಪಿರಿಯರಿಂ ಕೇಳ್ದು ನಿನ್ನಂ ಸೆರೆನಪ್ಪಿದೆನೆ ನ್ನ ತಪ್ಪನೊಪ್ಪುಗೆಯ್ದು ಕರುಣಿಪುದು ಕರುಣಿಪುದನನ್ಯಜನಸುಲ ಭ, ಶ್ರೀ ಯದುಶೈಲವಲ್ಲಭಾ!

* * *

ಕಂ ॥ ಪರಿಪರಿಯ ಜಗಕೆ ಮೂರುಂ ।
ಪರಿಯೆನಿಸುವ ಕಾರಣಂಗಳುಂ ನೀನೆನ್ದು ॥
ಬಿರುದನ್ತೆಪ್ಪುದಗಣ್ಡಂ ।
ಮುರವೈರಿಯ ಪದಕೆ ಮುದವೆ ಬಿನ್ನತಿಗೆಯ್ದಂ ॥

ಸಕಲ ಜಗದೇಕ ಕಾರಣಾ ! ಕಾರ್ಯಮನುಣ್ಟುಮಾಡುವ ವಸ್ತು ಕಾರಣಮೆನಿಪುದು. ಅದು ಉಪಾದಾನ ಕಾರಣಮೆನ್ದುಂ, ನಿಮಿತ್ತಕಾರಣಮೆನ್ದುಂ, ಸಹಕಾರಿ ಕಾರಣಮೆನ್ದುಂ ಮೂಱುಂ ತೆರನಾಗಿರ್ಕುಂ. ಪೊಸತೊನ್ದು ಕಾರಣಮಂ ಪಡೆದು ತಾನೇ ಕಾರ್ಯಮೆನಿಪ ವಸ್ತು ಉಪಾದಾನ ಕಾರಣಂ; ಈ ಉಪಾದಾನ ಕಾರಣದಿಂ ಕಾರ್ಯಮನುಣ್ಟುಮಾಡುವ ತೆರನರಿತು ಉಣ್ಟುಮಾಡುವ ಕರ್ತೃ, ನಿಮಿತ್ತಕಾರಣಂ; ಈ ಕರ್ತೃ ಕಾರ್ಯಮನುಣ್ಟುಮಾಡುವುದರ್ಕ್ಕೆ ಬೆಳ್ಪ ಉಪಕರಣಂಗಳ್ ಸಹಕಾರಿ ಕಾರಣಂ. ಇವು ಆವಾವುವೆನೆ :— ಸ್ವರ್ಣ್ನಮಯಮಾದ ಕಟಕಮಕುಟಾದಿ ಕಾರ್ಯಕ್ಕೆ, ಸ್ವರ್ಣ್ನಮುಪಾದಾನ ಕಾರಣಂ, ಸರ್ಣ್ನಕಾರಂ ನಿಮಿತ್ತಕಾರಣಂ, ಸುತ್ತಿಗೆ ಅಡಿಗಲ್ಲಿರ್ಕ್ಕುಗಳ ಬೆಂಕಿ ನೀರ್ಮೊದಲಾದವು ಸಹಕಾರಿ ಕಾರಣಂ. ಮತ್ತಂ ಮೃಣ್ಮಯಮಾದ ಘಟ ಶರಾವಾದಿಗಳ್ಗೆ ಮೃತ್ಪಿಣ್ಡಮುಪಾದಾನ ಕಾರಣಂ, ಕುಲಾಲಂ ನಿಮಿತ್ತಕಾರಣಂ, ಚಕ್ರಂ ಮೊದಲಾದವು ಸಹಕಾರಿಕಾರಣಂ. ಇನ್ತು ಲೋಕದೊಳ್ಪುಟ್ಟುವ ಕಾರ್ಯಮನಿತರ್ಕ್ಕಂ ಮೂಱುಂ ತೆರದ ಕಾರಣಂಗಳುಂ ಬೇರೆಬೇರಾಗಿರ್ಪುವು. ಈ ಲೋಕಮರ್ಯ್ಯಾದೆಯಂ ಮೀಱಿ, ಜಗಮೆಮ್ಬ ಕಾರ್ಯಕ್ಕೆ ನೀನೊರ್ವನೇ ಮೂಱುಂ ತೆರನಾದ ಕಾರಣಮಾಗಿಪ್ಪೆ. ಅದೆನ್ತೆನೆ :— ಮಹಾಪ್ರಳಯದೊಳ್ಪಞ್ಚಮಹಾಭೂತಂಗಳುಂ, ಪಞ್ಚತನ್ಮಾತ್ರೆಗಳುಂ, ಏಕಾದಶೇನ್ದ್ರಿಯಂಗಳುಂ, ಅಹಂಕಾರತತ್ವಮುಂ, ಮಹತ್ತತ್ವಮುಂ ಕೂಡಿ, ಈರ್ಪ್ಪತ್ತುಮೂಱಂ ತತ್ವಂಗಳುಂ ಪ್ರಕೃತಿಯೊಳಡಂಗಿ, ಉಳಿದ ಪ್ರಕೃತಿಯುಂ ಜೀವನುಮೆಮ್ಬ ಎರಡುಂ ತತ್ವಂಗಳುಂ, ಪೆಸರುಮಾಕಾರಮುಂ ಬೇರೆನಿಸಿ, ತಿಳಿಯದನ್ತೆ ನಿನ್ನೊಳ್ಪುದುಗಿ ನಿನ್ನ ಶರೀರಮಾಗಿಪ್ಪುದರಿಂ, ನೀನೋರ್ವನೇ ಉಳಿದಿಪ್ಪೆ.

ಟವೇಳೆಯೊಳ್ನೀನೇ ಮೂರುಂ ತೆರದ ಕಾರಣಮಾಗಿ ಜಗಮನುಂ ಟುಮಾಳ್ಪುದರಿಂ ಜಗದೇಕಕಾರಣಮೆಮ್ಬುದು ಸಿದ್ಧಂ. ಇನ್ತು ಸೂಕ್ಷ್ಮಪ್ರಕೃತಿ ಜೀವಶರೀರಕನಾದ ನೀನುಪಾದಾನಕಾರಣಮಾದೊಡಂ ಪೊಸತೊಂದು ಆಕಾರಮಂ ಪಡೆವುದೆಮ್ಬ ಪರಿಣಾಮದೋಷಂ ಪ್ರಕೃತಿಮಾತ್ರಕ್ಕಲ್ಲದೆ, ನಿನ್ನ ದಿವ್ಯಾತ್ಮಸ್ವರೂಪಕ್ಕಿಲ್ಲೆನ್ದು ಸಕಲ ವೇದಾನ್ತಂಗಳುಂ ನಿನ್ನ ಮೈಮೆಯಂ ಪೊಗಳ್ದು ಅಚ್ಚರಿವಡುವವು. ಈ ಜಗದುತ್ಪತ್ತಿಸ್ಥಿತ್ಯಾದಿಗಳಪ್ಪ ನಿನ್ನ ದಿವ್ಯಾದ್ಭುತಲೀಲೆಗಳಂ ನಿರವಿಸಲಾನೆನಿತರವಂ. ನಿನ್ನವರೆನಿಪ ಪಿರಿಯರ್ಪಲರ್ಕ್ಮೆಯಿಂ ಕಲಿಸೆ, ಬನ್ದೊನ್ದು ನುಡಿಯಂ ಕಲ್ತೋದುವ ಗಿಳಿವರಿಯನ್ತೆನ್ನ ನುಡಿಗೆ ಚಿತ್ತದೊಳ್ ಸಂತಸಂ ಬಡೆವುದು ಸನ್ತಸಂಬಡೆವುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ! * * *

—ಪನ್ನೊಂದನೆಯ ಬಿನ್ನಪಂ.—

ಕಂ ॥ ಊಹಿಸೆ ಜೀವನ ಚೇತನ ।
ದೇಹಾದಿಗಳತ್ತಣಿಂದಮನ್ಯಂ ದಿಟಮೆಂ ॥
ದೀಹದನಂ ಶೌರಿಗೆ ತಾ ।
ನಾಹವಮಲ್ಲಾಂಕನೊಲ್ದು ಬಿನ್ನತಿಗೆಯ್ದಂ ॥

ಪರಮಾತ್ಮಾ! ನೀಂ ಸಕಲ ಜೀವಾತ್ಮವರ್ಗಕ್ಕಂ, ಪಿರಿಯನಪ್ಪುದರಿಂ ನಿನ್ನಂ ಪರಮಾತ್ಮನೆಂಬುದು. ಜೀವಾತ್ಮಸ್ವರೂಪಮಂ ವಿಚಾರಿಪೆಡೆಯೊಳ್ ಶರೀರಮೇ ಜೀವಾತ್ಮನೆನ್ದುಂ, ಬಾಹ್ಯೇನ್ದ್ರಿಯಂಗಳೇ ಜೀವಾತ್ಮನೆನ್ದುಂ, ಸಕಲಶರೀರದೊಳಮಿರ್ಪ್ಪ ಜೀವಾತ್ಮನೊರ್ವನೇ ಎನ್ದುಂ ಸ್ವತನ್ತ್ರನೆನ್ದುಂ ಪೇಳ್ವರ್. ಈ ಪಕ್ಷಂಗಳನಿತುಂ ಯುಕ್ತಿವಿರುದ್ಧಂಗಳಾಗಿಯುಂ ಶಾಸ್ತ್ರವಿರುದ್ಧಂಗಳುಮಾಗಿರ್ಪ್ಪುವು. ಅದೆನ್ತೆನೆ:— ಶರೀರಮೇ ಜೀವಾತ್ಮನಾದೊಡೆ, ಮೃತಶರೀರಮುಚ್ಚಳಿಯದಿರ್ದ್ದುಂ ಜೀವಂ ಪೋದುದೆಂಬ ನಾಣ್ನುಡಿಕೊಡದು; ಚಕ್ಷುರಾದೀನ್ದ್ರಿಯಂಗಳೇ ಜೀವಾತ್ಮನಾದೊಡೆ, ಅನ್ಧಬಧಿರಾದಿಗಳೊಳ್ ಜೀವಾತ್ಮನಿಲ್ಲೆನವೇಳ್ಪುದು; ಮನಸ್ಸುಂ ಪ್ರಾ

ಣವಾಯುವುಂ ಜಡಮಪ್ಪುದರಿಂ ಜೀವಾತ್ಮನಲ್ತು; ಜ್ಞಾನಮೇ ಜೀವಾತ್ಮನಾದೊಡೆ, ತಾಂ ಜ್ಞಾನಮುಳ್ಳವನೆನಕೂಡದು; ಮೇಣಾತ್ತಂ ಜ್ಞಾನಮೆನವೇಳ್ಪುದು; ಅದರಿಂ ಜೀವಾತ್ಮಂ ಶರೀರಬಾಹ್ಯೇಂದ್ರಿಯಮನಃಪ್ರಾಣಜ್ಞಾನಂಗಳತ್ತಣಿಂ ಬೇರಾಗಿ ಸ್ವಪ್ರಕಾಶಮಾಗಿರ್ಕ್ಕುಂ. ಸಕಲಶರೀರಂಗಳೊಳಂ ಜೀವಾತ್ಮನೊರ್ವನಾದೊಡೆ, ಓರ್ವನಶ್ರೇಯಸ್ಸಿಂಗೊರ್ವಂ ಕರುಬುವುದಂ, ಓರ್ವಂಗೊರ್ವಂ ಪಗೆಯಪ್ಪುದಂ, ಓರ್ವನೊರ್ವಂ ಕೊಲ್ವುದುಂ ಕೂಡದು; ಎಲ್ಲರಂತರಂಗಮನೆಲ್ಲರುಂ ತಿಳಿಯವೇಳ್ಪುದು; ಮತ್ತಮೊರ್ವಂಗೆ ವೇದಾಂತಜ್ಞಾನಂ ಪುಟ್ಟಿದಮಾತ್ರದೊಳೆಲ್ಲರ್ಗಂ ಮುಕ್ತಿಯಪ್ಪುದರಿಂ ಪಲರುಂ ವೇದಾಂತಶ್ರವಣಂಗೆಯ್ವುದು ವ್ಯರ್ಥಮಕ್ಕುಂ. ಜೀವಾತ್ಮಂ ಸ್ವತಂತ್ರನಾದೊಡೆ, ದುಃಖಮಯಮಾದ ಸಂಸಾರಮನಂಗೀಕರಿಸಂ. ಈ ಯುಕ್ತಿಗಳೊಡಗೂಡಿದ ಶಾಸ್ತ್ರವಚನಂಗಳಿಂ ಜೀವಾತ್ಮರ್ ಪಲರಾಗಿ ನಿನ್ನಾಳ್ಗಳಾಗಿಪ್ಪರ್. ಈ ಜೀವಾತ್ಮರೆಲ್ಲರ್ಗಂ ಒಡೆಯನಾಗಿ ಪರಮಾತ್ಮನೆನಿಸುವೈ. ಇಂತು ನೀನೊಡೆಯನುಮಾನೊಡವೆಯುಮೆನಿಪ ಸ್ವಸ್ವಾಮಿಸಂಬಂಧಮುಂ ಇನ್ನವರಮರಿಯದೆ ಪುರುಳಿಳಿದಪ್ಪನಗೆ ನೆವಮಿಲ್ಲದ ದಯೆಯಿಂ ವೇದಂಗಳರುಪಿ ಸ್ವರೂಪಮನುಣ್ಬನಾಡಿದವೋಲಿನ್ನುಂ ಶ್ರೇಯಃಪರಂಪರೆಗಳಂ ಪಮ್ಪಗೆಯ್ವುದು ಪಮ್ಪಗೆಯ್ವುದನನ್ಯಜನಸುಲಭ, ಶ್ರೀಯದುಶೈಲವಲ್ಲಭಾ!

## — ಪನ್ನೆರಡನೆಯ ಬಿನ್ನಪಂ. —

ಕಂ ॥ ನಿನ್ನಿಚ್ಛಾಮಾತ್ರದೊಳ್ ।
ಮುನ್ನಿಗಳ್ದುದು ತತ್ವಸೃಷ್ಟಿಯನ್ದು ಯದುಕ್ಷ್ಮಾ ॥
ಭೃನ್ನಿಧಿಯ ಪಾದಪಙ್ಕಜ ।
ಸನ್ನಿಧಿಯೊಳ್ಬ್ರೀಜಗದಲ್ಲಣಂ ನಿರವಿಸಿದಂ ॥

ಪರತತ್ವಸ್ವರೂಪಾ! ನಿನ್ನಧೀನಮಾಗಿ ನಿನ್ನ ಶರೀರಮೆನಿಸಿಪ್ಪ ತತ್ವಂಗಳ್ ಜೀವನೆನ್ದುಂ ಪ್ರಕೃತಿಯೆನ್ದುಮೆರಡಾಗಿರ್ಕ್ಕುಂ,

ಅದರೊಳ್ ಜೀವತತ್ತ್ವಂ ನಿನ್ನೊಡವೆಯಾಗಿ ಜ್ಞಾನಾನನ್ದಸ್ವರೂಪವಾಗಿ ನಿತ್ಯವಾಗಿರ್ಕ್ಕುಂ. ಪ್ರಕೃತಿಯೆಮ್ಬುದು ತಾನೊನ್ದುಂ ತನ್ನಿನ್ದಂ ಪುಟ್ಟಿದ ತತ್ತ್ವಙ್ಗಳಿರ್ಪ್ಪತ್ತಮೂರುಂ ಕೂಡಿ ಇರ್ಪ್ಪತ್ತನಾಲ್ಕುಂ ತತ್ತ್ವವಾಗಿರ್ಕ್ಕುಂ. ಅದೆನ್ತೆನೆ :— ಮಹಾಪ್ರಳಯದೊಳ್ ಪ್ರಕೃತಿ ನಿನ್ನೊಳ್ಪುದುಗಿರ್ಪ್ಪುದು. ಅದರೊಳ್ಸತ್ತ್ವರಜಸ್ತಮಸ್ಸುಗಳೆಂಬ ಮೂರುಂ ಗುಣಂಗಳ್ ಪೆರ್ಚ್ಚುಗೆಯಿಲ್ಲದೆ ಇರ್ಪ್ಪುವು. ಆ ಪ್ರಕೃತಿಗೆ ಮಾಯೆಯೆನ್ದುಂ ಅವಿದ್ಯೆಯೆನ್ದುಂ ಪ್ರಧಾನಮೆನ್ದುಂ ಪೆಸರಾಗಿರ್ಕ್ಕುಂ. ಈ ಪ್ರಕೃತಿ ಕೀೞ್ಗಡೆಯೊಳಂ ಪಿನ್ದೆಸೆಯೊಳಂ ಮಿತಿಯಿಲ್ಲದೆ ವ್ಯಾಪಿಸಿ ಮೇಗಣ್ಗೆ ವೈಕುಣ್ಠಲೋಕಪರ್ಯನ್ತಮಾಗಿರ್ಕ್ಕುಂ; ಇನ್ತು ಪೂರ್ಣ್ಣಮಾಗಿರ್ಪ್ಪ ಪ್ರಕೃತಿಯ ಕೆಲವೆಡೆಯೊಳ್ ಸತ್ತ್ವರಜಸ್ತಮೋಗುಣಙ್ಗಳ್ ಪೆರ್ಚ್ಚುಗೆವಡೆದ ಮಹತ್ತತ್ತ್ವಂ ಪುಟ್ಟುಗುಂ. ಇನ್ತೆನ್ದೆಸರಿಯೊಳ್ಪೆರ್ಚ್ಚುಗೆವಡೆದ ಮೂರುಂ ಗುಣಮುಳ್ಳ ಮಹತ್ತತ್ತ್ವದ ಒನ್ದೊನ್ದೆಡೆಯೊಳೊಂದೊಂದು ಗುಣಂಗಳ್ ಮಿಕ್ಕೆರಡು ಗುಣಂಗಳಂ ಮೆಟ್ಟಿ ಮಿಗೆಯುಂ ಪೆರ್ಚ್ಚುಗೆವಡೆಗುಂ. ಅಲ್ಲಿ ಸತ್ತ್ವಂಪೆರ್ಚ್ಚಿದೆಡೆಯೊಳ್ ಸಾತ್ತ್ವಿಕಮೆನ್ದುಂ, ರಜಸ್ಸು ಪೆರ್ಚ್ಚಿದೆಡೆಯೊಳ್ ರಾಜಸಮೆನ್ದುಂ, ತಮಸ್ಸು ಪೆರ್ಚ್ಚಿದೆಡೆಯೊಳ್ತಾಮಸಮೆನ್ದುಂ ಮೂರುಂ ತೆರದ ಅಹಂಕಾರತತ್ತ್ವಂ ಪುಟ್ಟುಗುಂ. ಇವರೊಳ್ಸಾತ್ತ್ವಿಕಾಹಂಕಾರದಿಂ ಶಬ್ದಮಂ ತಿಳಿವ ಶ್ರೋತ್ರಮುಂ, ಸ್ಪರ್ಶಮಂ ತಿಳಿವ ತ್ವಕ್ಕುಂ, ರೂಪಮಂ ತಿಳಿವ ಚಕ್ಷುಸ್ಸುಂ, ರಸಮಂ ತಿಳಿವ ರಸನೆಯುಂ, ಗನ್ಧಮಂ ತಿಳಿವ ಘ್ರಾಣಮೆಮ್ಬ-ಜ್ಞಾನೇನ್ದ್ರಿಯಂಗಳೈದುಂ, ಮತ್ತಂ ನುಡಿವ ವಾಕ್ಕುಂ, ಕುಡಿವ ಪಾಣಿಯುಂ, ನಡೆವ ಪಾದಮುಂ, ಶರೀರ ಧರ್ಮ್ಮಙ್ಗಳ ನೆಸಗುವ ಪಾಯುಗುಹ್ಯೇನ್ದ್ರಿಯಂಗಳೆಂಬ-ಕರ್ಮ್ಮೇನ್ದ್ರಿಯಂಗಳೈದುಂ, ಮತ್ತಂ ಜ್ಞಾನೇನ್ದ್ರಿಯ ಕರ್ಮ್ಮೇನ್ದ್ರಿಯಮೆರಡರ್ಕ್ಕಂ ಸಹಾಯಮಾದ ಮನಸ್ಸೆಮ್ಬ-ಅಂತರಿನ್ದ್ರಿಯಮೊನ್ದುಂ ಕೂಡಿ ಪನ್ನೊಂದಿನ್ದ್ರಿಯಂಗಳ್ಪುಟ್ಟುಗುಂ. ತಾಮಸಾಹಂಕಾರದಿಂದ ಅವ್ಯಕ್ತಮಾದ ಶಬ್ದಗುಣಮುಳ್ಳ ಶಬ್ದತನ್ಮಾತ್ರಂ ಪುಟ್ಟುಗುಂ. ಈಶಬ್ದತನ್ಮಾತ್ರದಿಂದ ವ್ಯಕ್ತಮಾದ ಶಬ್ದಗುಣಮುಳ್ಳಾಕಾಶಂ ಪುಟ್ಟುಗುಂ. ಈಯಾಕಾಶದೊಡಗೂಡಿದ ಶಬ್ದತನ್ಮಾತ್ರದಿಂದ

ಅವ್ಯಕ್ತಮಾದ ಸ್ಪರ್ಶಗುಣಮುಳ್ಳ ಸ್ಪರ್ಶತನ್ಮಾತ್ರಂ ಪುಟ್ಟುಗುಂ. ಈ ಸ್ಪರ್ಶತನ್ಮಾತ್ರದಿನ್ದ ಅವ್ಯಕ್ತಮಾದ ಸ್ಪರ್ಶಗುಣಮುಳ್ಳವಾಯು ಪುಟ್ಟುಗುಂ. ಈ ವಾಯುವನೊಡಗೂಡಿದ ಸ್ಪರ್ಶತನ್ಮಾತ್ರದಿಂದ ಅವ್ಯಕ್ತಮಾದ ರೂಪ ಗುಣಮುಳ್ಳ ರೂಪತನ್ಮಾತ್ರಂ ಪುಟ್ಟುಗುಂ. ಈ ರೂಪತನ್ಮಾತ್ರದಿನ್ದ ಅವ್ಯಕ್ತಮಾದ ರೂಪಗುಣಮುಳ್ಳ ತೇಜಸ್ಸು ಪುಟ್ಟುಗುಂ. ಈ ತೇಜಸ್ಸನೊಡಗೂಡಿದ ರೂಪತನ್ಮಾತ್ರದಿಂದ ಅವ್ಯಕ್ತಮಾದ ರಸಗುಣಮುಳ್ಳ ರಸತನ್ಮಾತ್ರಂ ಪುಟ್ಟುಗುಂ. ಈ ರಸತನ್ಮಾತ್ರದಿಂದ ಅವ್ಯಕ್ತಮಾದ ರಸಗುಣಮುಳ್ಳ ಜಲಂ ಪುಟ್ಟುಗುಂ. ಈ ಜಲದೊಡಗೂಡಿದ ರಸತನ್ಮಾತ್ರದಿಂದ ಅವ್ಯಕ್ತಮಾದ ಗನ್ಧಗುಣಮುಳ್ಳ ಗನ್ಧತನ್ಮಾತ್ರಂ ಪುಟ್ಟುಗುಂ. ಈ ಗನ್ಧತನ್ಮಾತ್ರದಿಂದ ಅವ್ಯಕ್ತಮಾದ ಗಂಧಗುಣಮುಳ್ಳ ಪೃಥಿವೀ ಪುಟ್ಟುಗುಂ. ರಾಜಸಾಹಂಕಾರಮೆಂಬುದು ಸಾತ್ತ್ವಿಕಾಹಂಕಾರದಿಂದೇಕಾದಶೇನ್ದ್ರಿಯಂಗಳ್ ಪುಟ್ಟುವುದಕ್ಕಂ, ತಾಮಸಾಹಂಕಾರದಿಂ ಪಞ್ಚತನ್ಮಾತ್ರಂಗಳುಂ ಪಞ್ಚಭೂತಂಗಳುಂ ಪುಟ್ಟುವುದಕ್ಕಂ ಸಹಾಯಮಾಗಿರ್ಪುದು. ಇನ್ತು ಪ್ರಕೃತಿಮಹತ್ತುಮಹಂಕಾರಂಗಳುಂ ಏಕಾದಶೇನ್ದ್ರಿಯಂಗಳುಂ ಪಞ್ಚಭೂತಂಗಳುಂ ಎನ್ಬಿಪ್ಪತ್ತನಾಲ್ಕುಂ ತೆರನಾದ ಅಚೇತನಪ್ರಕೃತಿತತ್ತ್ವಕ್ಕಂ ಚೇತನಮಾದ ಜೀವತತ್ತ್ವಕ್ಕಂ ಪಿರಿಯನಪ್ಪುದರಿಂ, ನೀನೇ ಪರತತ್ತ್ವಮೆನ್ದು ಪಿರಿಯರಿಂ ಕೇಳ್ದು ನಿನ್ನನೆ ನೆನೆವಿಪ್ಪೆನ್ನ ದಯಾಮೃತದೊಳ್ನೆನೆದು ತಣ್ಪುವೆತ್ತ ನಿನ್ನ ಕಡೆಗಣ್ಬೆಳಗನೊಳ್ಪೊಳಸಿ, ಎನ್ನ ರಜಸ್ತಮೋಗುಣಂಗಳೆಂಬ ಕಳೆಯಂ ಕಳೆದು, ಸತ್ತ್ವಗುಣಮಂ ಬೆಳ್ಚಿರ್ಪುದು ಪೇಳ್ಚಿರ್ಪುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ ! * * * * *

## — ಪದಿಮೂರನೆಯ ಬಿನ್ನಪಂ. —

ಕಂ ॥ ಪಲವುಮಜಾಣ್ಡಗಳನೀಂ ।
ಜಲಬುದ್ಬುದದನ್ತೆ ಪೊಣ್ಮಿಪೈಯೆನ್ದೊರೆದಂ ॥
ಜಲರುಹನಾಭನ ಮೆಲ್ಲಡಿ ।
ಗೊಲವಿಂ ಸಂಗ್ರಾಮರಾಮನೊಳ್ಬಿನ್ನಪಮಂ ॥

ಅನೇಕ ಕೋಟಿ ಬ್ರಹ್ಮಾಂಡನಾಯಕ ! ನೀಂ ಜೀವರೊಳ್ದಯೆಗೆಯ್ದು ಅವರ್ಗೆ ಕರಣಕಳೇಬರಾದಿಗಳಂ ಕೊಡಲೆಳಸಿ, ಆ ಶರೀರದಿಂದವರು ಕರ್ಮಂಗಳನೆಸಗಲುಂ, ಆ ಕರ್ಮಫಲಂಗಳನನುಭವಿಸಲುಂ, ತಾಣವಾದ ಬ್ರಹ್ಮಾಂಡಮಂ ಸಮೆದೈ. ಅದೆಂತೆನೆ:— ಮುನ್ನೀಂ ಸೃಜಿಸಿದ ಪಞ್ಚಮಹಾಭೂತಂಗಳುಮೊಂದರೊಳೊನ್ದುಂ ಬೆರೆಸದೆ ಬೇರೆ ಬೇರಾಗಿಪ್ಪುದರಿಂದೊಂದು ಕಾರ್ಯಕ್ಕಂ ಬಾರದಿಪ್ಪುದಂ ಕಂಡು, ಅವೆಲ್ಲಮಂ ಪಂಚೀಕರಣ ಪ್ರಕಾರದಿಂದೊಂದುಗೂಡಿಸಿದೈ. ಪಂಚೀಕರಣಮೆನೆ :— ಪಞ್ಚಮಹಾಭೂತಂಗಳೊಳೊಂದು ಮಹಾಭೂತದಂಶದರ್ಧಮುಂ, ಮಿಕ್ಕ ನಾಲ್ಕುಂ ಮಹಾಭೂತಂಗಳ ನಾಲ್ಕಂಶಂಗಳುಮರ್ಧಮಾಗಿ ಕೂಡಿಸೆ, ಒಂದು ವಸ್ತುವೆನಿಪ್ಪುದು. ಅದರೊಳಾಕಾಶಮರ್ಧಮುಂ ವಾಯು ತೇಜೋ ಜಲ ಪೃಥ್ವಿಗಳಷ್ಟಮಾಂಶಂಗಳುಮರ್ಧಮಾಗಿ ಈ ಎರಡರ್ಧಂಗಳನೊಂದುಗೂಡಿಸೆ, ಇದು ಪಂಚೀಕೃತಾಕಾಶಮೆನಿಕ್ಕುಂ. ಮತ್ತಂ ವಾಯ್ವಂಶಮರ್ಧಮುಂ ಮಿಕ್ಕ ನಾಲ್ಕುಂ ಭೂತಂಗಳಷ್ಟಮಾಂಶಂಗಳ್ ನಾಲ್ಕುಂ ಕೂಡಿ ಪಂಚೀಕೃತವಾಯುವೆನಿಕ್ಕುಂ. ಮತ್ತಂ ತೇಜೋಂಶಮರ್ಧಮುಂ ಮಿಕ್ಕನಾಲ್ಕುಂ ಭೂತಂಗಳಷ್ಟಮಾಂಶಂಗಳ್ ನಾಲ್ಕುಂ ಕೂಡಿ, ತೇಜಸ್ಸೆನಿಕ್ಕುಂ. ಮತ್ತಂ ಜಲಾಂಶಮರ್ಧಮುಂ ಮಿಕ್ಕ ನಾಲ್ಕುಂ ಭೂತಂಗಳಷ್ಟಮಾಂಶಂಗಳ್ ನಾಲ್ಕುಂ ಕೂಡಿ ಜಲಮೆನಿಕ್ಕುಂ. ಮತ್ತಂ ಪೃಥ್ವ್ಯಂಶಮರ್ಧಮುಂ ಮಿಕ್ಕ ಭೂತಂಗಳಷ್ಟಮಾಂಶಂಗಳ್ ನಾಲ್ಕುಂ ಕೂಡಿ ಪೃಥಿವಿಯೆನಿಕ್ಕುಂ. ಇನ್ತು ಪಂಚೀಕೃತ ಮಹಾಭೂತಂಗಳೊಂದದರೊಳ್ ಮಿಕ್ಕಂ ನಾಲ್ಕುಂ ಭೂತಂಗಳ್ ಬೆರದಿರ್ದೊಡಂ ಒಂದು ಭೂತದಂಶದರ್ಧಮುಂ ಮಿಕ್ಕ ಭೂತಂಗಳಷ್ಟಮಾಂಶಮುಮಾಗಿ ಪೇರ್ಚುಕುನ್ದಾಗಿ, ಐದು ರಾಶಿಗಳಪ್ಪುದರಿಂದಾವ ರಾಶಿಯೊಳಾವ ಭೂತಾಂಶಮಧಿಕಮಾಗಿಕ್ಕುಂ, ಆ ರಾಶಿಗಾಭೂತದ ಪೆಸರಕ್ಕುಂ. ಇನ್ತಿರ್ಪ ಪಂಚ ಮಹಾಭೂತಂಗಳುಂ ಮಹದಹಂಕಾರ ತತ್ವಂಗಳುಂ ಕೂಡಿ, ಏಳುಂ ವಸ್ತುಗಳಂ ಬ್ರಹ್ಮಾಂಡಮನುಣ್ಟುಮಾಳ್ಪಲ್ಲಿ, ಮಡಕೆಗೆಯ್ವ ಕುಲಾಲಾದಿಗಳಂತೆ ಶರೀರಾಯಾಸಮಿಲ್ಲದೆ ನೀರೊಳ್ಬೊಬ್ಬುಳಿಯಂ ಪೊಣ್ಮಿಸುವನ್ತೆ, ನಿನ್ನಿಚ್ಛಾಮಾತ್ರದಿಂ ಪೊಣ್ಮಿಸಿದೈ. ಆ

ಬಳಿಕೆ, ಬ್ರಹ್ಮಾಣ್ಡದೊಳ್ ಪುಟ್ಟುವ ದೇವಮನುಷ್ಯತಿರ್ಯಕ್ಸ್ಥಾವರ ಸೃಷ್ಟಿಗಳನಾಳಿಟ್ಟು ಗೆಯ್ವುವನೆಂದು, ನಾಲ್ಮೊಗನಂ ಪಡೆವೈ. ಇನ್ತು ನೀನೇ ಗೆಯ್ವ ತತ್ವಸೃಷ್ಟಿಯುಂ, ಅಣ್ಡಸೃಷ್ಟಿಯುಂ, ಬ್ರಹ್ಮಸೃಷ್ಟಿಯುಂ, ಸಮಷ್ಟಿಸೃಷ್ಟಿಯೆನಿಕ್ಕುಂ. ಬಳಿಕೆ ಚತುರ್ಮುಖನಿಂ ಗೆಯ್ವುವ ದೇವಾದಿಸೃಷ್ಟಿ ವ್ಯಷ್ಟಿಸೃಷ್ಟಿಯೆನಿಕ್ಕುಂ. ಈ ಪೇಳ್ದ ಬ್ರಹ್ಮಾಣ್ಡದನ್ತೆ ಪಲವುಂ ಬ್ರಹ್ಮಾಣ್ಡಂಗಳಂ ನೀನೊರ್ವನೇ ಸೃಜಿಸಿ, ಆಳಿಟ್ಟು ಕಜ್ಜಂಗೊಂಬುದರಿಂದೆ ಅನೇಕಕೋಟಿ ಬ್ರಹ್ಮಾಣ್ಡನಾಯಕನೆನಿಸುವೈ. ಈ ಜಗದ್ವ್ಯಾಪಾರವ್ಯಾಸಂಗದೊಳೆನ್ನಂ ಮರೆಯದೆ ನಿನ್ನ ದಯಾರ್ದ್ರಚಿತ್ತದಿಂ ನೆನೆವುದು ನೆನೆವುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ! * * *

## — ಪದಿನಾಲ್ಕನೆಯ ಬಿನ್ನಪಂ —

ಕಂ ॥ ಅನಿತುಂ ಕರ್ಮಫಲಂಗಳ ।
ನನುಭವಿಸುವಕಾರಣಮಾದ ಭುವನಂಗಳನೀ ॥
ನನುಗೊಳಿಸಿದಪ್ಪೆಯೆನ್ದಾ ।
ದನುಜಾರಿಗೆಪೇಳ್ದನೊಲ್ದು ಗಣ್ಡರಗಣ್ಡಂ ॥

ಸಕಲಭುವನಾಧಾರಾ! ಭುವನಂಗಳ್ಪದಿನಾಲ್ಕುಂ, ಅವೆಲ್ಲಮುಂ ಬ್ರಹ್ಮಾಣ್ಡದೊಳಿರ್ಕುಂ. ಅದೆನ್ತೆನೆ:— ಬ್ರಹ್ಮಾಣ್ಡಮೆಂಬುದು ಭರಣಿಯನ್ತೆ ಬಟ್ಟತಾಗಿರ್ಕುಂ. ಅದರೊಳಗಣಮುಬ್ಬ ಆವ ದಿಕ್ಕಿನೊಳಮೈಯ್ವತ್ತು ಕೋಟಿ ಯೋಜನದಳತೆಯಾಗಿರ್ಕುಂ; ಅದರೊಳ್ಕೆಳಗಣಿಂದಣ್ಡಭಿತ್ತಿವಿಡಿದು ಮೇಗಣ್ಗೆ ಗರ್ಭೋದಕಮಿರ್ಪ ತಾವು ಎಪ್ಪತ್ತು ಮೂರು ಲಕ್ಷದಯ್ವತ್ತು ಸಾವಿರ ಯೋಜನಮಾಗಿರ್ಕುಂ. ಅದರ್ಕೆ ಮೇಲೆ ಬಯಲಾಗಿರ್ಪ ತಾವು, ಇಪ್ಪತ್ತು ನಾಲ್ಕು ಕೋಟಿಯುಂ ಪದಿನಾಲ್ಕು ಲಕ್ಷಮುಂ ನಾಲ್ವತ್ತೆಂಟು ಸಾವಿರಯೋಜನಮಾಗಿರ್ಕುಂ. ಅಲ್ಲಿ ತೆಂಕಣ ಭಾಗದಲ್ಲಿ ರೌರವಾದಿ ನರಕಂಗಳಾಗಿರ್ಕುಂ. ಅದರ್ಕೆ ಮೇಲೆ ಶೇಷಲೋಕಮೆಂಬುದು ಮೂವತ್ತೆರಡು ಸಾವಿರ ಯೋಜನಮಾಗಿರ್ಕುಂ; ಅದರ್ಕೆ ಮೇಲೆ ಭೂಮಿ ಎಳತು

ಸಾವಿರ ಯೋಜನದೊಳಗೆ ಬಂದೊನ್ದು ಹತ್ತು ಸಾವಿರ ಯೋಜನವಾಗಿ ಮೇಲ್ಕನೆಯ ಮರ್ಯಾದೆಯಲ್ಲಿ ಪಾತಾಳಾದಿಯಾಗಿ ಸಪ್ತಲೋಕಂಗಳಾಗಿರ್ಕ್ಕುಂ. ಭೂಮಿಗೆ ಮೇಲೆ ಸೂರ್ಯಮಂಡಲ ಪರ್ಯನ್ತಮೊಂದು ಲಕ್ಷ ಯೋಜನವಾಗಿರ್ಕ್ಕುಂ. ಅನ್ತು ಕೆಳಗಣಂಡದ ಭಿತ್ತಿವಿಡಿದು ಸೂರ್ಯಮಣ್ಡಲ ಪರ್ಯನ್ತಕ್ಕೆ ಇಪ್ಪತ್ತೈದು ಕೋಟಿ ಯೋಜನವಾಗಿರ್ಕ್ಕುಂ. ಅದರ್ಕ್ಕೆ ಮೇಲೆ ಚಂದ್ರಮಂಡಲಂ ಒಂದು ಲಕ್ಷ ಯೋಜನದಲ್ಲಿಯುಂ, ಅದರ್ಕ್ಕೆ ಮೇಲೆ ನಕ್ಷತ್ರ ಮಂಡಲಮೊಂದು ಲಕ್ಷ ಯೋಜನದಲ್ಲಿಯುಮಿರ್ಕ್ಕುಂ. ಅದರ್ಕ್ಕೆ ಮೇಲೆ ಎರಡು ಲಕ್ಷ ಯೋಜನದಲ್ಲಿ ಬುಧನುಂ, ಅದರ್ಕ್ಕೆ ಮೇಲೆರಡುಲಕ್ಷ ಯೋಜನದಲ್ಲಿ ಶುಕ್ರನುಂ, ಅದರ್ಕ್ಕೆ ಮೇಲೆರಡು ಲಕ್ಷ ಯೋಜನದಲ್ಲಿ ಮಙ್ಗಳನುಂ, ಅದಕ್ಕೆ ಮೇಲೆರಡು ಲಕ್ಷ ಯೋಜನದಲ್ಲಿ ಬೃಹಸ್ಪತಿಯುಂ, ಅದರ್ಕ್ಕೆ ಮೇಲೆರಡು ಲಕ್ಷ ಯೋಜನದಲ್ಲಿ ಶನೈಶ್ಚರನುಮಿರ್ಕ್ಕುಂ; ಅದರ್ಕ್ಕೆ ಮೇಲೊಂದು ಲಕ್ಷ ಯೋಜನದಲ್ಲಿ ಸಪ್ತರ್ಷಿಮಣ್ಡಲಮುಂ, ಅದರ್ಕ್ಕೆ ಮೇಲೊಂದು ಲಕ್ಷ ಯೋಜನದಲ್ಲಿ ಜ್ಯೋತಿಶ್ಚಕ್ರ ಕೂಟಸ್ಥನಾದ ಧ್ರುವನುಮಿರ್ಕ್ಕುಂ. ಅಂತು ಸೂರ್ಯಮಣ್ಡಲದಿಂದೆ ಧ್ರುವ ಮಣ್ಡಲಪರ್ಯನ್ತಂ ಪದಿನಾಲ್ಕು ಲಕ್ಷ ಯೋಜನಮುಂ ಸುವರ್ಲೋಕಮೆನಿಸಿ, ಇಂದ್ರಾದಿದೇವತೆಗಳ ಸ್ಥಾನವಾಗಿರ್ಕ್ಕುಂ. ಅದರ್ಕ್ಕೆ ಮೇಲೊಂದು ಕೋಟಿಯೋಜನಮುಂ ಮಹರ್ಲೋಕಮೆನಿಸಿ, ಮೊದಲಿಂದ್ರಾದಿಪದದೊಳಿರ್ದು ಪಟ್ಟಮಂ ತೆಗೆದ ದೇವತೆಗಳ ಸ್ಥಾನವಾಗಿರ್ಕ್ಕುಂ; ಅದರ್ಕ್ಕೆ ಮೇಲೆರಡುಕೋಟಿಯೋಜನಮುಂ ಜನೋಲೋಕಮೆನಿಸಿ, ಬ್ರಹ್ಮಪುತ್ರರಾದ ಸನಕಾದಿಮುನಿಗಳ ಸ್ಥಾನವಾಗಿರ್ಕ್ಕುಂ; ಅದರ್ಕ್ಕೆ ಮೇಲೆಣ್ಟುಕೋಟಿಯೋಜನಮುಂ ತಪೋಲೋಕ ಮೆನಿಸಿ, ಓಂಕಾರಾದಿ ಪರಮಋಷಿಗಳ ಸ್ಥಾನಮಾಗಿರ್ಕ್ಕುಂ; ಅದರ್ಕ್ಕೆ ಮೇಲೆ ಪನ್ನೆರಡು ಕೋಟಿಯೋಜನಮುಂ ಸತ್ಯಲೋಕಮೆನಿಸಿ ಚತುರ್ಮುಖಬ್ರಹ್ಮಸ್ಥಾನವಾಗಿರ್ಕ್ಕುಂ; ಅದರ್ಕ್ಕೆ ಮೇಲೊಂದುಂ ಕೋಟಿಯುಮೆಣ್ಬತ್ತಾರುಲಕ್ಷ ಯೋಜನಮುಂ ಬಯಲಾಗಿರ್ಕ್ಕುಂ. ಅಂತು ಸೂರ್ಯಮಣ್ಡಲದಿಂದೆ ಮೇಗಣಣ್ಡಭಿತ್ತಿಪರ್ಯಂತಕ್ಕೆ ಇಪ್ಪತ್ತೈದು ಕೋಟಿಯುಂ, ಕೆಳ

ಗಣ್ಡಭಿತ್ತಿಪರ್ಯನ್ತಕ್ಕೆ ಇರ್ಪತ್ತೈದು ಕೋಟಿ ಯೋಜನಮುಮಾಗಿ, ಬ್ರಹ್ಮಾಣ್ಡಮೈವತ್ತು ಕೋಟಿ ಯೋಜನ ಮುದ್ದಮಾಗಿರ್ಕುಂ. ಇದರೊಳ್ನೆರೆಯುಪ್ಪರಿಗೆಯನ್ತೆ ಪದಿನಾಲ್ಕುಂ ಭುವನಂಗಳೊಳಿರ್ಪ ಸಕಲಪ್ರಾಣಿಗಳ ಸ್ವರೂಪಸ್ಥಿತಿಪ್ರವೃತ್ತಿಗಳ್ಗೆ ನೀನೇ ಕಾರಣಮಾಗಿರ್ಪುದರಿಂ ಸಕಲಭುವನಾಧಾರನೆನಿಸುವೈ. ಅದರಿಂದೆ ಎನ್ನ ಸ್ವರೂಪರೂಪಸ್ಥಿತಿಗಳ್ ನಿನ್ನಧೀನಮಾಗಿರ್ಪುವೆನ್ದು ಪರಿಯುರಿಂ ಕೇಳ್ದು, ಎನ್ನ ಹಿತಾಹಿತದೊಳಾಂ ಕೈಪೆಗೆಪರ್ಪೆಂ; ಎನ್ನಂ ಸಲಹುವ ಸೈಪು ನಿನ್ನದು ನಿನ್ನದನನ್ಯಜನ ಸುಲಭ, ಶ್ರೀ ಯದುಶೈಲವಲ್ಲಭಾ ! * * *

— ಪದಿನೈದನೆಯ ಬಿನ್ನಪಂ —

ಕಂ ॥ ಅರ್ಣವಭೂಧರತಟಿನೀ।
ತೀರ್ಣಧರಾವಲಯಮನಿತುಮಂಸಮಷ್ಟ್ಯೆ ನಿ...
ನಿರ್ಣೀತಮುಂದುಂ ಶೌರಿಗೆ।
ಕರ್ಣಾಟಕಚಕ್ರವರ್ತಿ ಬಿನ್ನತಿಗೆಯ್ದಂ ॥

ಅಖಿಲಭೂಮಣ್ಡಲಾಧೀಶ್ವರ! ಭೂಮಿ ಬಳಸಿ ಅಣ್ಡಭಿತ್ತಿ ಬಳ್ಸಿತ್ತಾಗಿರ್ಪುದರಿಂದಾವನಿಬ್ಬನೊಳಂ ಐವತ್ತು ಕೋಟಿ ಯೋಜನಮಾಗಿರ್ಕುಂ. ಅದೆನ್ತೆನೆ— ಭೂಮಧ್ಯದೊಳ್ ಜಮ್ಬೂದ್ವೀಪಂ ಬಳ್ಸಿತ್ತಾಗಿ ಅವನಿಬ್ಬನೊಳಂ ಲಕ್ಷಯೋಜನಪ್ರಮಾಣಮಾಗಿರ್ಕುಂ. ಈ ಜಮ್ಬೂದ್ವೀಪಮಧ್ಯದೊಳ್ ಮಹಾಮೇರು ಸುವರ್ಣಮಯಮಾಗಿ ಕೆಳಗೆ ಪದಿನಾರು ಸಾವಿರ ಯೋಜನದಗಲಮುಂ, ಮಸ್ತಕದ ಮೇಲೆ ಮೂವತ್ತೆರಡು ಸಾವಿರ ಯೋಜನದಗಲಮುಮಾಗಿ ಚತುರಸ್ರಮಾಗಿ, ಚೆಲ್ಲಮುಂ ತಲೆಕೆಳಕಾಗಿರಿಸಿದನ್ತೆ ಇರ್ಪುದು. ಈ ಜಂಬೂದ್ವೀಪಮಂ ಬಳಸಿದ ಲವಣಸಮುದ್ರಮೊಂದು ಲಕ್ಷಯೋಜನವಗಲಮುಂ, ಇದಂ ಬಳಸಿದ ಪ್ಲಕ್ಷದ್ವೀಪಮೆರಡುಲಕ್ಷಯೋಜನಮುಂ, ಇದಂ ಬಳಸಿದ ಇಕ್ಷುಸಮುದ್ರಮೆರಡುಲಕ್ಷಯೋಜನಮುಂ, ಇದಂ ಬಳಸಿದ ಶಾಲ್ಮಲಿದ್ವೀಪಂ ನಾಲ್ಕುಲಕ್ಷಯೋಜನಮುಂ, ಇದಂ ಬಳ

ಸಿದ ಸುರಾಸಮುದ್ರಂ ನಾಲ್ಕುಲಕ್ಷಯೋಜನಮುಂ, ಇದಂ ಬಳಸಿದ ಕುಶದ್ವೀಪಂ ಎಣ್ಟುಲಕ್ಷಯೋಜನಮುಂ, ಇದಂಬಳಸಿದ ಘೃತಸಮುದ್ರಂ ಎಣ್ಟುಲಕ್ಷಯೋಜನಮುಂ, ಇದಂಬಳಸಿದ ಕ್ರೌಂಚದ್ವೀಪಂ ಪದಿನಾರುಲಕ್ಷಯೋಜನಮುಂ, ಇದಂಬಳಸಿದ ದಧಿಸಮುದ್ರಂ ಪದಿನಾರುಲಕ್ಷಯೋಜನಮುಂ, ಇದಂಬಳಸಿದ ಶಾಕದ್ವೀಪಂ ಮೂವತ್ತೆರಡುಲಕ್ಷಯೋಜನಮುಂ, ಇದಂಬಳಸಿದ ಕ್ಷೀರಸಮುದ್ರಂ ಮೂವತ್ತೆರಡುಲಕ್ಷಯೋಜನಮುಂ, ಇದಂಬಳಸಿದ ಪುಷ್ಕರದ್ವೀಪಂ ಅರುವತ್ತನಾಲ್ಕುಲಕ್ಷಯೋಜನಮುಂ, ಇದಂಬಳಸಿದ ಸ್ವಾದೂದಕಸಮುದ್ರಂ ಅರುವತ್ತನಾಲ್ಕುಲಕ್ಷಯೋಜನಮುಮಾಗಿರ್ಕ್ಕುಂ; ಈ ಪಯಿನಿತುಂ ಮನುಷ್ಯಪ್ರಾಣಿಗಳಸಂಚಾರಯೋಗ್ಯಮಾಗಿರ್ಕ್ಕುಂ. ಇದರಪೊರವಳೆಯುಂ ಪ್ರಾಣಿಸಂಚಾರಯೋಗ್ಯಮಲ್ಲದೆ ಕನ್ನಡಿಯನ್ತೆ ನಿರ್ಮ್ಮಲಮಾಗಿ ಸುವರ್ಣ್ಣಮಯಮಾಗಿರ್ಪ್ಪ ಭೂಮಿ ಪತ್ತುಕೋಟಿಯುಂ ಪದಿನಾಲ್ಕುಲಕ್ಷಯೋಜನವಗಲಮುಮಾಗಿರ್ಕ್ಕುಂ. ಇದಂ ಬಳಸಿದ ಲೋಕಾಲೋಕಪರ್ವತಂ ಪತ್ತುಸಾವಿರ ಯೋಜನಮುದ್ದಮುಂ, ಪತ್ತುಸಾವಿರಯೋಜನವಗಲಮುಮಾಗಿರ್ಕ್ಕುಂ. ಇದಂ ಬಳಸಿದನ್ಧಕಾರ ಭೂಮಿ ಅಣ್ಡಕಟಾಹಪರ್ಯ್ಯನ್ತಕ್ಕೆ ಪನ್ನೆರಡುಕೋಟಿಯುಂ ಮೂವತ್ತೆರಡುಲಕ್ಷಮುಂ ನಾಲ್ವತ್ತುಸಾವಿರಯೋಜನವಗಲಮುಮಾಗಿರ್ಕ್ಕುಂ.

ಇಂತು ಭೂಮಧ್ಯಬಿಂದುವೊನ್ದು ಪಕ್ಕದಣ್ಡಭಿತ್ತಿಪರ್ಯ್ಯನ್ತಕ್ಕೆ ಇಪ್ಪತ್ತೈದು ಕೋಟಿಯೋಜನವಿಸ್ತಾರಮಾಗಿರ್ಕ್ಕುಂ. ಅದೆನ್ತೆನೆ:— ಜಮ್ಬೂದ್ವೀಪಮಧ್ಯದಿನ್ದೆ ಲವಣಸಮುದ್ರಪರ್ಯ್ಯನ್ತಕ್ಕೆ ಐವತ್ತು ಸಾವಿರಯೋಜನಮುಂ, ಮಿಕ್ಕಾರು ದ್ವೀಪಂಗಳುಮೇಳುಂ ಸಮುದ್ರಂಗಳುಂ ಕೂಡಿ ಎರಡು ಕೋಟಿಯುಮೈವತ್ತು ಮೂರ ಲಕ್ಷಯೋಜನಮುಂ, ಸುವರ್ಣ್ಣಭೂಮಿ ಪತ್ತುಕೋಟಿಯುಂ ಪದಿನಾಲ್ಕುಲಕ್ಷಯೋಜನಮುಂ, ಲೋಕಾಲೋಕಪರ್ವತಂ ಪತ್ತು ಸಾವಿರಯೋಜನಮುಂ, ಅನ್ಧಕಾರಭೂಮಿ ಪನ್ನೆರಡುಕೋಟಿಯುಂ ಮೂವತ್ತೆರಡು ಲಕ್ಷಮುಂ ನಾಲ್ವತ್ತುಸಾವಿರಯೋಜನಮುಂ, ಕೂಡಿ ಇಪ್ಪತ್ತೈದು ಕೋಟಿಯೋಜನಮಾಗಿರ್ಕ್ಕುಂ. ಇನ್ತು ಮೇರುಮಧ್ಯದಿನೊನ್ದು ದಿಕ್ಕು ಇಪ್ಪತ್ತೈದು ಕೋಟಿ ಯೋಜನ ವಿಸ್ತಾರಮಾಗಿರ್ಪ್ಪುದರಿಂ ಭೂಮಣ್ಡ

ಲವಿತ್ತಣಣ್ಡಭಿತ್ತಿಯಿನ್ದತ್ತಣಂಡಭಿತ್ತಿಪರ್ಯನ್ತಕ್ಕೈವತ್ತುಕೋಟಿಯೋಜನವಿಸ್ತಾರವಾಗಿರ್ಪ್ಪ. ಇನ್ತಪ್ಪಭೂಮಂಡಲಂ ಪ್ರಳಯಾಮ್ಬುಧಿಯೊಳ್ಮುಳುಂಗಿದನ್ದು ನೀವೆತ್ತಿ ಪೊರೆದುದರಿಂದಖಂಡಭೂಮಂಡಲಾಧೀಶ್ವರನೆನಿಸುವೈ. ನಿನ್ನೈಶ್ವರ್ಯಮಂ ಕೆಡೆಗೊಣ್ಬುಡೆ ಅಮ್ಬುಜಸಮ್ಭವಾದಿಗಳ್ಗಮರಿದಾದೊಡಂ ಮರುಕದಿನ್ದೆನ್ನ ಬಿನ್ನಣಮಿರ್ದನಿತುಬಿನ್ನವಿಪೆನಿದಂ ಮನ್ನಿಪುದು ಮನ್ನಿಪುದು ಅನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ! * * *

— ಪದಿನಾರನೆಯ ಬಿನ್ನಪಂ —

ಕಂ ॥ ಮೇದಿನಿಯೊಳೆಸೆವಸಗ್ಗದ ।
ಭೇದಙ್ಗಳನುಣ್ಬವಾಡಿದೈನೀನೆಂದಾ ॥
ಕೈದುವಿಡಿದರೊಳ್ಗಂಡಂ ।
ಯಾದವಗಿರಿನಾಥನಡಿಗೆಬಿನ್ನತಿಗೆಯ್ದಂ ॥

ನಿಖಿಲಭೋಗಪ್ರದಾ! ಭೋಗಮೆಂಬುದು ಸುಖದುಃಖಾನುಭವಂ; ಈದುಃಖಾನುಭವದೇಶಂ ನರಕಮೆನಿಪ್ಪುದು, ಸುಖಾನುಭವದೇಶಂ ಸ್ವರ್ಗಮೆನಿಪ್ಪುದು. ಈ ಸುಖಾನುಭವವಾದ ಸ್ವರ್ಗಂಗಳ್ಪದಿನಾಲ್ಕುಂ ಲೋಕಂಗಳೊಳವೊಳವು. ಅವರಲ್ಲಿ ಭೂಮಿಯೊಳಿರ್ಪ್ಪಸ್ವರ್ಗಂಗಳ್ ಭೂಸ್ವರ್ಗಂಗಳೆನಿಪ್ಪುವು. ಆವಾವುವೆಂದೊಡೆ:— ಜಮ್ಬೂದ್ವೀಪದ ನವವರ್ಷಂಗಳೊಳ್ ಭಾರತವರ್ಷಮೊಂದನುಳಿದು ಮಿಕ್ಕಿನೆಣ್ಟುವರ್ಷಂಗಳುಂ, ವರ್ಷಪರ್ವತಂಗಳುಂ, ಮಹಾಮೇರುವುಂ, ಪ್ಲಕ್ಷಶಾಲ್ಮಲಕುಶಕ್ರೌಂಚಶಾಕಂಗಳೆಮ್ಬ ಅಯ್ದುಂ ದ್ವೀಪಂಗಳೊಳಿರ್ಪ್ಪ ಮೂವತ್ತೆರಡುಂ ವರ್ಷಗಳುಂ ಅನಿತುಂವರ್ಷಪರ್ವತಂಗಳುಂ, ಪುಷ್ಕರದ್ವೀಪದೊಳಿರ್ಪ್ಪ ಎರಡುಂವರ್ಷಂಗಳುಂ, ವರ್ಷಪರ್ವತಮೊಂದುಂ, ಇನಿತುಂ ಭೂಸ್ವರ್ಗಂಗಳೆನಿಪ್ಪುವು. ಇವರಲ್ಲಿ ಜಮ್ಬೂದ್ವೀಪದೊಳಿರ್ಪ್ಪ ಎಣ್ಟುಂ ವರ್ಷಂಗಳೊಳಂ, ಪುಷ್ಕರದ್ವೀಪದೊಳಿರ್ಪ್ಪ ಎರಡುಂ ವರ್ಷಂಗಳೊಳಂ, ಮನುಜರೆಲ್ಲರ್ಗಂ ಪತ್ತುಸಾಸಿರ ಬರಿಸದಾಯುಸ್ಸುಣ್ಟಾಗಿರ್ಪ್ಪಂ; ರೋಗಮುಂ ಈರ್ಷ್ಯಾಸೂಯಾದಿಗಳೊಂದುಮಿಲ್ಲದಿರ್ಪ್ಪಂ; ಎಲ ಗು

ಮುತ್ತಮ ಜಾತಿಯಾಗಿರ್ಪ್ಪುದರಿಂ ಜಾತಿಯೊಳ್ಪೆರ್ಚ್ಚುಕುಂದುಗ
ಳಿಲ್ಲದಿರ್ಕ್ಕುಂ.* ಜಾತಿಭೇದವಿಲ್ಲದುದರಿಂದೆ ಆಚಾರಭೇದವಿಲ್ಲದಿ
ರ್ಕ್ಕುಂ. ಇಲ್ಲಿರ್ಪ್ಪ ಮನುಜರೆಲ್ಲರುಮಾವಗಂ ಪಸಿವುಂ ತೃಷೆ
ಯುಮಿಲ್ಲದೆ, ಪರಮಸಂತುಷ್ಟರಾಗಿ ದೇವತೆಗಳುಂ ತಾವುಂ ಸಮಾ
ನ ವೇಷಮುಂ, ಸಮಾನ ಬುದ್ಧಿಯುಂ, ಸಮಾನ ಶಕ್ತಿಯುಮಾಗಿರ್ಪ
ರ್. ಪ್ಲಕ್ಷ ಶಾಲ್ಮಲ ಕುಶ ಕ್ರೌಂಚ ಶಾಕದ್ವೀಪಂಗಳೊಳಿರ್ಪ್ಪ ಮೂ
ವತ್ತೈದುಂ ವರ್ಷಂಗಳೊಳಂ, ವರ್ಷಪರ್ವತಂಗಳೊಳಂ, ಕಾಲಮಾ
ವಗಂ ತ್ರೇತಾಯುಗ ಸಮಮಾಗಿಯೇ ಇರ್ಪ್ಪುದು. ಇಲ್ಲಿಯ ಮ
ನುಷ್ಯರುಂ ದೇವ ಗಂಧರ್ವರುಮೊಡನಾಡುತ್ತಂ, ಎಯ್ದು ಸಾಸಿರಂ ಬರಿ
ಸದಾಯುಸ್ಸುಂಟಾಗಿ, ಆಧಿ ವ್ಯಾಧಿ ಗಳೊಂದು ಮಿಲ್ಲದೆ ಸುಖಮೊಳಿ
ರ್ಪ್ಪರ್. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ಶುದ್ಧಜಾತಿಯವ
ರಾಗಿ, ಸದಾಚಾರಸಂಪನ್ನರಾಗಿರ್ಪ್ಪರಲ್ಲದೆ, ಒರ್ವರುಂ ಸಂಕರಜಾ
ತಿಯವರಲ್ಲದಿರ್ಪರ್. ಇವರೊಳಂ ಇಳಾವೃತ ವರ್ಷದೊಳ್ಪಲವುಂ
ಪಲವುಂ ಭೋಗಂಗಳಾಸ್ಪದವಾಗಿ, ರಮಣೀಯವಾದ ಸ್ಥಾನಂಗ
ಳಿರ್ಪ್ಪುವು. ಅವಾವುವೆನೆ:— ಮಹಾ ಮೇರು ಚಲಿಸದನ್ತೆ, ನಾ
ಲ್ಕುಂ ದೆಸೆಯೊಳುಂ ಬಲಿದ ಕೀಲ್ಗಳಂತೆ, ನಾಲ್ಕುಂ ಪರ್ವತಂಗಳಿರ್ಪ್ಪ
ವು. ಅದರೊಳ್ ಮೂಡ ದೆಸೆಯಲ್ಲಿ ಮಂದರ ಪರ್ವತಮಿರ್ಪ್ಪುದು.
ಅದರ ಮೇಲೆ ಸಾಸಿರದ ನೂರು ಯೋಜನದುದ್ದವಾದ ಕಡಬದ ಮ
ರನಿರ್ಕ್ಕುಂ. ಆಮರಕ್ಕೆ ಸಾಸಿರ ಪೇರ್ಗೊಂಬುಗಳುಂ, ಪತ್ತುಸಾ
ಸಿರ ಕೀರ್ಗೊಂಬುಗಳುಮಾಗಿ, ಸರ್ವಕಾಲದೊಳಂ ಪೂಗಳುಂ
ಫಲಂಗಳುಮುಂಟಾಗಿ, ಬಳಸಿ ಸಾವಿರ ಯೋಜನ ದಿವ್ಯಪರಿಮಳಮಾ
ಗಿರ್ಕ್ಕುಂ. ಈ ಪರ್ವತದೊತ್ತಿನೊಳ್ಕೂಡಲಾಗಿ ಚೈತ್ರರಥಮೆಂಬ
ಸಿಂಗರದ ದೋಂಟಮುಂ, ಅರುಣೋದಮೆಂಬ ಸರಸ್ಸುಮಿರ್ಕ್ಕುಂ.
ಮೇರುವಿಂಗೆ ತೆಙ್ಕಲಾಗಿ ಗನ್ಧಮಾದನಮೆಂಬ ಪರ್ವತಮಿರ್ಕ್ಕುಂ.
ಅದರ ಮೇಲೆ ಸಾವಿರದ ನೂರು ಯೋಜನದುದ್ದವಾದ ನೇರಿಲ ಮರ
ನಿರ್ಕ್ಕುಂ. ಇದರ ಕೊಂಬುಗಳಂ ಸ್ವಾದುವಾಗಿ ಮೃದುವಾಗಿ ಸು
ಗನ್ಧಯುಕ್ತಮಾಗಿ ಮಹಾ ಗಜಪ್ರಮಾಣವಾಗಿರ್ಪ್ಪ ಪಣ್ಗಳ್ ಪಾ
ಸರೆಯೊಳ್ಬಿದ್ದು ಕರಗಿ ಜಮ್ಬೂನದಿಯೆಂಬ ಪೊಳೆಯಾಗಿ ಮೇರು

ವಂ ಬಳಸಿ ಪೊನಲ್ಪರಿವೃತಿಕ್ಕುರ್ಗಂ. ಅದರ ಜಡಿಯ ಖುಣ್ಣಳಾರಸೆ ಹಿಂ ನನೆದುದರಿಂ ಜಾಂಬೂನದಸ್ವರ್ಣಮಾಗಿ ದೇವಭೂಷಣ ಯೋಗ್ಯ ಮಾಗಿಕ್ಕುರ್ಗಂ. ಅದರ ತೆಜ್ಕಣ ತಡಿಯೊಳ್ ಗನ್ಧಮಾದನಮೆಮ್ಬ ಸಿಂಗರ ದೋಣ್ಟಮುಂ ಮಾನಸಮೆಮ್ಬ ಸರಸ್ಸುಮಿಕ್ಕುರ್ಗಂ. ಮೇರುವಿಂಗೆ ಪಡುವಲಾಗಿ ವಿಪುಲಮೆಮ್ಬ ಪರ್ವತಮಿಕ್ಕುರ್ಗಂ. ಅದರಮೇಲೆ ಸಾಸಿರದ ನೂರು ಯೋಜನದುದ್ದಮಾದ ಅರಳಿಯ ಮರನಿರ್ಕ್ಕುಂ. ಅದರ ಪಣ್ಗಳ್ ಸಾರ್ವಕಾಲಮುಂ ಮಹಾ ಕುಂಭಪ್ರಮಾಣಮಾಗಿ, ಪರಿಮಳಯುಕ್ತಮಾಗಿಕ್ಕುರ್ಗಂ. ಅದರ್ಕೆ ಪಡುವಲಾಗಿ, ವೈಭ್ರಾಜಮೆಂಬ ಸಿಂಗರ ದೋಂಟಮುಂ ಸಿತೋದ ಮೆಂಬ ಸರಸ್ಸುಮಿಕ್ಕುರ್ಗಂ. ಮೇರುವಿಂಗೆ ಬಡಗಲಾಗಿ ಸುಪಾರ್ಶ್ವಮೆಂಬ ಪರ್ವತ ಮಿರ್ಕ್ಕುಂ. ಅದರ ಮೇಲೆ ಸಾಸಿರದ ನೂರು ಯೋಜನದುದ್ದಮಾದ ಆಲದ ಮರನಿರ್ಕ್ಕುಂ. ಅದರ ಪಣ್ಗಳ್ ಸಾರ್ವಕಾಲಮುಂ ಮಹಾಕುಂಭಪ್ರಮಾಣಮಾಗಿ ಪರಿಮಳಯುಕ್ತಮಾಗಿಕ್ಕುರ್ಗಂ. ಅದರೊತ್ತಿನೊಳ್ ನನ್ದನ ಮೆಂಬ ಸಿಂಗರ ದೋಣ್ಟಮುಂ ಸಿತೋದಮೆಮ್ಬ ಸರಸ್ಸುಮಿಕ್ಕುರ್ಗಂ. ಈ ನಾಲ್ಕುಂ ಪರ್ವತಜ್ಗಳ ಪೊರವಳಯದೊಳ್ ಪಲವುಂ ಬೆಟ್ಟಂಗಳಿಪ್ಪುರ್ವು. ಇವು ತಾವರೆಯ ಕೇಸರಗಳ ಮರ್ಯ್ಯಾದೆಯಾಗಿಪ್ಪುರ್ದರಿಂ ಕೇಸರ ಪರ್ವತಂಗಳೆನಿಪ್ಪುವು. ಅವಾವುವೆನೆ:— ಮೇರುವಿಂಗೆ ಮೂಡಲಾಗಿ ಸಿತಾಂತ, ಉದಕುಂಜ, ಮಾರ್ಷ, ವಿರುಜ್ಗ, ಮಣಿಶೃಜ್ಗ, ಸಬಿನ್ದು, ಮಂದರ, ವೇಣುಮಂತ, ಸಮೇಘ, ನಿಷಧ, ದೇವಪರ್ವತಮೆಂಬೀ ಪರ್ವತಂಗಳಿರ್ಕ್ಕುಂ. ಮೇರುವಿಂಗೆ ತೆಂಕಲಾಗಿ ತ್ರಿಶಿರ, ತ್ರಿಶೃಂಗ, ಕಪಿಂಗ, ಪತಂಗ, ಕುಚಕ್ರ, ತಾಂಮ್ರಾಭ, ವಿಶಾಲ, ಶ್ವೇತೋದ, ಸಮೂಲ, ವಸುಧಾರ, ರತ್ನಧಾರ, ಏಕಶೃಂಗ, ಮಹಾಮೂಲ, ಗಜಶೈಲ, ಪಿಶಾಚಕ, ಪಂಚಶೈಲ, ಕೈಲಾಸ, ಹಿಮವಂತಮೆಂಬೀ ಪರ್ವತಂಗಳಿಕ್ಕುರ್ಗಂ. ಮೇರುವಿಂಗೆ ಪಡುವಲಾಗಿ ಕಪಿಲ, ಪಿಂಜಕ, ಭದ್ರಸುಖಸ, ಮಹಾಬಲ, ಕುಮುದ, ಮಧುಮಂತ, ಅಂಜನ, ಮುಕುಟ, ಕೃಷ್ಣ, ಪಾಂಡರ, ಸಹಸ್ರಶಿಖರ, ಪಾರಿಯಾತ್ರ, ತ್ರಿಶೃಂಗಮೆಂಬೀ ಪರ್ವತಂಗಳಿರ್ಕ್ಕುಂ. ಮೇರುವಿಂಗೆ ಬಡಗಲಾಗಿ ಶಂಖಕೂಟ, ವೃಷಭ, ಹಂಸ, ನಾಗ, ಕಪಿಂಗಲ, ಇಂದ್ರಶೈಲ, ನೀಲ, ಕನಕಶೃಂಗ, ಶತಶೃಂಗ, ಪುಷ್ಕರ, ಮೇ

ಘುಶೈಲ, ವಿರಜ, ಜಾರುಧಿ, ತ್ರಿಶೃಂಗವೆಂಬೀಪರ್ವತಂಗಳಿರ್ಕ್ಕುಂ. ಈ
ಕೇಸರ ಪರ್ವತಂಗಳ ತಪ್ಪಲ್ಗಳೊಳ್ ರಮಣೀಯ್ಯವಾಗಿ ದೇವತೆಗ
ಳ್ಗೆ ಕ್ರೀಡಾಸ್ಥಾನಂಗಳಾಗಿರ್ಕ್ಕುಂ. ಅವಾವುವೆನೆ:— ಮೇರುವಿಂಗೆ
ಮೂಡಲಾಗಿ, ಸಿತಾಂತಕುಮುದ ಪರ್ವತಂಗಳ ನಡುವೆ ಮುನ್ನೂರು
ಯೋಜನದ ನೀಳಮುಂ, ನೂರು ಯೋಜನದಗಲಮುಮಾಗಿ, ಸ್ವಾದು
ವಾಗಿ, ನಿರ್ಮ್ಮಲವಾಗಿರ್ದ್ದ ಜಲದಿಂಪೂರ್ಣ್ಣಮಾದ ಶ್ರೀಸರಸ್ಸೆಂಬ ಕೊಳ
ನಿರ್ಕ್ಕುಂ. ಅದರೊಳ್ ಕೊಳಗದ ತೋರವಾದ ತಾವರೆಗಳಿರ್ಕ್ಕುಂ. ಅ
ದರೊಳ್ಕೋಟಿದಳಯುಕ್ತಮಾಗಿ, ಸ್ವರ್ಣ್ಣಮಯವಾದುದೊಂದು ತಾ
ವರೆಯೊಳ್ ಸಾಕ್ಷಾನ್ಮಹಾಲಕ್ಷ್ಮಿ ಇರುತಿರ್ಪ್ಪಳ್. ಈ ಕೊಳದೊತ್ತಿ
ನೊಳ್ ನೂರುಯೋಜನದಗಲಮುಂ ಇನ್ನೂರುಯೋಜನದ ನೀಳಮು
ಮಾದ ಬಿಲ್ವವತ್ತದ ವನಮಿರ್ಕ್ಕುಂ. ಅದರೊಳ್ಮರಂಗಳಾವಗಂ ಫ
ಲಪುಷ್ಪಯುಕ್ತಮಾಗಿ, ಅರೆಕೂಗುದಾರಿಯುದ್ದವಾಗಿರ್ಕ್ಕುಂ. ಅ
ಲ್ಲಿಯುಂ ಮಹಾಲಕ್ಷ್ಮಿ ಸಿದ್ಧಸಂಗ ನಿಷೇವಿತೆಯಾಗಿರ್ಪ್ಪುದರಿಂದಾ
ವನಕ್ಕೆ ಶ್ರೀವನವೆಂಬ ಪೆಸರಾಗಿರ್ಕ್ಕುಂ. ಮತ್ತಂ ವೈಕಂಕ ಮಣಿ
ಶೈಲವೆಂಬೀಪರ್ವತಂಗಳ ನಡುವೆ ಇನ್ನೂರುಗಾವುದ ನೀಳಮುಂ ನೂ
ರುಗಾವುದದಗಲಮುಮಾಗಿ ನಿರ್ಮ್ಮಲೋದಕವಾದುದೊಂದು ದೊಣೆಯಿ
ರ್ಕ್ಕುಂ. ಅದರ ತಡಿಯೊಳರೆಕೂಗುದಾರಿಯುದ್ದವಾದ ಪಲವುಂ ಮ
ರಗಳಿಂದೆಸುವುದೊಂದು ಮಹಾವನಮಿರ್ಕ್ಕುಂ. ಅದರ ನಡುವೆ ಕಾಶ್ಯಪ
ಮುನಿಗಾಶ್ರಮವಾಗಿರ್ಕ್ಕುಂ. ಮತ್ತಂ ಮಹಾನೀಲಕುಂಡಶೈಲಂಗಳ
ನಡುವೆ ಪದ್ಮಷಂಡೋಪಶೋಭಿತವಾದ ಸುಖನದಿಯೆಂಬುದೊಂದುಕೊ
ಳನಿರ್ಕ್ಕುಂ. ಅದರ ತಡಿಯೊಳ್ಪವತ್ತುಯೋಜನದ ನೀಳಮುಂ ಮುವ
ತ್ತು ಯೋಜನದಗಲಮುಮಾದ ಹನೆಯ ಮರದ ಬನಮಿರ್ಕ್ಕುಂ. ಆಮ
ರಂಗಳರೆಕೂಗುದಾರಿಯುದ್ದವಾಗಿರ್ಕ್ಕುಂ. ದೇವಶೈಲವೆಂಬ ಬೆಟ್ಟದ
ತಪ್ಪಲೊಳ್ ಗಿಡಮರಂಗಳೊಂದುಮಿಲ್ಲದೆ ಸಾವಿರಗಾವುದ ನೀಳಮುಂ
ನೂರು ಗಾವುದದಗಲಮುಂ ಸಮತಳವಾದುದೊಂದು ಕಲ್ಲರೆಯಾಗಿ,
ಅದರ ಮೇಲೆ ಮೊಳಕಾಲುದ್ದ ನೀರುಂಟಾಗಿ ಐರಾವತಕ್ಕೆ ಕ್ರೀಡಾಸ್ಥಾ
ನವಾಗಿರ್ಕ್ಕುಂ. ಇವಿನಿತುಂ ಮೇರುವಿಂಗೆ ಮೂಡಲಾಗಿರ್ಪ್ಪ ತಾಣಂಗ
ಳ್. ಮೇರುವಿಂಗೆ ತೆಂಕಲಾಗಿ ತ್ರಿಶಿರಪತಂಗಶೈಲಂಗಳನಡುವೆ ಸೀಯಾ

ಗ ತಿಳಿನೀರುಂಟಾದ ಬಹೂದಕವೆಂಬ ಪ್ರೊಳೆ ಪರಿವೃತಿರ್ಕ್ಕುಂ. ಅದರ
ತಡಿಯೊಳಯ್ನೂರುಗಾವುದ ನೀಳಮುಂ ಮೂವತ್ತು ಗಾವುದದಗಲಮು
ಮಾದ ಅತ್ತಿಯ ಕಾಡಿರ್ಕ್ಕುಂ. ಆ ಮರಂಗಳೊಂದುಬಿನೆಸುಗೆಯುದ್ದ
ಮಾಗಿ ಪವಳ ವರ್ಣ್ಣಮಾದ ಹರವಿಯ ತೋರಮಾದ ಪಣ್ಗಳುಂಟಾಗಿ,
ಕರ್ದ್ದಮಪ್ರಜಾಪತಿಗಾಶ್ರಮವಾಗಿರ್ಕ್ಕುಂ. ತಾಂಮ್ರಾಭಪತಂಗಶ್ಶೈಲಂ
ಗಳ ನಡುವೆ ನೂರುಗಾವುದನೀಳಮುಂ, ನೂರು ಗಾವುದದಗಲಮು
ಮಾದ ಸರಸ್ಸುಮಿರ್ಕ್ಕುಂ. ಅದರೊಳ್ಕುಂದಾವರೆಗಳ್ಬಾಲಸೂರ್ಯನಂತೆ
ಪ್ರಕಾಶಮಾಗಿರ್ಕ್ಕುಂ. ಆ ಸರೋಮಧ್ಯದೊಳರ್ಪ್ಪದೊಂದು ಚಿಪ್ಪಟನೋ
ರ ಕೋಟಿ ಕೊತ್ತಳಗಳಿಂದೊಪ್ಪುವದೊಂದು ವಿದ್ಯಾಧರ ಪುರವಿ
ರ್ಕ್ಕುಂ. ವಿಶಾಲ ಶ್ವೇತಪರ್ವ್ವತಂಗಳ ನಡುವೆ ಮೂವತ್ತು ಗಾವುದದಗ
ಲಮುಂ ಎಯ್ವತ್ತು ಗಾವುದ ನೀಳಮುಮಾಗಿರ್ಪ್ಪುದೊಂದು ಕೊಳನಿ
ರ್ಕ್ಕುಂ. ಅದರತಡಿಯೊಳೊಂದು ದೊಡ್ಡಿತಾದ ಮಾವಿನ ಮರನಿರ್ಕ್ಕುಂ.
ಅದರೊಳ್ಮಾವಿನ ಪಣ್ಗಳ್ಸುವರ್ಣ್ಣ ಸುಕಾಶವಾಗಿ, ಅತ್ಯಂತ ಪರಿಮಳ
ಯುಕ್ತಮಾಗಿ, ಹರವಿಯ ತೋರಮಾಗಿರ್ಕ್ಕುಂ. ವಸುಧಾರಾ ರತ್ನಧಾ
ರಾ ಪರ್ವ್ವತಂಗಳ ನಡುವೆ ಮೂವತ್ತುಗಾವುದನೀಳಮುಂ ನೂರುಗಾವು
ದದಗಲಮುಮಾದುದೊಂದು ಮುತ್ತುಗದ ವನಮಿರ್ಕ್ಕುಂ. ಅದರ ಪೂಗ
ಳಾವಗಂ ನೂರುಗಾವುದಪರ್ಯ್ಯಂತಂ ಪರಿಮಳಿಸುತಿರ್ಕ್ಕುಂ. ಅದರೊಳ್ಸ
ಧ್ಯಾಂಗಾಶ್ರಮಮಾಗಿರ್ಕ್ಕುಂ. ಮೇರುವಿಂಗೆ ಪಡುವಲಾಗಿ ಸುಪಾರ್ಶ್ವ ಶಿ
ಖಿಪರ್ವ್ವತಂಗಳ ನಡುವೆ ನೂರುಗಾವುದದಗಲಮುಂ ನೂರುಗಾವುದ ನೀ
ಳಮುಂ ಚುಂಕಿಯಿಂ ಬೆಂದ ಬಿಸಯನೆಲನಾಗಿರ್ಕ್ಕುಂ. ಅದರ ನಡುವೆ ಇ
ಪ್ಪತ್ತು ಗಾವುದನೆಲಂ ವಹ್ನಿಮಂಡಲಮೆನಿರ್ಕ್ಕುಂ. ಅದರೊಳಾವಗಂ
ಪ್ರಳಯಕಾಲಾಗ್ನಿ ಸಾವೆಯಿಲ್ಲದೆ ಉರಿವುತಿರ್ಕ್ಕುಂ. ಕುಮುದಾಂಜನ
ಪರ್ವ್ವತಂಗಳ ನಡುವೆ ಪುಣ್ಯಹ್ರದಮೆಂಬ ಕೊಳನಿರ್ಕ್ಕುಂ. ಅದರತೀರದ
ಲ್ಲಿ ಪತ್ತುಗಾವುದದಗಲಮುಂ, ಪತ್ತುಗಾವುದ ನೀಳಮುಮಾದ ಮಾ
ದಳದ ವನಮಿರ್ಕ್ಕುಂ. ಅದರೊಳಾವಗಮರಿಸಿನಬಣ್ಣಮಾಗಿ ಪಿರಿದಾದ
ಪಣ್ಗಳಿರ್ಕ್ಕುಂ. ಅದರೊಳ್ಬೃಹಸ್ಪತಿಗಾಶ್ರಮವಾಗಿರ್ಕ್ಕುಂ. ಪಿಂಜ
ರ ಸುರಸಪರ್ವ್ವತಂಗಳ ನಡುವೆ ಅನೇಕಯೋಜನದನೀಳಮುಂ, ಅನೇ
ಕ ಯೋಜನದಗಲಮುಮಾದ ಮಹಾದ್ರೋಣಿಯೆಂಬ ಕೊಳನಿರ್ಕ್ಕುಂ.

ಅವರೊಳ್ವಿಷ್ಣುವಿಂಗೆ ತಾಣಮಾಗಿರ್ಕುಂ. ಕೃಷ್ಣಪಾಂಡರಪರ್ವತಂಗಳ ನಡುವೆ ಮೂವತ್ತು ಗಾವುದದಗಲಮುಂ, ತೊಂಭತ್ತು ಗಾವುದ ನೀಳಮುಮಾಗಿ ಮರಗಿಡುಗಳೊಂದುಮಿಲ್ಲದೆ ನಿಷ್ಪಂಕ ದೀರ್ಘಿಕೆಯೆಂಬ ಕೊಳನಿರ್ಕುಂ. ಅದರೊಳೈಗಾವುದದಗಲಮಾದ ಆಲದ ಮರನಿರ್ಕುಂ. ಆ ಮರದೊಳ್ಚಂದ್ರವರ್ಣನಾಗಿ, ನೀಲವಸ್ತ್ರಧರನಾದ, ಸಹಸ್ರವದನನೆಂಬ ಸ್ವಾಮಿ ಯಕ್ಷಾದಿಗಳಿಂದಾವಗಂ ಪೂಜಿಸಲ್ಪಡುತಿರ್ಪಂ. ಸಹಸ್ರಶಿಖರ ಕುಮುದಪರ್ವತಂಗಳ ನಡುವೆ ಎಪ್ಪತ್ತು ಗಾವುದದಗಲಮಾದ ಪಲವುಂ ಸೀಪಣ್ಗಳುಂಟಾದ ವನಮಿರ್ಕುಂ. ಅದರೊಳ್ ಚಂದ್ರಾಗಾಶ್ರಮುಮಾಗಿರ್ಕುಂ. ಮೇರುವಿಂಗೆ ಬಡಗಲಾಗಿ ಶಂಖಕೂಟನಿಷಧಪರ್ವತಂಗಳ ನಡುವೆ ಅನೇಕಯೋಜನದಗಲಮಾದ ಪುರುಷಸ್ಥಲಮೆಂಬ ಸ್ಥಾನಮಿರ್ಕುಂ. ಅದರೊಳ್ಮರಂಗಳನೇಕಯೋಜನದುದ್ದಮಾಗಿರ್ಕುಂ. ಕಪಿಂಗ ನಾಗಪರ್ವತಂಗಳ ನಡುವೆ ನೂರು ಗಾವುದದಗಲಮುಂ ಇನ್ನೂರುಗಾವುದದನೀಳಮುಮಾಗಿ, ದ್ರಾಕ್ಷಾಖರ್ಜೂರದ ವನಮಿರ್ಕುಂ. ಅದರೊಳಾವಗಂ ಪಣ್ಗಳ್ ಅತ್ಯಂತಮಧುರಮಾಗಿರ್ಕುಂ. ಪುಷ್ಕರಮೇಘಪರ್ವತಂಗಳ ನಡುವೆ ನೂರುಗಾವುದ ನೀಳಮುಂ ಅರವತ್ತು ಗಾವುದದಗಲಮುಮಾದ ಕಲ್ಲರೆ ಇರ್ಕುಂ. ಅದರೊಳ್ ನಾಲ್ಕು ದಿಕ್ಕಿನೊಳಂ ಅನೇಕಯೋಜನವಿಶಾಲಾಯತಮಾದ ನಾಲ್ಕುಕೊಳನುಂ, ನಾಲ್ಕುವನಮುಮಿರ್ಕುಂ. ಕೇಸರಮರ್ಯಾದಾಪರ್ವತಂಗಳಮೇಲೆ, ಎಣ್ಟು ಬಗೆಯ ದೇವತೆಗಳ ಪಟ್ಟಣಂಗಳಿರ್ಕುಂ. ಇವಿನಿತುಂ, ಭೋಗಭೂಮಿಂಗಳೆನಿರ್ಕುಂ. ಇವರೊಳನುಭವಿಸುವ ಭೋಗಮನಿತ್ಯಮಾದುದರಿಂದೆ ಆನಿವಂ ಬಯಸಿದವನಲ್ತು; ನಿತ್ಯಭೋಗಮೆನಿಪ ನಿನ್ನೋಲಗಮನೆ ಬಯಸಿದೆಂ. ನಿಖಿಲಭೋಗಪ್ರದನಪ್ಪ ನೀನೆನಗಿದಂ ನೆಲೆಗೊಳಪುದು, ನೆಲೆಗೊಳಪುದು ಅನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ! * * *

## — ಪದಿನೇಳನೆಯ ಬಿನ್ನಪಂ —

ಕಂ ॥ ನರಕದೊಳೞವರೆ ತಾವಕ।
ಚರಣಾಬ್ಜಕೆ ಮಣಿದರಲ್ತು ಮುನ್ನೊರ್ಮೆಯುಮಂ ॥
ದುರುವಿಕ್ರಮನಡಿದಾವರೆ।
ಗರಿನ್ನೃಪವೇಶ್ಯಾಭುಜಂಗನನುಗೊಳೆ ಪೇೞ್ದಂ ॥

ನರಕಾನ್ತಕಾ! ನರಕಮೆಂಬುದು ದುಃಖಾನುಭವಸ್ಥಾನಂ. ಈ ನರಕಂಗಳ್ ಸಪ್ತಪಾತಾಳಲೋಕಂಗಳ ಕೆಳಗಣ ಗರ್ಭೋದಕಕ್ಕೆ ಕೀೞಾಗಿಯುಂ ಬ್ರಹ್ಮಾಣ್ಡಕಟಾಹಮಂ ಪತ್ತಿದ ಗರ್ಭೋದಕಕ್ಕೆ ಮೇಲಾಗಿಯುಮಿರ್ಪ ಬಯಲೊಳ್, ತೆಂಕಣದೆಸೆಯೊಳಿರ್ಪ ರೌರವಸೂಕರ ರೋಧಮೆಂಬಿವು ಮೊದಲಾಗಿ ಪಲವುಂ ತೆರನಾಗಿರ್ಕುಂ. ರೌರವಮೆಂಬ ನರಕದೊಳಿರ್ದವನಂ ಯಮಭಟರ್ ಪುಲ್ಲೆಯಂ ಬೇಂಟೆಕಾರರೆಸುವಂತೆ, ದಯೆಯಿಲ್ಲದೆ ಅವಗಮೆಸುತಿರ್ಪರ್. ತಾಂ ಸಾಕ್ಷಿಯಾಗಿರ್ದುಂ ಕಂಡಂತೆ ನುಡಿಯದವನುಂ, ಕಾಣದುದಂ ನುಡಿದವನುಂ, ಧರ್ಮ್ಮಾಧಿಕಾರದೊಳಿರ್ದು ಪಕ್ಷಪಾತಂಗೆಯ್ವವನುಂ, ಪುಸಿಗಾರನುಂ, ಈ ನರಕದೊಳ್ಬೀೞ್ವರ್. ಬೇಂಟೆಯೊಳ್ಸಿಕ್ಕಿದ ಪಂದಿಯನಿರಿವಂತೆ, ಅವನನಿರಿವುತಿರ್ಪರ್. ಆ ನರಕಂ ಸೂಕರಮೆನಿಪುದು; ಗರ್ಭಮಂ ಕರಗಿಸಿದವನುಂ, ಮೂಗುಬಾಯ್ಗಳಂ ಮುಚ್ಚಿ ಕೊಲ್ವವನುಂ, ಗೋಹತ್ಯೆಗೆಯ್ವವನುಂ, ಇದರೊಳ್ಬೀೞ್ವರ್. ನೆಲೆವನಗೆಯ್ದು ಪಲದೊಳ್ಪೂೞ್ವರ ನರಕಂ ರೋಧಮೆನಿಪುದು. ಬ್ರಹ್ಮಹತ್ಯಾ ಸುರಾಪಾನ ಸ್ವರ್ಣಸ್ತೇಯ ಗುರುತಲ್ಪಗಮನ ತತ್ಸಂಯೋಗಂಗಳೆನಿಪ ಪಂಚಮಹಾಪಾತಕಂಗಳಂ ಮಾಡಿದವರಿದರೊಳ್ ಬೀೞ್ವರ್. ಉನ್ನತಮಾದ ಹನೆಯ ಮರನಿಂ ನೆಲಕ್ಕೆ ಕೆಡಪುವ ನರಕಂ ತಾಳಮೆನಿಪುದು; ಕ್ಷತ್ರಿಯ ವೈಶ್ಯರ್ಕಳಂ ಕೊಂದವರಿದರೊಳ್ಬೀೞ್ವರ್. ಕಾಯ್ದೆಣ್ಣೆಯ ಕೊಪ್ಪರಿಗೆಯೊಳ್ಕುದಿಪಿಸುವ ನರಕಂ ತಪ್ತಕುಂಭಮೆನಿರ್ಕುಂ; ಪತಿವ್ರತೆಯಂ ಮಾರಿದವನುಂ ಕುದುರೆಯಂ ಕೊಂಡು ಮಾರುವವನುಂ, ನಂಬಿದವರಂ ಕೈಬಿಡುವವನುಂ, ಒಡಹುಟ್ಟಿದವಳ್ಗೆೞುಪಿದವನುಂ, ಅರಮನೆಯ ಮನುಷ್ಯರುಂ ಮಡುಪಿದವನುಂ, ಇದರೊಳ್ಬೀೞ್ವರ್. ಬೆಂಕಿಯೊಳ್ ಪುರಿದು ಚೌಳುಪ್ಪಿನೊಳ್ಪೊರಳಿಪ ನರಕಂ ಲವಣಮೆನಿರ್ಕುಂ. ತಂದೆತಾಯ್ಗಳ್ದಲಾದ್ಯ

ಹಿರಿಯರಂ ದೂಷಿಸುವನುಂ, ವೇದಮಂ ನಿಂದಿಪನುಂ, ಕೂಲಿಗೆ ವೇದ
ಮನೋದಿಪನುಂ, ಸೋದರಮಾವನ ಪೆಣ್ದತಿಗಳುಹಿದವನುಂ, ಇದ
ರೊಳ್ಬೀಳ್ವರ್. ಕತ್ತಲೆ ಮುಸುಂಕಿದೆಡೆಯೊಳ್ಕಡನೊಣ ಜಿಗುಳೆಮೊ
ದಲಾದ ಕ್ರೂರಜನ್ತುಗಳೆತೆವಿಡದೆ ಕಡಿವ ನರಕಂ ಕ್ರಿಮಿಭಕ್ಷಮೆನಿಪ್ಪು
ದು; ದೇವಬ್ರಾಹ್ಮಣದ್ವೇಷಿಯುಂ, ಸದಾಚಾರಮಂ ಮಾಣ್ಬವನುಂ,
ಇದರೊಳ್ಬೀಳ್ವರ್. ಪೆರಗುಗುಳ್ದ ನೀರಂಭಕ್ಷಿಸುವ ನರಕಂ ಲಾಲಾಭಕ್ಷ
ಮೆನಿಪ್ಪುದು; ದೇವಪೂಜೆಯುಂ, ಪಿತೃಕರ್ಮ ಮೊದಲಾದುವೊಂದುಮಿ
ಲ್ಲದೆ ತನಗೆಂದಟ್ಟುಣ್ಬವರಿದರೊಳ್ಬೀಳ್ವರ್. ಕತ್ತಿಚೂರಿ ಮೊದಲಾದ
ಅಲಗುಗಳ್ನಟ್ಟರ್ಪ ಬಾವಿಯೊಳ್ನೂಕುವ ನರಕಂ ವಿಶಸನಮೆನಿಪ್ಪುದು.
ಆಯುಧಂಗಳಂ ಮಾಡಿ ಬದುಕಂಕುವವರುಂ, ಬೇಹುಕಂಬು ಮೊದಲಾ
ದಕಪಟದಾಯುಧಂಗಳಂ ಧರಿಸಿದವರುಂ, ಇದರೊಳ್ಬೀಳ್ವರ್. ಕಾಸಿದ
ಸಂಕಲೆಯಿಂ ಕಾಲ್ಗಳ್ ತುಡಿಸಿ ಯುರಿಮುಸಗುವ ಬಾವಿಯೊಳ್ತಲೆಕೆಳಗು
ಮಾಡಿ ತೂಗುವ ನರಕಂ ಅಧೋಮುಖಮೆನಿಪ್ಪುದು; ಶಾಸ್ತ್ರನಿಷಿದ್ಧ
ವಸ್ತುಗಳಂ ಪರಿಗ್ರಹಿಸುವರಿವರೊಳ್ಬೀಳ್ವರ್. ಪೊಲಸುನಾರುವ ಕೀ
ವಿನ ತೊರೆಯ ನರಕಂ ಪೂಯವಹಮೆನಿಪ್ಪುದು; ದುಡುಕುಗಾರನುಂ,
ಎಲ್ಲರುಂ ಬಿಟ್ಟು ತಾನೋರ್ವನೆ ಮೃಷ್ಟಾನ್ನವನುಣ್ಬವನುಂ, ಅರ
ಗು ಮಾಂಸಂ ಪಾಲ್ಮೊಸರ್ ತುಪ್ಪ ಜೇನ್ಮೊದಲಾದ ಸದ್ದ್ರವ್ಯಮುಮಂ
ಎಳ್ಳುಪ್ಪು ಮೊದಲಾದುವಮಂ ಮಾರುವವನುಂ, ಇದರೊಳ್ಬೀಳ್ವರ್.
ಕಾಸಿದ ಕೀವುಂ ನೆತ್ತರುಂ ತೀವಿದ ಬಾವಿ ರುಧಿರಾಂಭಸನರಕಮೆನಿಪ್ಪು
ದು; ತಗರು ಕೋೞಿ ಮುಂತಾದುವಂ ಜೂಜುಗಾಳಗಕ್ಕೆ ಬಿಡುವವ
ನುಂ, ಅಟ್ಟಮಡಕೆಯೊಳೆ ಉಣ್ಬವನುಂ, ವಿಷಮನಿಕ್ಕುವವನುಂ, ಅ
ರಸುಗಳ ಸಂಗಡಮಿಲ್ಲದ ಚಾಡಿಗಳಂ ಪೇಳ್ವವನುಂ, ಪೆಂಡತಿ ಸುಂಪಾಪಿ
ಸಿದೊಡೆವೆಯಿಂ ಬದುಕಂಕುವವನುಂ, ಅಮಾವಾಸ್ಯೆಸಂಕ್ರಮಣಂಮೊ
ದಲಾದ ಪರ್ವಕಾಲದೊಳಭ್ಯಂಗಸ್ತ್ರೀಸಂಗಂ ಮೊದಲಾದುವನೆಸಗಿದ
ವನುಂ, ಮನೆಗಳಂ ಕಿಚ್ಚಿಕ್ಕಿ ಸುಡುವನುಂ, ಪಕ್ಕಿಯ ನಿಮಿತ್ತಮಂ
ಪೇಳ್ವವನುಂ, ಪಕ್ಕಿಗಳಂ ಪಿಡಿದು ಮಾರಿ ಬದುಕಂಕುವವನುಂ, ಗ್ರಾ
ಮಯಾಜಕನುಂ, ಇದರೊಳ್ಬೀಳ್ವರ್. ಬೆಂಕಿಯಂತೆ ಕಾಯ್ದ ತುಪ್ಪ
ದ ತೊರೆ ವೈತರಣಿಯೆನಿಪ್ಪುದು; ಜೇನಳವವನುಂ, ಗ್ರಾಮಕ್ಕೆ ಕೇಡನೆ

ಣಿಸುವನುಮಿದರೊಳ್ಬಳ್ವರ್. ಕಾಯ್ದ ಕರ್ಬುನದ ಮೊಳೆಗಳಂ ನಾಂಟಿರ್ಪ ನೆಲದೊಳ್ನಡೆವ ನರಕಂ ಕೃಷ್ಣಮೆನಿಪ್ಪುದು; ಧನದಿಂದೆಯುಂ, ಯೌವ್ವನದಿಂದೆಯುಂ, ಕೊಬ್ಬಿ ಮೇರೆಯಂ ಮೀರಿ ನಡೆವವನುಂ ಎಂಜಲು ಮೈಲಿಗೆಗಳ್ಗೆ ಹೇಸದವನುಂ, ಇಂದ್ರಜಾಲಂಮೊದಲಾದ ಕಪಟವಿದ್ಯೆಯಿಂ ಬದುಂಕುವವನುಂ, ಇದರೊಳ್ಬಳ್ವರ್. ಇಂತಿವುಮೊದಲಾದ ಪಲವುಂ ತೆರದ ಪಾತಕಂಗಳನೆಸಗಿದವರ್ಬೀಳ್ವ ನರಕಂಗಳ್ಪಲವುಂ ತೆರನಾಗಿ ಮಿತಿಯಿಲ್ಲದಿರ್ಪುವು. ನಿನ್ನ ದಿವ್ಯ ಸಂಕೀರ್ತನದಿಂದಮೆ ಸಕಲ ನರಕ ಭಯಮುಂ ಪರಿಹಾರಮಪ್ಪುದರಿಂ, ನಿನಗೆ ನರಕಾನ್ತಕನೆಂಬ ಪೆಸರಾಗಿರ್ಕ್ಕುಂ. ಇಂತಿರ್ಪ ನಿನ್ನನೆ ನೆರೆ ನಂಬಿದೆನೆನ್ನ ಭಯಮಂ ಪರಿಹರಿಸಿ, ನಿನ್ನಡಿಯಾಗಳಮನಿತ್ತು, ಮನ್ನಿಪುದು ಮನ್ನಿಪುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ!

## — ಪದಿನೆಂಟನೆಯ ಬಿನ್ನಪಂ —

ಕಂ ॥ ಉದ್ಧತ ಪಾಪಿಗಳುಂ ಪರಿ ।
ಶುದ್ಧರ್ನಿನ್ನಡಿಯ ನೆನೆದಮಾತ್ರದೊಳೆನ್ದಾ ॥
ಸಿದ್ಧಗರುಡಧ್ವಜಾಜ್ಞಂ ।
ಸಿದ್ಧಾರ್ಚಿತ ಪದಯುಗಂಗೆ ಬಿನ್ನತಿ ಗೆಯ್ದಂ ॥

ಪರಮಪಾವನಾ! ಪಾಪಂಗಳೆಂಬವು ಕಾಯಿಕಂಗಳೆಂದುಂ, ವಾಚಿಕಂಗಳೆನ್ದುಂ, ಮಾನಸಿಕಂಗಳೆನ್ದುಂ, ಮೂರುಂತೆರನಾಗಿರ್ಕ್ಕುಂ. ಪೊಲ್ಲದ ವಸ್ತುಗಳಂ ತಿಂಬುದುಂ, ಪೊಲ್ಲದರ ಮನೆಯೊಳುಣ್ಬುದುಂ, ಪೊಲ್ಲದವರ್ಗೆ ಯಜ್ಞಾದಿಕ್ರಿಯೆಗಳಂ ಮಾಡಿಪ್ಪುದುಂ, ಪೊಲ್ಲದವರಿಂ ದಾನಮಂ ಕೊಳ್ವುದುಂ, ಪರರ ಪೆಂಡಿರ್ಗಳುಪ್ಪುವುದುಂ, ಪೊಲ್ಲದವರನೋಲಗಿಪ್ಪುದುಂ, ಪರರೊಡೆವೆಯನಪಹರಿಪ್ಪುದುಂ, ಪ್ರಾಣಿಹಿಂಸೆಗೆಯ್ವುದುಂಮೊದಲಾದವು ಕಾಯುಕಮಾದ ಪಾಪಂಗಳೆನಿಪ್ಪುವು. ನಿಷ್ಠುರೋಕ್ತಿಗಳನಾಡುವುದುಂ, ಪುಸಿಮಾತನಾಡುವುದುಂ, ಚಾಡಿಯ ಪೇಳ್ವುದುಂ, ಇಹಪರಪ್ರಯೋಜನಮಿಲ್ಲದ ಬರಿಮಾತಿನೊಳ್ ಪೊಳ್ತುಗಳೆವುದುಂ, ವಿವಾದಂಗೆಯ್ವುದುಂ, ವೇದಮಂ ಕೂಲಿಗೋದಿಪ್ಪುದುಂ, ಪರ ನಿನ್ದೆಗೆಯ್ವುದುಂ ಮೊದಲಾದವು ವಾಚಕ ಪಾಪಂಗಳೆನಿಪ್ಪುವು.

ಪರಗೆರ್ ದ್ರೋಹಮನೆಣಿಪುದುಂ, ಸಲ್ಲದಾಸೆಯುಂ, ಸಲ್ಲದ ಕೋಪಮುಂ, ಲೋಭಮುಂ, ಅಜ್ಞಾನಮುಂ, ಗರ್ಬ್ಬಂ, ಕೇಣಸರಮುಂ ಮೊದಲಾದವು ಮಾನಸಿಕ ಪಾಪಂಗಳೆನಿಪುವು. ಈ ಪ್ರಕಾರದ ಪಾಪಂಗಳಂ ಮಾಡಿದವರ್, ಆವಾವ ಪಾಂಗಿನ ಶರೀರದೊಳಾವಾವ ತೆಱದೊಳ್ಪಾಪಂಗಳನೆಸಗಿದರ್, ಮರಣಾನ್ತದೊಳದೇಪ್ರಕಾರದ ಯಾತನಾಶರೀರಮಂ ಪರಿಗ್ರಹಿಸುವರ್. ಯಾತನಾಶರೀರಮೆಂಬುದು ಕೊಯ್ದೊಡಂ, ಕೊರೆದೊಡಂ, ಸೀಳ್ದೊಡಂ, ಸುಟ್ಟೊಡಂ ಅಳಿದು ಪೋಗದೆ ಮುಟ್ಟಿದೊಡೆ ಕಂದುವಂತೆ ಮೆಲ್ಲಿತಾಗಿ ಮಿತಿಯಿಲ್ಲದ ವೇದನೆಯನನುಭವಿಸುತಿರ್ಪುದು. ಇನ್ತಿರ್ಪ ಶರೀರದೊಳ್ಪಾಪಿಗಳಂ ಯಾತನೆಬಡಿಸುವ ಕ್ರಮಮೆಂತೆನೆ:— ಈ ಪಾಪಿಯನ್ನಿಲ್ಲಿಸಿ ಗರಗಸದಿಂ ಕೊಯ್ವುದುಂ, ಬಾಚಿಯೊಳ್ಕೆತ್ತುವುದುಂ, ಚಾಳು ನೆಲದೊಳ್ಪೊರಳಿಪುದುಂ, ನಿಂಬೆವುಳಿಯ ಮಡುವಿನೊಳ್ಮುಳುಂಗಿಪುದುಂ, ಕಾದೆಣ್ಣೆ ಕೊಪ್ಪರಿಗೆಯೊಳ್ಕುದಿಯಿಪುದುಂ, ತೆಳಸಿದ ಕೊಡಲಿಯೊಳ್ ಸಂದುಸಂದುಗಳಂ ತರ್ಱಿಪುದುಂ, ಪರ್ದುಗಾಗೆ ಗೂಗೆ ನಾಯ್ನರಿಗಳ್ಗಂ ಭೂತಪ್ರೇತಪಿಶಾಚಕಂಗಳ್ಗಂ ಕರುಳ್ಕಿತ್ತು ಕರ್ಣ್ಣಂಗಳಂ ಪರ್ಚ್ಚುಕುಡುವುದುಂ, ಸಾಣೆವಿಡಿದ ಶಸ್ತ್ರಮಂತಿರ್ಪೆಲೆಗಳಿಂದೆಸೆವೆಲೆಗಳ್ಳಯ ಕಾಡೆಂಬ ಅಸಿಪತ್ರವನದೊಳ್ ಅತ್ತಣಿಂದಿತ್ತಣ್ಗೋಡಿಸಿ ಇತ್ತಣಿಂದತ್ತಣ್ಗೋಡಿಸಿ ಮೆಯ್ಯಕಣ್ಣುಕರುಳ್ಗಳಂ ಕತ್ತರಿಪುದುಂ, ಕವಣೆಯೊಳಿರಿಸಿ ಬೀಸಿಬೀಸಿಡುವುದುಂ, ಉದ್ದಮಾದ ಬೆಟ್ಟದ ಕೊನೆಯ ಕೋಡುಗಲ್ಗಳ ಮೇಲೆ ಕುಳ್ಳಿರಿಸಿ ಜರಿಗೆ ತಲೆಕೆಳಗು ಮಾಡಿ ನೂಂಕುವುದುಂ, ಕಾಯ್ದ ಕಾವಲಿಯ ಮೇಲೆ ಪೊರಳಿಪುದುಂ, ಮೈಯ್ಯೆಲ್ಲಮಂ ಪಿರಿದು ಕಿರಿದಾಗಿ ಕತ್ತರಿಪುದುಂ, ಕತ್ತರಿಸಿದ ತುಂಡುಗಳಂ ಗುಂಭದೊಳ್ತುಂಬಿ ಕುದಿಯಿಸುವುದುಂ, ಇವು ಮೊದಲಾದ ಯಾತನೆಗಳಂ ಪಲವುಂ ಕೋಟಿ ಯುಗಮನುಭವಿಸಿ, ಮಗುಳೆ ಭೂಮಿಯೊಳ್ಪುಟ್ಟುವಾಗಳುಂ ಮಾನಸಿಕ ಪಾಪಂಗಳನೆಸಗಿದವರ್ ಪಕ್ಷಿಮೃಗಂಗಳಾಗಿಯುಂ, ಕಾಯಿಕ ಪಾಪಂಗಳನೆಸಗಿದವರ್ ಪುಲ್ಗಿಡುಮ

ಯುದ್ಧವರ್ ಶ್ವಾನ ಸೂಕರ ಖರೋಷ್ಟ್ರಯೋನಿಗಳೊಳಂ ಆಡುಕುರಿ ಪುಲ್ಲೆಪಕ್ಷಿಗಳೊಳಂ ಚಾಂಡಾಲ ಯೋನಿಗಳೊಳಂ ಪಲವುಂ ಬಾರಿ ಪುಟ್ಟುತಿರ್ಪರ್. ಸುರಾಪಾನಮಂ ಮಾಡಿದ ಪಾಪಿಷ್ಠರ್ ಕ್ರಿಮಿ ಕೀಟ ಪತಂಗಯೋನಿಗಳೊಳಂ ಅಮೇಧ್ಯಭಕ್ಷಕಂಗಳಾದ ಶ್ವಾನಸೂಕರಾದಿ ಗಳೊಳಂ, ಹಿಂಸಕಂಗಳಾದ ಪುಲಿಕರಡಿಮುಂತಾದವರೊಳಂ, ಅಸ್ಪೃಶ್ಯಂಗಳಾದ ಗಾಗೆಗೂಗೆಮೊದಲಾದುವರೊಳಂ, ಅನ್ತ್ಯಜಾತಿಯೊಳಂ ಪಲರ್ಮೆ ಪುಟ್ಟುತಿರ್ಪರ್. ಸುವರ್ಣಸ್ತೇಯಮಂ ಮಾಡಿದವರ್ ಪಾಮು ಪಲ್ಲಿಗಳೊಳಂ, ನೀರ ಕಾಗೆ ಕೋಳಿಮೊದಲಾದ ಜಲಚರ ಪಕ್ಷಿಗಳೊಳಂ, ಭೂತ ಪ್ರೇತ ಪಿಶಾಚ ಬ್ರಹ್ಮರಾಕ್ಷಸ ಜಾತಿಯೊಳಂ, ಪುಟ್ಟುತಿರ್ಪರ್. ಗುರುತಲ್ಪಗಮನಮನೆಸಗಿದವರ್ ಪುಲ್ಪೊದರ್ಬಳ್ಳಿಗಳಾಗಿಯುಂ, ಪೆಣ್ದೀನಿಗಳಾದ ನಾಯ್ನರಿಗಳಾಗಿಯುಂ, ಕ್ರೂರಕರ್ಮರತರಾದ ಮನುಷ್ಯರಾಗಿಯುಂ ಪುಟ್ಟುತಿರ್ಪರ್. ಈ ಮಹಾಪಾತಕಿಗಳೊಡನಾಡುವ ತತ್ಸಂಯೋಗಮೆಂಬ ಪಾತಕಮನೆಸಗಿದವರ್ ಬ್ರಹ್ಮರಾಕ್ಷಸಯೋನಿಯೊಳ್ಪುಟ್ಟುತಿರ್ಪರ್. ಇಂತಿವು ಮೊದಲಾಗಿ ಪಲವುಂ ತೆರದ ಪಾಪಂಗಳನೆಸಗಿದವರ್ ಪಲವುಂ ಪಾಪಯೋನಿಗಳೊಳ್ಪುಟ್ಟುತಿರ್ಪರ್. ಈ ಪಾತಕಿಗಳ್ಗವರ ಪಾತಕಂಗಳನಿತರ್ಕಂ ಬೇರೆಬೇರೆ ಪ್ರಾಯಶ್ಚಿತ್ತಮನೆಸಗುವುದು ಜನ್ಮಕೋಟಿಯೊಳಂ ತೀರದು. ದಯಾಳುವಾದ ನಿನ್ನ ಕಟಾಕ್ಷದಿಂ ಮನದೊಳ್ವಿವೇಕಂಪುಟ್ಟಿ, ಪಿಂತಣ ಪಾಪಕ್ಕೆ ಪಶ್ಚಾತ್ತಾಪಮುಂಟಾಗಿ, ಯಥಾಶಕ್ತಿ ಪ್ರಾಯಶ್ಚಿತ್ತಮನಾಚರಿಸಿ, ನೀನಾಳ್ದನುಂ ತಾನಾಳುಮೆಂಬೆಣಿಕೆಗೂಡಿ, ನಿನ್ನನೇ ನೆನೆವುತಿರ್ಪುದೆಂಬ ಕೃಷ್ಣಾನುಸ್ಮರಣವೊಂದರಿಂದಮೆ ಸಕಲ ಪಾಪಂಗಳುಂ ನಪಾಸನಮಾಗಿ ಪೋಪುದೆಂಬ ಶಾಸ್ತ್ರಾರ್ಥತತ್ವಮಂ ತಿಳಿಯೆ, ನೀನೆ ಪರಮ ಪಾವನನೆನಿಸುವೆ. ಅದರಿಂ, ನೀನೆನ್ನ ಪಾಪಂಗಳಂ ಪರಿಹರಿಸದೆ ನಿನ್ನ ಪಾವನತ್ವಮಂ ಮರೆದೆನ್ನಂ ಪೊರೆವುದು ಪೊರೆವುದು ಅನನ್ಯಜನಸುಲಭ, ಶ್ರೀ ಯದುಶೈಲ ವಲ್ಲಭಾ!

* * * * *

ವೃ॥ ಶ್ರೀಪತಿಲೋಕಕರ್ತೃನಿಗಮಸ್ತುತನಪ್ರತಿಮೈಭವಂ ಜಗ।
ದ್ರೂಪನನಾದ್ಯನಾಥಕನಶೇಷಸಮಂ ಪರತತ್ವನುಂ ಪೃಥ॥
ಗ್ರೂಪವಿಚಿತ್ರಕರ್ಮಫಲದಾಯಕನೆಂದು ಮಹೀಮಹೇಂದ್ರನೋ।
ಲ್ದೀಪರಿ ದೈತ್ಯವೈರಿಗೊರೆದಂ ಪದಿನೆಂಟುಮುದಾರಗದ್ಯದೊಳ್॥

ಪದಿನಾಲ್ಕುಂ ಲೋಕಮುಂ ಭಾವಿಸೆಯುಸುಖಮನಿತ್ಯಂ
ಪರಬ್ರಹ್ಮವೊಂದೇ। ವಿದಿತಂ ನಿತ್ಯಾಮಿತಾನಂದಮಯಮೆ
ನಿಪ ಘಂಟಾರ್ಥಮಂ ಭಾವಿಸಲ್ಕೀ॥ ಪದದೊಳ್ವೈರಾಗ್ಯ
ಮುಂ ಮೋಕ್ಷದೊಳೆರಕಮುಮುಕ್ಕುಂ ಬುಧರ್ಗೆಂದುಮಿ
ಕ್ಕುಂ। ಮುದದೊಳ್ ಪ್ರಾಧಪ್ರತಾಪಂ ಸನಕಮುನಿ ಸ
ಮಾರಾಧಿತಂಗೊಲ್ದು ಪೇಳ್ದಂ॥ ೨॥

ಕಂ॥ ಮುಕ್ತಿಯೊಳಾಸೆಯುಮಿತರವಿ।
ರಕ್ತಿಯುಮನುಗೂಡಿದಪವರ್ಗಮೋಕ್ಷೋಪಾಯಂ॥
ಯುಕ್ತಮನೆಪೇಳ್ದನಿತರ।
ಭಕ್ತಕುಟುಂಬಂಗೆಮಣಿದು ಚಿಕದೇವೇಂದ್ರಂ॥ ೩॥

ಈರಾರುಂಗದ್ಯದೊಳ್।
ನ್ನೋರನ್ತೆಯೆ ಮುಕ್ತ್ಯುಪಾಯಮಂ ಮೋಕ್ಷಮುಮಂ॥
ಸೂರಿಸಮಾಜಂ ಸೈಯೆನೆ।
ನಾರಾಯಣನಡಿಗಭೇದ್ಯವಿಶ್ರಮನುಸಿರ್ದಂ॥ ೪॥

ಮೋಕ್ಷದಾನೈಕದೀಕ್ಷಿತಾ! ಲೋಗರ್ಬಯಸುವ ಪುರುಷಾರ್ಥಂಗಳೊಳರ್ಥಕಾಮಾದಿಗಳ ಸ್ಥಿರಂಗಳುಮಲ್ಪಸುಖಂಗಳುಮೆಂದು, ಅವಂ ಜರೆದು, ನಿತ್ಯಮುಂ ನಿರವಧಿಕಾನನ್ದಮುಮಪ್ಪುದರಿಂ ಮೋಕ್ಷಮೊನ್ದನೆ ಪೊಗಳ್ದು, ಇದಂ ಸಾಧಿಸಲ್ಕೆ ಕರ್ಮಜ್ಞಾನಭಕ್ತ್ಯಾದಿಗಳುಪಾಯಂಗಳೆಂದುಂ ವೇದಾನ್ತಂಗಳುಂ ತಿಳಿಪಿದ್ವು. ಈ ತತ್ವಾರ್ಥಮಂ ಪಿರಿಯರುಪದೇಶದಿಂದರಿತು ವಿಚಾರಿಸೆ, ಕರ್ಮಯೋಗಮೆಂಬುದು:— ಅರಿವುಮಾಪ್ಪುರ್ಗಂ ಪುರುಳಲ್ಲದೆಮಗೆ ನೀನಿವೆಲ್ಲಮನಿತ್ತು, ನೀನಿತ್ತ ಸಾಮಗ್ರಿಯಿಂ ನಿನ್ನೊಳಗೆಮ್ಮ, ನಿತ್ಯಕರ್ಮಗಳನೆ

ಮ್ಮ ಕೈಯೊಳ್ನೀನೇ ಮಾಡಿಸುವುದರಿಂ ವರ್ಣಾಶ್ರಮ ಧರ್ಮಂಗಳ ನಾಮೆಸಗುವೆವೆಂಬ ಕರ್ತೃತ್ವಕ್ಕಂ, ಈ ಕರ್ಮದಿಂದೆ ಈ ಫಲಮಂ ಪಡೆವೆವೆಂಬ ಕಾಮನೆಗಂ ಕಾರಣಮಿಲ್ಲೆಂದು ತಿಳಿದು, ಈ ನೆನಪುಗೂಡಿ ವರ್ಣಾಶ್ರಮ ಧರ್ಮಂಗಳನೆಸಗುವ ಜಾಣ್ಮೆ ; ಜ್ಞಾನಯೋಗಮೆಂಬುದು:— ಈ ಕರ್ಮಯೋಗದಿಂ ಪಿಂತಣ ಸಕಲಪಾಪಂಗಳೆಂಬ ಕಲ್ಮಷಮಂ ಕಳೆದು, ನಿರ್ಮಲಮೆನಿಪಂತಃಕರಣದೊಳ್ ಶಾಸ್ತ್ರೋಕ್ತ ಕ್ರಮದಿಂದಿರ್ಪತ್ತನಾಲ್ಕುಂ ತತ್ವಂಗಳ ನೆಲೆಯುಂ ತಿಳಿದು, ಇವೆಲ್ಲಕ್ಕಂ ಅಧಿಕಮೆನಿಪ ಜೀವಾತ್ಮ ಪರಮಾತ್ಮ ಸ್ವರೂಪಮಂ ಸಾಕ್ಷಾತ್ಕರಿಸಿದಂತೆ ಅರಿವ ತಿಳಿವು ; ಭಕ್ತಿಯೋಗಮೆಂಬುದು:— ಜೀವಪರಮರ ನೆಲೆಯುಂ ತಿಳಿದು, ನಿತ್ಯಮೆನಿಪ ವರ್ಣಾಶ್ರಮಧರ್ಮಂಗಳನಾಚರಿಸುತ್ತೆ ವೇದಾಂತವಿಹಿತಕ್ರಮದೊಳ್ ಪ್ರೀತಿರೂಪವಾಗಿ ನಿನ್ನಡಿಗಳನೆಡವಿಡದೆ ನೆನೆವ ನಿಧಿಧ್ಯಾಸನಂ. ಇವರ ನೆಲೆಯುಂ ವಿಚಾರಿಸೆ, ಕರ್ಮಯೋಗಂ ಮನಸ್ಸಿಂಗೆ ಪರಿಶುದ್ಧಿಯನೆಸಗುತ್ತೆ ಜ್ಞಾನಯೋಗಮನುಣ್ಟುಮಾಡಿ ಭಕ್ತಿಯೋಗಕ್ಕಂಗಮಾಗಿರ್ಪುದಲ್ಲದೆ ಸ್ವಾತನ್ತ್ರ್ಯದಿಂ ಮೋಕ್ಷಸಾಧನಮಲ್ತು ; ಜ್ಞಾನಯೋಗಮುಂ ಭಕ್ತಿಗೆಯ್ದ ಜೀವಾತ್ಮಸ್ವರೂಪಮುಂ ಭಕ್ತಿಗೆ ವಿಷಯಮಪ್ಪ ನಿನ್ನಸ್ವರೂಪಮಂ ತಿಳಿಪಿ ಭಕ್ತಿಯೋಗಮಂ ಬಳೆಯಿಪುದಲ್ಲದೆ ಸ್ವಾತನ್ತ್ರ್ಯದಿಂ ಮೋಕ್ಷ ಸಾಧನಮಲ್ತು ; ಭಕ್ತಿಯೋಗಮುಂ ಆಳ್ದನಪ್ಪ ನಿನ್ನಡಿಯೊಳ್ ಆಳೆನಿಸಿದ ಆಮೆಸಗುವ ಪ್ರೀತಿ, ಲೋಕದೊಳ್ ಆಳ್ದಂಗೆ ಆಳ್ಗಳೊಳ್ಪುಟ್ಟದ ಪ್ರೀತಿಯೇ ಕಾರ್ಯಕರಮಲ್ಲದೆ ಆಳೆನಿಸಿದವರ್ಗೆ ಆಳ್ದನೊಳುಂಟಾದ ಪ್ರೀತಿ ಮಾತ್ರಮೇ ಕಾರ್ಯಕರಮಲ್ತೆಂಬುದರಿಂ, ಭಕ್ತಿಯುಂ ಸಾಕ್ಷಾನ್ಮೋಕ್ಷಸಾಧನಮಲ್ತು. ನಿನ್ನ ಪ್ರೀತಿಯೊಂದೇ ಮೋಕ್ಷಸಾಧನಮಪ್ಪುದರಿಂ, ನಿನ್ನ ದಯಾಮೃತದೊಳ್ಪುಟ್ಟಿ ಬೆಳೆದ ಪರಾಂಕುಶ ಪರಕಾಲ ಯತಿವರಾದಿಗಳ್ಪಡಿಮ ಲಕ್ಷ್ಮಣಾಚಾರ್ಯವರ್ಯನ್ತಮಾದ ಹಿರಿಯರುಂ ಕುರಿತೆನ್ನೊಳ್ ದಯೆಗೆಯ್ವುದು ದಯೆಗೆಯ್ವದನನ್ಯಜನಸುಲಭ, ಶ್ರೀಯದುಶೈಲವಲ್ಲಭಾ!

ಕಂ ॥ ಸಾತ್ವಿಕಶಾಸ್ತ್ರಂಗಳೊಳೇ।
ತತ್ತ್ವಂನಿರ್ಣೀತಮಕ್ಕುಮೆಂದಾದರದಿಂ ॥
ಸಾತ್ವನಿಧಿಯಡಿಗೆ ವೈಷ್ಣವ ।
ತತ್ವೋದ್ಧರಣಪ್ರವೀಣನೊಳ್ಪಿಂದೊರೆದಂ ॥

ಸತ್ವಪ್ರವರ್ತಕಾ! ವೇದಾನ್ತಾರ್ಥಮನ್ನಿಶ್ಚೈಸುವೆಡೆಯೊಳ್ ಇತಿಹಾಸಪುರಾಣಂಗಳಿಂದು ನಿಶ್ಚೈಸವೇಳ್ಪುದು. ಅವರೊಳ್ ಶ್ರೀರಾಮಾಯಣ ಭಾರತಂಮೊದಲಾದ ಇತಿಹಾಸಂಗಳ್ ನಿನ್ನ ಮಹಿಮೆಯನೆ ಪೇಳ್ವುದರಿಂ, ಸಾತ್ವಿಕಂಗಳಾಗಿ ಸರ್ವಾಂಶದೊಳಂ ಪ್ರಮಾಣಂಗಳಾಗಿಪ್ಪುವು. ಪುರಾಣಂಗಳನಿತುಂ ಚತುರ್ಮುಖಂ ಪವಳ್ಗೈದುದರಿಂ ಆಚತುರ್ಮುಖಂಗೆ ಆ ದಿವಸದೊಳಾವಗುಣಂ ಪೆಚ್ಚಿರ್ಪ್ಪುದು, ಆ ದಿನದೊಳ್ಪೇಳ್ದ ಪುರಾಣಂ ಆಗುಣಮಾಗಿಪ್ಪುದು. ಅದೆಂತೆನೆ:— ನಾಲ್ಮೊಗನ ದಿನಕ್ಕೆ ಕಲ್ಪಮೆಂದು ಪೆಸರ್. ನಾಲ್ಮೊಗನುಂ ಪ್ರಕೃತಿಯೊಳ್ಸಲ್ಕಿದವನಾದಕಾರಣಂ, ಆತಂಗಂ ಸತ್ವ ರಜಸ್ತಮೋಗುಣಂಗಳೊಳವು. ಆವಕಲ್ಪಂಗಳೊಳ್ ಸತ್ವಗುಣಂ ಪ್ರಬಲಗುಣಮಾಗಿರ್ಕುಂ, ಆ ದಿವಸಂಗಳೊಳ್ಪೇಳ್ದ ಪುರಾಣಂಗಳ್ ಸಾತ್ವಿಕಂಗಳೆನಿಸಿ, ನಿನ್ನ ಮಹಿಮೆಯಂ ಪೊಗಳ್ದು, ಮೋಕ್ಷಸಾಧನಮಾಗಿರ್ಕ್ಕುಂ. ಮತ್ತಂ ಆವದಿವಸಂಗಳೊಳ್ ರಜೋಗುಣಂ ಪ್ರಬಲಮಾಗಿರ್ಕುಂ, ಆ ದಿವಸದೊಳ್ಪೇಳ್ದ ಪುರಾಣಂಗಳ್ ರಾಜಸಂಗಳೆನಿಸಿ, ನಾಲ್ಮೊಗನ ಪೇರ್ಮೆಯಂ ಪೇಳ್ದು ಸ್ವರ್ಗೈಶ್ವರ್ಯಾದಿಮಧ್ಯಮ ಫಲಸಾಧನಮಾಗಿರ್ಕುಂ. ಮತ್ತಂ ಆವ ದಿವಸಗಳೊಳ್ತಮೋಗುಣಂ ಪ್ರಬಲಮಾಗಿರ್ಕುಂ, ಆ ದಿವಸಂಗಳೊಳ್ ಪೇಳ್ದ ಪುರಾಣಂಗಳ್ತಾಮಸಂಗಳೆನಿಸಿ, ರುದ್ರನ ಪೆಚ್ಚುಗೆಯಂ ನುಡಿದು, ಅಧೋಗತಿಸಾಧನಮಾಗಿರ್ಕ್ಕುಂ. ಆದುದರಿಂ ನಾಲ್ಮೊಗಂ ಸತ್ವೋದ್ರಿಕ್ತದಿವಸಂಗಳೊಳ್ಪೇಳ್ದ ಸಾತ್ವಿಕಪುರಾಣಂಗಳ್ಮುಖ್ಯ ಪ್ರಮಾಣಮಾಗಿರ್ಕ್ಕುಂ. ಮಿಕ್ಕ ರಾಜಸತಾಮಸಪುರಾಣಂಗಳೊಳ್ ಸಾತ್ವಿಕಪುರಾಣಕ್ಕೆ ವಿರುದ್ಧಮಲ್ಲದಂಶಮೆಲ್ಲಮುಂ ಪ್ರಮಾಣಮಾ

12

ಗಿರ್ಕ್ಕುಂ; ವಿರುದ್ಧಮಾಗಿರ್ಪ್ಪಂಶಂ ಸ್ವಾರ್ಥದೊಳಪ್ರಮಾಣಮಾಗಿ, ಪ್ರಶಂಸಾಧಿಪರಮಾಗಿರ್ಕ್ಕುಂ. ಈ ಮರ್ಯಾದೆಯುನರಿಯದೆ, ರಾಜಸ ತಾಮಸ ಪುರಾಣಂಗಳೊಳ್ಪೇಳ್ದುದೆಲ್ಲಮುಂ ಪ್ರಮಾಣಮೆಂದು ನಂಬಿ ನಡೆವರ್ಗ್ಗೆ ಮಧ್ಯಮಗತಿಯುಮಧೋಗತಿಯುಮಪ್ಪುದೆಂದು ಮತ್ಸ್ಯಪುರಾಣದೊಳ್ಪೇಳ್ದುದು; ಶ್ರೀ ಭಗವದ್ಗೀತೆಯೊಳ್ ನೀನುಂ ಪೇಳ್ದೆ. ಇದರ ನೆಲೆಯುಂ ವಿಚಾರಿಸೆ, ಪರಮಪುರುಷಾರ್ಥಮಾದ ಮೋಕ್ಷಮೆಂಬುದು ಅರ್ಥಪಂಚಕ ತತ್ವಜ್ಞಾನಮಿಲ್ಲದೆ ಕೂಡದು, ಆ ತತ್ತ್ವಜ್ಞಾನಂ ಸಾತ್ವಿಕಶಾಸ್ತ್ರಪ್ರವೇಶಮಿಲ್ಲದೆ ಕೂಡದು, ಆ ಸತ್ವಗುಣಂ ನಿನ್ನ ಜಾಯಮಾನಕಟಾಕ್ಷಮಿಲ್ಲದೆ ಕೂಡದು. ಅದರಿಂ ನಿನ್ನ ಜಾಯಮಾನಕಟಾಕ್ಷಮುಂ ಪಡೆದು, ಸಾತ್ವಿಕರಾಗಿ ಸಾತ್ವಿಕ ಪುರಾಣಾನುಗುಣಮಾಗಿ ವೇದಾನ್ತಾರ್ಥನಿಶ್ಚಯಂಗೆಯ್ವ ಮಹಾತ್ಮರ ಸೇರೆ ನೆಮ್ಮುವ ಸತ್ವಗುಣಮನೆನಗೆ ಪಾಲಿಪುದು ಪಾಲಿಪುದನನ್ಯಜನ ಸುಲಭ, ಶ್ರೀ ಯದುಶೈಲವಲ್ಲಭಾ! * * *

---

— ಇಪ್ಪತ್ತೊಂದನೆಯ ಬಿನ್ನಪಂ —

ಕಂ॥ ಯೋಗಂಸಾಂಖ್ಯಂಪಾಶುಪ।
ತಾಗಮಮಿನಿತರ್ಕ್ಕೆಪಾಂಚರಾತ್ರಮಿದಿರಿದೆಂ।
ದಾಗೋವಿಂದನೊಳುಸಿರ್ದಂ।
ರಾಗದೆ ದುರ್ಮ್ಮತವಿಮರ್ದನದ್ಭುತಚರಿತಂ॥

ಸರ್ವತನ್ತ್ರಸ್ವತನ್ತ್ರ! ತಂತ್ರಂಗಳೆಂಬವು— ಸಾಂಖ್ಯಮುಂ, ಯೋಗಮುಂ, ಪಾಶುಪತಮುಂ, ಶ್ರೀ ಪಾಂಚರಾತ್ರಮೆಂಬುವು. ಇವರ್ಕ್ಕೆ ಸಿದ್ಧಾನ್ತಂಗಳೆಂದುಂ, ಆಗಮಂಗಳೆಂದುಂ, ಪೆಸರಾಗಿರ್ಕ್ಕುಂ. ಇವರೊಳ್ ಸಾಂಖ್ಯತಂತ್ರಮೆಂಬುದು, ಈ ಪಂಚವಿಂಶತಿ ತತ್ವಂಗಳ ಸ್ವರೂಪಮಂ ನಿರೂಪಿಸಲ್ಕಾಗಿ ಪುಟ್ಟಿರ್ಪ್ಪುದರಿಂ, ತತ್ವನಿರೂಪಣಂಗೆಯ್ವಂಶದೊಳ್ ಪ್ರಮಾಣಮಾಗಿರ್ಕ್ಕುಂ. ಈ ತತ್ವನಿರೂಪಣದೊಳ್ ಲರುಂ ಪ್ರೀತಿಯಿಂ ಪ್ರವರ್ತಿಸವೇಳ್ಪುದೆಂದು ಈ ಪಂಚವಿಂಶತಿ ತ

ಳಿಂದಮೀ ಜಗಂ ಪುಟ್ಟುವದು, ಬೇರೆಯಿಪ್ಪತ್ತಾರನೆಯ ತತ್ವಮಾ
ದ ಈಶ್ವರನಂ ಕಣ್ಡವರಾರ್? ' ಎಂದಿವು ಮುಂತಾಗಿ ವೇದವಿರುದ್ಧಂ
ಗಳಾಗಿ ಕೆಲವು ವಚನಂಗಳಿರ್ಪುವು ; ಆಯಂಶಂ ಸ್ತುತಿರೂಪಮಲ್ಲದೆ
ಪ್ರಮಾಣಮಲ್ತು. ಯೋಗತಂತ್ರಮೆಂಬುದು, ಯಮ ನಿಯಮಾದಿ
ಯೋಗಾಂಗಂಗಳಂ ನಿರೂಪಿಸಲ್ಕಾಗಿ ಪುಟ್ಟಿರ್ಪುದರಿಂ, ಯೋಗನಿರೂ
ಪಣಂಗೆಯ್ವ ಅಂಶದೊಳ್ಪ್ರಮಾಣಮಾಗಿರ್ಕ್ಕುಂ. ಈ ಯೋಗನಿರೂ
ಪಣದೊಳೆಲ್ಲರುಂ ಪ್ರೀತಿಯಿಂ ಪ್ರವರ್ತಿಸಲ್ಕಾಗಿ ಜಗದೀಶ್ವರಂಗಂ
ಈ ಯೋಗಪ್ರಭಾವದಿಂದಮೆ ಜಗದೀಶ್ವರತ್ವಮುಣ್ಟಾಯಿತೆಂಬಿವು
ಮುನ್ತಾಗಿ ವೇದವಿರುದ್ಧಂಗಳಾಗಿ ಕೆಲವು ವಚನಂಗಳಿರ್ಕ್ಕುಂ. ಆ
ಯಂಶದೊಳ್ ಸ್ತುತಿರೂಪಮಲ್ಲದೆ ಪ್ರಮಾಣಮಲ್ತು. ಪಾಶುಪತ
ಮೆಂಬುದು, ಧರ್ಮ್ಮಾರ್ತ್ಥಕಾಮಂಗಳೆಂಬ ತ್ರಿವರ್ಗಫಲಸಾಧನಮಾದ ದೇ
ವತಾನ್ತರೋಪಾಸನಪ್ರಕಾರಮಂ ನಿರೂಪಿಸಲ್ಕಾಗಿ ಪುಟ್ಟಿರ್ಪ್ಪುದ
ರಿಂದಾ ದೇವತೋಪಾಸನಾ ನಿರೂಪಣಂ ಗೆಯ್ವಂಶದೊಳ್ಪ್ರಮಾಣ
ಮಾಗಿರ್ಕ್ಕುಂ. ಈ ದೇವತಾನ್ತರೋಪಾಸನಂಗಳೊಳೆಲ್ಲರುಂ ಪ್ರೀ
ತಿಯಿಂ ಪ್ರವರ್ತಿಸಲ್ಕಾಗಿ ಈ ದೇವತಾಂತರಂಗಳೇ ಪರತತ್ವಮೆಂದಿ
ವು ಮುಂತಾಗಿ ವೇದವಿರುದ್ಧಂಗಳಾಗಿ ಕೆಲವು ವಚನಂಗಳಿರ್ಕ್ಕುಂ.
ಆ ಯಂಶದೊಳ್ ಸ್ತುತಿಮಾತ್ರಮೆಯಲ್ಲದೆ ಪ್ರಮಾಣಮಲ್ತು. ಶ್ರೀ
ಪಾಂಚರಾತ್ರಮೆಂಬುದು ವೇದಾನ್ತತಾತ್ಪರ್ಯವಿಷಯಮಾದ ಭಗವದು
ಪಾಸನಾ ನಿರೂಪಣಾರ್ತ್ಥಮಾಗಿ ಪುಟ್ಟಿರ್ಪುದರಿಂ, ಸರ್ವಾಂಶದೊಳಂ
ವೇದಾನ್ತಾನುಗುಣಮಾಗಿ ಪ್ರಮಾಣಮಾಗಿರ್ಕ್ಕುಂ. ಈಯರ್ತ್ಥಂ ಮ
ಹಾಭಾರತದ ಶಾನ್ತಿಪರ್ವದೊಳ್ಸುವ್ಯಕ್ತಮಾಗಿರ್ಕ್ಕುಂ. ಅದೆಂತೆನೆ:
ಮೋಕ್ಷಧರ್ಮದೊಳ್ನಷ್ಟಾ ನಿರ್ಣ್ಣಯಾಧ್ಯಾಯದೊಳ್ « ವೇದಂಗಳುಂ,
ಶ್ರೀ ಪಾಂಚರಾತ್ರಮುಂ, ಸಾಂಖ್ಯಮುಂ, ಯೋಗಮುಂ, ಪಾಶುಪತ
ಮೆಂಬೀ ಪಂಚ ಸಿದ್ಧಾಂತಂಗಳುಂ ಪರಸ್ಪರ ವಿರುದ್ಧಮಾದ ತತ್ವದ
ನೆಲೆಗಳಂ ಪ್ರತಿಪಾದಿಸುವುವೋ? ಎಲ್ಲಮುಂ ಒನ್ದೇ ತತ್ವದ ನೆಲೆಯುಂ
ಪ್ರತಿಪಾದಿಸುವುವೊ? " ಎಂದು ಪ್ರಶ್ನಪೂರ್ವಕಮಾಗಿ ವಿಚಾರಿಸಿ, ಪ
ಲವುಂ ದಾರಿಗಳೊಂದೇ ಪಟ್ಟಣಮಂ ಸೇರಿಯೊಂದೇನೆಲೆಯುಂ ಪಡೆವಂ
ತೆ ವೇದಮುಂ ಶ್ರೀ ಪಾಂಚರಾತ್ರಮುಂ ಮಿಕ್ಕಿನ ಮೂರುಂ ತಂತ್ರಂಗ

ಳುಂ ನಿನ್ನ ಮಹಿಮೆಯುಂ ಪ್ರತಿಪಾದಿಸಿಯೊಂದೇ ನೆಲೆಯುಂ ಪಡೆವುವೆಂದು ನಿರ್ಣಯವಾಗಿರ್ಪುದು. ಇನ್ನುತ್ತ ತಂತ್ರಂಗಳನಿತುಂ ನಿನ್ನಂ ಪ್ರತಿಪಾದಿಸುತ್ತೆ ನಿನಗೆ ಪರತಂತ್ರಮಾಗಿರ್ಪುದರಿಂ, ನೀಂ ಸರ್ವತಂತ್ರಸ್ವತಂತ್ರನೆನಿಸುವೈ. ಇಂತಿರ್ಪ ನೀನೆಯೆನಗೆ ನಿನ್ನ ನೆಲೆಯುಂ ತಿಳುಪುವುದು ತಿಳುಪುವುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ!

## — ಇಪ್ಪತ್ತೆರಡನೆಯ ಬಿನ್ನಪಂ —

ಕಂ॥ ಆರಯೆವಿಷಯಾವಳಿಯೊಳ್ ।
ವೈರಾಗ್ಯಂಸುಲಭಮೊಳ್ಪನರಿವರ್ಗೆನ್ನಾ॥
ಸೂರವಡೆಸೂರೆಗಾರು ।
ಸಾರಸಭವಸನ್ನುತಂಗೆಬಿನ್ನತಿಗೆಯ್ದಂ॥

ಅನನ್ಯಜನಸುಲಭಾ! ಜಗದೊಳ್ಮನುಜರ್, ಶಬ್ದಾದಿ ವಿಷಯಂಗಳಂ ಬಿಟ್ಟು ನಿನ್ನನೆ ನೆರೆ ನಮ್ಬುವವರ್ಗೆ ನೀಂ ಸುಲಭನೆಂದು ತಿಳಿದ ಮಹಾತ್ಮರ್ ನಿನ್ನಡಿಗಳಂ ಸಾರ್ದು ತಮ್ಮ ಭಾರಮನಿಳುಪಿ ಸುಖದೊಳಿರ್ಪರ್; ಮತ್ತೆ ಕೆಲಪ್ಪರ್ಜ್ಞತಮನ್ಯರ್, ಶರೀರಮುಳ್ಳನ್ನೆವರಂ ವಿಷಯಂಗಳಂ ಬಿಡಕೂಡದುದರಿಂ ನಿನ್ನ ಭಜನೆ ದುರ್ಘಟಮೆಂಬರ್. ಅವರ್ಪೇಳ್ವ ಕುಯುಕ್ತಿಗಳ್ಕೆಲವೊಳವು. ಅವೆಂತೆನೆ:— ವಿಷಯಂಗಳಂ ಪರಿತ್ಯಜಿಸುವದೆಂಬುದು ದುರಳ್ತರಂ ; ವಿಷಯಂಗಳನಿತುಮಂ ನಾಶಂಗೆಯ್ವುದೊಂದು, ಅಲ್ಲದೊಡೆ ವಿಷಯಂಗಳರ್ಪುದಂ ಅವು ಸೋಂಕದಿರ್ಪುದುಮೊಂದು. •ಇವರೊಳ್ನೀನುಂಟುಮಾಡಿದ ವಿಷಯಂಗಳನಿತುಮಂ ನಾಶಂಗೆಯ್ದಪೆ, ನಿನ್ನೊಡಮೆಗಳಂ ಕೆಡಿಸಿದ ಸ್ವಾಮಿದ್ರೋಹಂ ಬರ್ಪುದು ; ವಿಷಯಂಗಳ ಸೋಂಕಿಲ್ಲದಿರ್ಪೆವೆಂದೊಡೆ, ಈ ಪ್ರಕೃತಿಮಣ್ಡಲಮಂ ಬಿಟ್ಟು ಪೋಗದರಿಂದಮಶಕ್ಯಮಲ್ತು. ಊರೊಳಿರ್ಪ ವನಿತಾದಿವಿಷಯಮಂ ಮಾಣ್ದು ಬನದೊಳಿರ್ದಡಂ, ನೀರೊಳ್ಮುಳುಂಗಿರ್ದಡಂ, ಆದಿಭರತನಂತೆಯುಂ ಸೌಭರಿಯನ್ತೆಯುಂ ಎರಳೆಯ ಕಱು ಮೀನ್ಮೊದಲಾದ ವಿಷಯಂಗಳ್ಸಂಸಾರಸಂಬನ್ಧಮನುಂಟು ಮಾಡದೆ ಬಿಡವು, ಅದರಿಂ ವಿಷಯತ್ಯಾಗಮಶಕ್ಯಮೆಂಬರ್. ಇವರೋ

ರ್ಕ್ಮೆಯುಂ ವೇದಾನ್ತವಿತ್ತುಗಳಪ್ಪ ಪಿರಿಯರಡಿನೆಳಲೊಳಿರ್ದು ಪ್ರೊಳ್ತುಗಳೆದವರಲ್ತು. ಪಿರಿಯರುಪದೇಶದಿಂ ತಿಳಿಯೆ, ವಿಷಯಪರಿತ್ಯಾಗಮತ್ಯನ್ತಸುಲಭಮಾಗಿರ್ಪ್ಪುದು. ಅದೆನ್ತೆನೆ:— ಆಳೋರ್ವ್ವನರಸನ ನೆಣಿಸದೆ ಅವನ ಭಣ್ಡಾರಕ್ಕೆ ಸಲುವ ನಾಡು ಬೀಡಗಳೊಳಪ್ರೊಡವೆಗಳಂ ತನಗೆಂದು ಘುಳಸಿ, ತನ್ನಿಚ್ಛೆಬನ್ದನ್ತೆ ಬೀಯ್ಯಂಗೆಯ್ದು ಕಿಡಿಸಿದೊಡೆ ಆಸೆಗನುಂ ಸ್ವಾಮಿದ್ರೋಹಿಯುಮಕ್ಕುಂ ; ಅನ್ತಲ್ಲದೆ ತಾನಾಳೆಂಬ ನೆನಪ್ರುಗೂಡಿ ಅವನ ಸೇವೆಗೆಂದೊಡವೆಗಳಂ ಸಂಪಾದಿಸಿದುದೆಲ್ಲಮನಂದಂದಿಗೊಪ್ಪಿಸಿ, ಅವನಾರೋಗಣೆಗೆಯ್ದುಳಿದ ಅಮೃತಾನ್ನಮನುಣ್ಡು ಅವನುಟ್ಟು ತೊಟ್ಟು ಕಳದಿತ್ತೊಡವೆಯುಡಿಗೆಗಳಂ ಧರಿಸಿ, ಸಿರಿವಡೆದು ಮೆರೆದೊಡಂ ನಿಸ್ಪೃಹನುಂ, ವಿಶ್ವಾಸಿಯುಮೆನಿಕ್ಕುಂ. ಅಂತು ನಿನ್ನೊಳಗಮನೆನಿಸಿದ ತನ್ನ ಸ್ವರೂಪಮಂ ತಿಳಿಯದೆ ತಾಂಸ್ವತನ್ತ್ರನೆಂಬಜ್ಞಾನದಿಂ ತನ್ನ ಭೋಗಾರ್ಥವಾಗಿ ವಿಷಯಂಗಳನನುಭವಿಸುವಂಗೆ ವಿಷಯತ್ಯಾಗಮುಂ ನಿನ್ನ ಭಕ್ತಿಯುಂ ಕೂಡದು; ಅಂತಲ್ಲದೆ ತಾಂ ನಿನಗೆ ಆಳೆನಿಪ ನೆನಪ್ರುಣ್ಟಾಗಿ ವರ್ಣಾಶ್ರಮಧರ್ಮ್ಮಂಗಳೆನಿಪ ನಿನ್ನೊಳಗಂಗಳೊಳ್ ಶಕ್ತಿವಂಚನೆಯಿಲ್ಲದೆ ನಡೆದು, ವೇದಶಾಸ್ತ್ರಂಗಳೆಂಬ ನಿರೂಪಸಹಮಾಗಿ ನೀಂ ಕರುಣಿಸಿದ ವಿಷಯಂಗಳನನುಭವಿಸಿದೊಡೆ, ಅದುವುಂ ನಿನ್ನೊಳಗಂಗಳಲ್ಲದೆ ವಿಷಯಾಸಕ್ತಿಯಲ್ತು. ಇನ್ತು ನಡೆದ ವಸಿಷ್ಠವಿಶ್ವಾಮಿತ್ರರ್ ಗೃಹಸ್ಥಾಶ್ರಮದೊಳಿರ್ದ್ದುಂ ನಿತ್ಯಬ್ರಹ್ಮಚಾರಿಯುಂ, ನಿತ್ಯೋಪವಾಸಿಯುಮೆನಿಸಿದರ್. ಅದರಿಂ ನೀನವರ್ಗ್ಗೆ ಸುಲಭಮೆನಿಪ್ರುದು. ವಿಷಯವಿರಕ್ತಿಯನಿತ್ತು, ನಿನ್ನ ಭಕ್ತಿಯನೆನಗೀವುದು ಎನಗೀವುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ! * * * *

— ಇಪ್ಪತ್ತಮೂರನೆಯ ಬಿನ್ನಪಂ —

ಕಂ ॥ ಸಲ್ಲದುಕೇವಲಕರ್ಮ್ಮಂ ।
ಬಲ್ಲರಮತದಿಂದೆಮುಕ್ತಿಮಾರ್ಗಕ್ಕೆಂದಾ॥
ಬಲ್ಲರಬಲ್ಲಹನೊಲವಿಂ।
ಮೆಲ್ಲಡಿಯೊಳ್ಮಣಿದುಹರಿಗೆಬಿನ್ನತಿಗೆಯ್ದಂ॥

ಸಕಲ ಕರ್ಮ್ಮಫಲಪ್ರದಾ! ಕರ್ಮ್ಮಮೆಂಬುದು ಮಾನಿಸರೆಸಗುವೆಸಕಂ. ಅದು ಸತ್ಕರ್ಮ್ಮಮೆಂದುಂ ದುಷ್ಕರ್ಮ್ಮಮೆಂದುಂ ಎರಳ್ತೆರಂ. ಸತ್ಕರ್ಮ್ಮಮೆಂಬುದು ನಿನ್ನ ನಿರೂಪವಾದ ವೇದಶಾಸ್ತ್ರಂಗಳೊಳ್ಪೇಳ್ದವೆತ್ತ ನಡತೆ. ದುಷ್ಕರ್ಮ್ಮಮೆಂಬುದು ಅದರೊಳಲ್ಲಗಳೆದ ನಡೆತೆ. ಸತ್ಕರ್ಮ್ಮದಿಂ ಪುಣ್ಯಮುಂ, ದುಷ್ಕರ್ಮ್ಮದಿಂ ಪಾಪಮುಮುಕ್ಕುಂ. ಪುಣ್ಯಮೆಮ್ಬುದು ನಿನ್ನೊಲ್ಮೆ. ಪಾಪಮೆಮ್ಬುದು ನಿನ್ನ ಮುನಿಸು. ಪುಣ್ಯದಿಂ ಸುಖಮುಂ, ಪಾಪದಿಂ ದುಃಖಮುಮುಕ್ಕುಂ. ಆ ಸತ್ಕರ್ಮ್ಮಮುಂ ನಿತ್ಯಮೆನ್ದುಂ ಕಾಮ್ಯಮೆಂದುಂ ಎರಳ್ತೆರಂ. ನಿತ್ಯಮೆಂಬುದು ಈ ವರ್ಣ್ಣದವರ್ ಈ ಆಶ್ರಮದವರ್ ಇದಂ ನಡೆವುದು, ಇದಂ ಬಿಡುವುದು, ಎಂದು ನೀಂ ಸ್ವರುಚಿಯಿಂದಾಣತಿಗೆಯ್ದೆಸಕಂ. ಇದಂ ನಿನ್ನ ಭಕ್ತರ್ ನೀಂ ಸರ್ವಜ್ಞನುಂ ಸರ್ವಶಕ್ತಿಯುಂ ಭಕ್ತವತ್ಸಲನೆಂದುಂ ನಿನ್ನನೆ ನೆರೆನಂಬಿ, ನಿನ್ನ ಗುಣಂಗಳ್ಗೆ ಮಾರುವೋಗಿ, ನಿನ್ನಾಣತಿವಿಡಿದು, ನಿನ್ನೊಳಗಂ ಗೈದುದೇ ಸ್ವಯಂ ಫಲಮೆಂದೆಸಗಿ, ಮೋಕ್ಷಮಂ ಪಡೆವರ್. ಕಾಮ್ಯಮೆಮ್ಬುದು ನಿನ್ನ ಮನಂ ಬಾರದಿರ್ದೊಡಂ, ಅವರವರಾಸೆವಡುವ ನಿರ್ಬನ್ಧದಿಂ ಈ ಫಲಮನೆಳಸಿದವನೀಕರ್ಮ್ಮಮನೆಸಗುವುದೆಂದು ಉದಾಸೀನಬುದ್ಧಿಯಿಂ ನೀಂ ಕಟ್ಟುಮಾಡಿದುದು. ಫಲದಾಸೆಯಿಂದೀ ಕಾಮ್ಯಕರ್ಮ್ಮಂಗಳಂ ಸಾಂಗವಾಗಿ ಯಾಚರಿಸಿದವರ್ಗ್ಗೆ ಇಹದೊಳ್ ಪೃಥ್ವೀಪತಿತ್ವಪರ್ಯನ್ತಮಾದೈಶ್ವರ್ಯಮುಂ, ಪರದೊಳ್ ಸತ್ಯಲೋಕಾಧಿಪತ್ಯಪರ್ಯನ್ತಮಾದೈಶ್ವರ್ಯಮೆಮ್ಬುದು. ದುಷ್ಕರ್ಮ್ಮಮೆಂಬುದು ನೀಂ ನಿರವಿಸಿದುದಂ ಬಿಡುವುದುಂ, ನೀನಲ್ಲಗಳೆದುದಂ ನಡೆವುದುಮೆಮ್ಬೆರಡು ತೆರಂ. ಇದರಿಂದಿಹದೊಳ್ ಚಿತ್ರವಧಾನ್ತಮಾದ ದುಃಖಮುಂ ಪರದೊಳ್ ಮಹಾನರಕಪಾತಾನ್ತಮಾದ ಯಾತನೆಯುಮುಕ್ಕುಮೆಂದು ವೇದಾನ್ತವಿತ್ತುಗಳಾದ ಪಿರಿಯರಿಂ ಕೇಳ್ದು ತಿಳಿದೆಂ. ಇದರ ನೆಲೆಯಂ ವಿಚಾರಿಸೆ ಕಾಮ್ಯಕರ್ಮ್ಮಮುಂ ದುಷ್ಕರ್ಮ್ಮಮುಂ ನಿನ್ನ ಮನಕ್ಕೆ ಬಾರದಿರ್ದುದರಿಂ, ನಿನ್ನಡಿಯಂ ಸೇರಲೀಸದೆ ಸಂಸಾರಮೆಂಬ ಸೆರವನೆಯೊಳ್ಕೆಡಪಿ ಕಾಲ್ದೊಡಕಾಗಿಪ್ಪುದರಿಂ ಪೊನ್ನ ಕಾಬ್ಬೊನ್ನ ಸಂಕಲೆಗಳಂತಿಪ್ಪುವು. ಅದರಿಂದೀ ಯೆರಡುಂ ತೆರದ ಬನ್ಧಕ್ಕೆ ಸಿಲ್ಕದೆ ನಿನ್ನನೆ ನೆರೆನಂಬಿ ನೀನೊಲ್ದು ನಿರವಿಸಿದ್ದೊಳಗಮಂ ಸನ್ತಸದೊಳೆಸ

೧, ನಿನ್ನ ಮುನ್ನಣೆಯಂ ಪಡೆವ ನ್ಯೆಪನೆನಗೆ ಪಾಲಿಪ್ಪುದು ಪಾಲಿಪುದು ಅನನ್ಯಜನಸುಭ, ಶ್ರೀ ಯದುಶೈಲವಲ್ಲಭಾ! * *

—— (*******) ——

—ಇಪ್ಪತ್ತನಾಲ್ಕನೆಯಬಿನ್ನಪಂ—

ಕ॥ ಔದಾಸೀನ್ಯದೊಳತರಮು।
ನಾದರದಿಂಮುಕ್ತಿಪದಮನೀವ್ಯೆನೀನೆ॥
ನ್ನಾದೇವದೇವನಂಭ್ರಗೆ।
ಯಾದವನಾರಾಯಣಾಙ್ಕನೊಲವಿನೊಂದ್ದರೆದಂ॥

ಸರ್ವಾಭೀಷ್ಟಪ್ರದಾ! ಜೀವಾತ್ಮರ್ ಪ್ರಕೃತಿಯೊಳ್ಪುದುಗಿರ್ಪುದರಿಂ ತಾತಮ್ಮ ಸ್ವರೂಪಮುಂ ಮರೆತು, ತಾಂ ಸ್ವತನ್ತ್ರರೆಂದೆಣಿಸಿ ದೇಹಮೇ ತಾವೆಂದು ಭ್ರಮಿಸುವರ್; ಈ ಯಜ್ಞಾನಮವಿದ್ಯೆಯೆನಿಪುದು. ತಾಂ ಸ್ವತನ್ತ್ರರೆಮ್ಬುದರಿಂ, ತಂತಮ್ಮ ಹಿತಂ ಗೈವೆವೆಂದು ಕಾರ್ಯಾಕಾರ್ಯಮನರಿಯದೆ ತಮ್ಮಿಚ್ಛೆಬನ್ದಂತೆ ನಡೆವರ್; ಅದು ಕರ್ಮಮೆನಿಪುದು. ಆ ಕರ್ಮಮುಂ ಯಜ್ಞದಾನತಪಸ್ಸುಮೊದಲಾದ ಸತ್ಕರ್ಮಮೆನ್ದುಂ, ಅಕೃತ್ಯಕರಣ ಕೃತ್ಯಾಕರಣಂಮೊದಲಾದಪಾಪಕರ್ಮಮೆನ್ದುಂ ಎರಡುಂ ರಾಸಿಯಾಗಿರ್ಕುಂ. ಇನ್ತು ಪಲವುಂ ತೆರನಾದ ಕರ್ಮಂಗಳೊಳಾವವನು ಪಲಕರ್ಮಮನಾಚರಿಪ್ಪುತಿರ್ಪನಾತಂಗೆ ಕರ್ಮದೊಳಭ್ಯಾಸಮುಪ್ಪುದರಿಂ, ತಾಂ ನಡೆಯುವೆಳ್ಪುದೆಂಬದಕ್ಕೆ ನೆನಪಿಲ್ಲದೆ ಮರೆದಿರ್ದಾಗಳುಂ ತಾನರಿಯದನ್ತೆ ಮುನ್ನಡೆದ ಕರ್ಮದೊಳ್ಪ್ರವೃತ್ತಿಪುಟ್ಟುಗುಂ; ಇದು ವಾಸನೆಯೆನಿಪುದು. ಮತ್ತಂ, ತಾಂ ನಡೆದ ಕರ್ಮದೊಳ್ ಮತ್ತಂ ಮಗುಳ್ದುಂ ಆಂ ಗೈವೆನೆಂಬ ಪ್ರೀತಿ ಪುಟ್ಟುಗುಂ; ಇದು ರುಚಿಯೆನಿಪುದು. ಇನ್ತು ರುಚಿಗೂಡಿ ನಡೆದವರ್ ಆ ಕರ್ಮದ ಫಲಮಂ ಭುಜಿಸಲ್ಕೆ ಅನುಗುಣಮಾಗಿ ನೀನಿತ್ತ ದೇವಮನುಷ್ಯಾದಿ ಶರೀರದೊಳ್ಪುಗುವರ್; ಇದು ಪ್ರಕೃತಿಸುಬನ್ಧಮನೀವುದು. ಇನ್ತು ಶರೀರಾತ್ಮಭ್ರಮಮುಂಮೊದಲಾದ ಅವಿದ್ಯೆಯುಂ, ಆ ಭ್ರಮದಿಂ ನಡೆವ ನಡೆತೆಯೆನಿಪ ಕರ್ಮಮುಂ, ಆ ನಡೆತೆಯೊಡಂಬಟ್ಟು ತಾನರಿಯದಾಗಳುಂ ಪ್ರವರ್ತಿಸುವ ವಾಸನೆಯುಂ, ಆ ನಡತೆಯೊಳ್ಪ್ರೀತಿ ಯೆಂಬ ರುಚಿ

ಯುಂ, ಆ ರುಚಿವೆರಸು ನಡೆದ ಕರ್ಮಫಲಮಾದ ಶರೀರಸಂಬಂಧಮುಂ ಜನ್ಮಜನ್ಮದೊಳ್ಮರಲ್ದು ಮರಲ್ದು ಬರ್ಪುದರಿಂದಿದೇ ಸಂಸಾರ ಚಕ್ರಮೆನಿಪುದು. ಈ ಸಂಸಾರಚಕ್ರದೊಳ್ ಬವಣಿಗೊಂಬ ಜೀವಾತ್ಮರ್ ತಂತಮ್ಮ ನಡತೆಗಳಂ ಸ್ವರೂಪಮುಳಿಯದಂತೆ ನೀನವರೊಳ್ದಯೆಗೆಯ್ದು, ಸುಖದುಃಖಾನುಭವದಿಂದವರ ಕರ್ಮಂಗಳಂ ಕಳೆವುತ್ತೆ, ಒರ್ಮೆ ನಿನ್ನಂ ಪೂಜಿಸಿ ಮುಕ್ತಿಯಂ ಪಡೆಯಲ್ಕನುಗುಣಮಾದ ಮನುಷ್ಯಶರೀರಮನುಣ್ಟುಮಾಳ್ಪುದರಿಂ ನೀಂ ಸಂಸಾರಿಗಳೊಳ್ದಯೆ ಯುಳ್ಳವನೆಂಬುದು. ಇನ್ತಿಪ್ಪ ಸಂಸಾರಿಗಳೊಳ್ಕೆಲಮ್ಬರ್ಗ್ಗೆ ವೈರಾಗ್ಯಂ ಪುಟ್ಟಿ ಮುಮುಕ್ಷುಗಳೆನಿಸೆ ಅವರ್ಗ್ಗೆ ಮೋಕ್ಷೋಪಾಯಮನನುಗೊಳಿಪುದರಿಂ ನೀಂ ಮುಮುಕ್ಷುಗಳೊಳ್ದಯೆಯುಳ್ಳವನೆನಿಪುದು. ನಿತ್ಯಮುಕ್ತರ್ಗ್ಗಂ, ಮೋಕ್ಷಮಂ ಪಡೆದವರ್ಗ್ಗಂ, ನಿರವಧಿಕಾನಂದಮನೆಡವಿಡದೆ ಬಳೆಯಿಸುವುದರಿಂ, ಮುಕ್ತರೊಳಂ ದಯಾಳುವೆನ್ಬುದು. ಇಂತು ಸರ್ವಸಮನೆನಿಪ ನೀಂ ನಿನ್ನ ದಯಾಮೃತಾಂಬುಧಿತರಂಗದಿಂದೆನ್ನ ಅಳಿಗೆಯ್ತಂಗಳೆಂಬ ಕರುಮ್ಮಂ ಕಳೆದು ನಿನ್ನಾಳ್ತನಮೆಂಬ ಪೊಗರಂ ಪೊಣ್ಮಿಪುದು ಪೊಣ್ಮಿಪುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ!

— ಇಪ್ಪತ್ತೈದನೆಯಬಿನ್ನಪಂ —

ಕಂ ‖ ಫಲಮುಪ್ಪುದು ನಿನ್ನಿಂದಮೆ ।
ಪಲತೆರದೊಳ್ಪೆರತಿನಲ್ತುದಿಟಮೆಂದೊರೆದಂ ‖
ನಲವಿಂ ಸತ್ಯಪರಾಕ್ರಮ ।
ನಲಸದೆ ಕಲ್ಯಾಣತೀರ್ಥನಿಲಯನಪದದೊಳ್ ‖

ಪ್ರಪನ್ನಜನಪರಿಪಾಲಕಾ! ಪಾಲನಮೆನೆ ಯೋಗಕ್ಷೇಮಂಗಳಂ ಪೊತ್ತಿಸಗುವುದು. ಯೋಗಮೆನೆ ಮುಂಪಡೆಯದ ಶ್ರೇಯಮನೊಡಗೂರ್ಚುವುದು. ಕ್ಷೇಮಮೆನೆ ಮುನ್ನಮೆ ಯಿಪ್ಪ ಶ್ರೇಯಸ್ಸುಗಳಂ ಕಾಪಿಡುವುದು. ಈ ಯೆರಡರ್ಕ್ಕಂ ನೀನೇ ಸ್ವತಂತ್ರ ಕರ್ತೃ. ಮಿಕ್ಕಿನ ಕಾರಣಂಗಳೆಲ್ಲಮುಂ ನಿನ್ನಧೀನಮೆನಿಸಿದುಪಕರಣಂಗಳ್. ಈ ನೆಲೆಯನರಿಯದೆ ಕೆಲಮ್ಬರ್ ಶಾಸ್ತ್ರ ತಾತ್ಪರ್ಯದೊಳ್ ಭ್ರಮಿಸುವರ್.

ಅವರೊಳ್ ಕೇವಲಕರ್ಮಠರ್ ಕರ್ಮದಿಂದಮೆ ಫಲಮೆಂದುಂ, ದೇವತಾನ್ತ
ರಪರಾರಾಧ್ಯರ್ ದೇವತಾನ್ತರದಿಂದಮೆ ಎನ್ದುಂ, ಜ್ಯೋತಿರ್ವಿದರ್
ಗ್ರಹಾನುಕೂಲ್ಯಮೊನ್ದಿದ ಕಾಲದಿಂದಮೆ ಎನ್ದುಂ, ಲೌಕಿಕರ್ ಪುರು
ಷಪ್ರಯತ್ನದಿಂದಮೆ ಎನ್ದುಂ, ನಾಸ್ತಿಕರ್ ಕಾರಣಮೊನ್ದುಮಿಲ್ಲದೆ
ತನ್ನಿಂದು ತಾನೆ ಎನ್ದುಂ ಪೇೞ್ವರ್. ಈ ಪಕ್ಷಂಗಳನಿತುಂ ಯುಕ್ತಿ
ವಿರುದ್ಧಂಗಳ್. ಅದೆನ್ತೆನೆ:— ಕರ್ಮವೆಂಬುದು ತಾಂ ನಡೆವ ನಡತೆ.
ಅದು ಅಚೇತನಮಾಗಿರ್ಪುದರಿಂ ಪುರುಷಂ ಬಯಸಿದ ಫಲಮಂ ತಿೞಿ
ದೆಸಗಲರಿಯದು. ದೇವತಾನ್ತರಮುಂ ಚೇತನಮಾದೊಡಂ ತನ್ನ
ಯೋಗಕ್ಷೇಮಕ್ಕಂ ನಿನ್ನಂ ಬಯಸುವುದರಿಂ, ಸ್ವಾತನ್ತ್ರ್ಯದಿಂ ಫಲ
ಮಲ್ತು. ಪುರುಷಪ್ರಯತ್ನಮೆ ಫಲಸಾಧಕಮಾದೊಡೆ, ಕಾರಣ
ಮೊಂದುಮಿಲ್ಲದಿರ್ದೊಡಂ, ಆವಗಮುನಿಬರ್ಗ್ಗಂ ಅನಿತುಂ ಫಲಮಾಗ
ವೇೞ್ಪುದು. ಅದರಿಂದಮೊಂದುಂ ಫಲಪ್ರದಂಗಳಲ್ತು. ಮತ್ತಂ ಜ
ಗಮೊಳಾಳ್ಗಳಂ ಪೊರೆವರಸಂಗೆ ಆಳ್ಗಳೆಸಗುವ ಉೞಿಗದನ್ತೆ ಕರ್ಮಂ;
ಆಳೆಸಗಿದೂೞಿಗಮನರಸಂಗಂ ಅರಸನಿತ್ತ ಜೀವನಮನಾಳ್ಗಮೊಪ್ಪಿ
ಸುವ ಸೇರುವೆಗಾರನನ್ತೆ ದೇವತಾನ್ತರಂಗಳ್; ಜೀವಿತಮನೀವುದ
ಕ್ಕೆ ಮಿತಿಗೆಯ್ದ ಪಗಲನ್ತೆ ಕಾಲಂ; ಅರಸನೂೞಿಗದೊಳ್ಕೈಕಾಲ್ಗಳ
ನಾಡಿಸುವನ್ತೆ ಪುರುಷಪ್ರಯತ್ನಂ; ಆಳ್ದನೊಲವನರಿಯದ ಮರುಳೂ
ೞಿಗದವನನ್ತೆ ತನ್ನಿಂದೆ ತಾನೆ ಫಲಮೆಮ್ಬುದು; ಇನ್ತಿರೆ, ತಾಂ ಗೆ
ಯ್ವುೞಿಗದಿಂದಮೆ ಬರ್ದುಂಕುವೆನೆಂದುಂ, ಸೇರುವೆಗಾರನಿಂದಮೆ
ಬಾಳ್ವೆನೆಂದುಂ, ಮಿತಿಗೆಯ್ದ ದಿನಂ ಬಂದೊಡೆ ಸಂಬಳಂ ಬರ್ಕ್ಕುಮೆಂ
ದುಂ, ವಿಷಯಂಗಳಂ ಸೋಂಕಿ ತನ್ನ ಬೆಮರಸೊರ್ಮ್ಮಿಂದಮೆ ತಾಂ ಪೆ
ರ್ಚ್ಚುವೆನೆಂದುಂ, ಆಕಸ್ಮಿಕಮಾಗಿ ಪೆಂಪುವಡೆದಿರ್ಪೆನೆಂದುಂ, ಎ
ಣಿಸುವರ್ ಆಳ್ದನೂೞಿಗದೊಳ್ನೆಲೆನಿಂದು ಕಡೆವಾಯಲರಿಯರ್. ಅದರಿಂ
ದೆ ಈ ಭ್ರಾನ್ತಿಗಳನುೞಿದು ನಿನ್ನಿಂದಮೆ ಬರ್ದುಂಕುವೆನೆಂದು ನಿ
ನ್ನಂ ನೆರೆನಂಬಿದವರ್ ಎನ್ತಪ್ಪರಾದೊಡಂ ಅವರ ಯೋಗಕ್ಷೇಮಂಗ
ಳಂ ಪೊತ್ತೆಸಗುವೆನೆಂದು ನೀಂ ಮುನ್ನಮರ್ಜುನಂಗೆ ಪೇೞ್ದುದಂ ಮ
ರೆಯದೆ ಈಗಳೆನ್ನಂ ಪಾಲಿಪುದು ಪಾಲಿಪುದನನ್ಯಜನಸುಭ, ಶ್ರೀಯ
**ದುಶೈಲವಲ್ಲಭಾ!** * * *

### — ಈರ್ಪ್ಪತ್ತಾರನೆಯ ಬಿನ್ನಪಂ —

ಕಂ॥ ಸರ್ವರನೋವುವನುಂ ನೀ।
ನೋರ್ವನೆಪೆಱರಾರುಮಾರ್ಪರಲ್ತೆನ್ದೊರೆದಂ॥
ನೀರ್ಮೊವಸಿರನಪಾದಕೆ।
ಪೇರ್ವಗೆದೞವೇಂಟಕಾರನಾದರದಿಂದಂ॥

ಸರ್ವರಕ್ಷಕಾ! ನೀನೋರ್ವನೇ ಅನಿಬರುಂ ಸಲಪ್ಪುವಂ. ಅಲ್ಲದೆ ಉೞಿದ ದೇವತಾನ್ತರಂಗಳುಂ ತಂದೆಮೊದಲಾದಬನ್ಧುಗಳುಂ ಧನಧಾನ್ಯಾದಿವಿಭವಂಗಳುಂ ರಕ್ಷಕರಲ್ತು. ಅದೆನ್ತೆನೆ:— ನಾಲ್ಮೊಗಂ ರಕ್ಷಕನಲ್ತೆಂಬುದು ತನ್ನ ತಲೆಯಂ ನೀಗಾಡಿದುದಲ್ಲದೆಯುಂ ವೇದಾಪಹರಣದೊಳ್ಕಂಗಾಣದೆ ಮೊಱೆಸನ್ದುದಱಿಂ ತಿಳಿವುದು. ರುದ್ರನುಂ ರಕ್ಷಕನಲ್ತೆಂಬುದು ವೃಕಾಸುರವರಪ್ರದಾನದೊಳ್ ಬವಣೆಗೊಂಡು ಬನ್ನಂಬಟ್ಟುದಲ್ಲದೆಯುಂ ಕೈದುವಿಡಿದು ಕಾದಿದರ್ಗಂ ತನ್ನಿದಿರೊಳ್ನಿಲ್ಗಳ್ಪರಿದರಿಚುವ ಬಾಣಾಸುರನಂ ಬಿಟ್ಟು ಪರಿದೋಡಿದುದಱೊಳ್ತಿಳಿವುದು. ಇಂದ್ರಾದಿದೇವತೆಗಳುಂ ರಕ್ಷಕರಲ್ತೆಂಬುದು ಹಿರಣ್ಯಾಕಬಲಿವೃತ್ರಾಸುರಾದ್ಯುಪದ್ರವಂಗಳಿಂ ತಂತಮ್ಮ ಬೀಡುಗಳಂ ಮಾಣ್ದು ಪರಿದೋಡಿದುದಱೊಳ್ತಿಳಿವುದು. ತಂದೆಯುಂ ರಕ್ಷಕನಲ್ತೆಂಬುದು ಹಿರಣ್ಯಕಶಿಪುವಿನೊಳ್ತಿಳಿದುದು. ಒಡಹುಟ್ಟಿದರುಂ ರಕ್ಷಕರಲ್ತೆಂಬುದು ವಾಲಿಯೊಳ್ತಿಳಿವುದು. ಮಕ್ಕಳುಂ ರಕ್ಷಕರಲ್ತೆಂಬುದು ಕಂಸನೊಳ್ತಿಳಿವುದು. ಗಂಡಂದಿರುಂ ರಕ್ಷಕರಲ್ತೆಂಬುದು ಪಾಂಡವರೊಳ್ತಿಳಿವುದು. ಧನಧಾನ್ಯಾದಿವಿಭವಂಗಳುಂ ರಕ್ಷಕರಲ್ತೆಂಬುದು ದಾಯಿಗರ್ ಪಗೆವರ್ ಕೊಳ್ಳೆಕಳ್ಳರ್ ಪೆಱರುಂ ಮೊದಲಾದುದಱಿಂದಳಿದು ಪೋಪುದಱೊಳ್ತಿಳಿವುದು. ಇನ್ತು ತಾಂ ರಕ್ಷಕರಲ್ಲದೊಡಂ ಅಲ್ಪಬುದ್ಧಿಗಳ್ಗೆ ರಕ್ಷಕಂಗಳಂತೆ ತೋಱಿ ಮೋಸಂಗೊಳ್ವುದಱಿಂ ರಕ್ಷಕಾಭಾಸಂಗಳೆನಿಪ್ಪುವು. ಅಂತಲ್ಲದೆ ನೀಂ ನಾಲ್ಮೊಗಂಗೆ ವೇದಮಂ ತಂದಿತ್ತುಂ, ರುದ್ರಂಗೆ ವೃಕಾದ್ಯುಪದ್ರವಂಗಳಂ ಪರಿಹರಿಸಿಯುಂ, ಇಂದ್ರಾದಿಗಳ್ಗೆ ದಾನವೇಂದ್ರರಂ ಗೆಲ್ದು ತಂತಮ್ಮಧಿಕಾರಂಗಳೊಳ್ನಿಲಿಸಿಯುಂ, ಪ್ರಹ್ಲಾದಂಗಭಯಮುಮಂ, ಸುಗ್ರೀವಂಗೆ ರಾಜ್ಯಮಂ, ಉಗ್ರಸೇನಂಗರಸುತನಮುಮಂ, ದ್ರೌಪದಿಗಭಿಮಾನರಕ್ಷೆಯುಮನೊಡರ್ಚಿ ಸರ್ವರಕ್ಷಕನೆನಿಸಿ ನೆಗೞ್ದ ನಿನ್ನಂ ಮಱೆವೊಕ್ಕು

ನಿನ್ನ ಮೆಲ್ಲಡಿಗಳೆ ಉಪಾಯೋಪೇಯಂಗಳೆಂದು ನೆರೆನಂಬಿ ಪೆರತೆಲ್ಲಮಂ ತೊಱೆದು ಅನನ್ಯಗತಿಯೆನಿಸಿದೆಂ. ಎನ್ನಂ ರಕ್ಷಿಪುದು ರಕ್ಷಿಪುದು ಅನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ! * *

—— (*********) ——

## — ಈಪ್ಪತ್ತೇಳನೆಯ ಬಿನ್ನಪಂ —

ಕಂ ॥ ತನ್ನಿರವಿಂ ತಾನಱ್ಕದೆ।
ನಿನ್ನಿರವಂ ತಿಳಿವನಳವುಗೊಂಬಂ ದಿಟಮೆ॥
ನ್ನುದ್ನತಮಹಿಮಂಗೊರೆದಂ।
ಮನ್ನೆಯ ಬಲ್ವಾಗೆಯ ಬಂದಿಕಾರಂ ನಲವಿಂ॥

ಅಖಿಲಲೋಕಶರಣ್ಯಾ! ನೀಂ ಮಱೆವೊಕ್ಕರೆಡರಂ ಕಳೆದು ಅವರಭೀಷ್ಟಮಂ ಸಲಿಪಂ. ಸಕಲಮಂ ತಿಳಿಯಲ್ಕೆ ಸರ್ವಜ್ಞನುಂ, ತಿಳಿದಂತೆಸಗಿ ನಿರ್ವಹಿಸಲ್ಕೆ ಸರ್ವಶಕ್ತಿಯುಮೆಂದು ಪಿರಿಯರಿಂ ಕೇಳ್ದಾಸೆಯಿಂ ನಿನ್ನಂ ಮಱೆವುಗುವೆನೆಂದು ಪೂಣ್ದೆಂ. ಈಗಳುಮೆನ್ನ ದೋಷಂಗಳನೆಣಿಸಿ, ಪಿಂದೆಗೆವೆನೆಂದೊಡೆ, ನಿನ್ನ ಗುಣಂಗಳೆನ್ನಱ್ಕಂ ತೀರ್ಚಿ, ಬಲ್ಮೆಯಿಂದೆಳೆದೊಯ್ದು, ನಿನ್ನ ಸಿರಿಯಡಿ ನೆಳಲೊಳ್ನಿಲಿಸುತ್ತಿದೆ. ಅದೆನ್ತೆನೆ:— ಅನಾದಿಕಾಲದಿಂದೀವರೆಗಮಾನೊಡರ್ಚಿದ ಪಲವುಂ ಪಾತಕಂಗಳನೆಣಿಸಿ ಕೈದೆಗೆವನಿತರೊಳೆ ಸೇರಿದರ ತಪ್ಪನೊಪ್ಪಗೆಯ್ವ ನಿನ್ನ ವಾತ್ಸಲ್ಯಗುಣಂ ಮುಂದುವರಿದೆನ್ನಂ ದಟ್ಟಗಟ್ಟಸುತ್ತಿದೆ. ಆಂ ಅಜ್ಞನುಮಶಕ್ತನುಮಾದುದರಿಂ ನಿನ್ನ ಚಿತ್ತಂ ಬರ್ಪಂತೆ ಇನಿಸುಂ ನಡೆಯಲಾಱದೆನ್ನಂ ನೀನೇತರದಿಂ ಕೈವಿಡಿವೆ ಎಂದೆಣಿಸಿ, ಬೆರ್ಚುವನಿತರೊಳೆ ನೀನೊಡೆಯನುಮಾನೊಡಮೆಯುಮಪ್ಪುದರಿಂದೊಡೆಯನೊಡಮೆಯಂ ಕಾಪಿಡುವುದರ್ಕೆ ಕೂಲಿಯಿಲ್ಲೆಂಬೀ ಸ್ವ-ಸ್ವಾಮಿಸಂಬನ್ಧಜ್ಞಾನಮುಭಯಮನೀವುತ್ತಿದೆ. ಅಖಿಲಹೇಯ ಪ್ರತ್ಯನೀಕನಪ್ಪ ನಿನ್ನ ಮೇಲ್ಮೆಯುಮಂ, ಸಕಲಹೇಯಾಸ್ಪದಮಪ್ಪೆನ್ನ ಕೀಳ್ಮೆಯುಮನೆಣಿಸಿ ನಿನಗಮೆನಗುಂ ಸಂಗತಿಯಿಲ್ಲೆಂದು ಪಿಂದೆಗೆವನಿತರೊಳೆ ಪಿರಿಯನಾಗಿಯುಂ ಕಿರಿಯರೊಳೊಂದುವೆರಸಿ ಸೊಗಯಿಸುವ ನಿನ್ನ ಸೌಶೀಲ್ಯಗುಣಂ ಎನ್ನಂ ಬರಸೆಳೆವುತ್ತಿದೆ. ಬ್ರಹ್ಮಾದಿಗಳ್ಗಮವಾಙ್ಮನಸಗೋ

ಚರನಪ್ಪ ನಿನ್ನಂ ಆಂ ಕಾಣ್ಬುದರಿದೆಂದು ಪೆರಸಾರ್ವನಿತರೊಳೆ ಯದು ಶೈಲದೀಪಮೆನಿಸಿ ಸಕಲಜನನಯನಾನನ್ದನಮಾದ ನಿನ್ನ ದಿವ್ಯಮಂಗಳ ವಿಗ್ರಹಮೆನ್ನನಾಳ್ಗೊಳುತ್ತಿದೆ. ಇನ್ತಪ್ಪುಪರಿಂ ಜ್ಞಾನಭಕ್ತಿವೈ ರಾಗ್ಯಾದಿಸದ್ಗುಣಸಂಪನ್ನರ್ಗಂ ಅಕಿಂಚನರುಮನನ್ಯಗತಿಗಳುಮಪ್ಪ ಎನ್ನವಂದಿಗರ್ಗ್ಗಂ ಒಂದೆ ಕಾಪಾಗಿ ಸರ್ವ ಶರಣ್ಯನೆನಿಸಿದ ನಿನ್ನಂ ಮ ರೆವೊಕ್ಕೆಂ. ಎನ್ನಂ ಕೈವಿಡಿದು ಕಾಪಿಡುವುದು ಕಾಪಿಡುವುದನನ್ಯಜನ ಸುಲಭ, ಶ್ರೀ ಯದುಶೈಲವಲ್ಲಭಾ! * *

---

— ಈರ್ಪತ್ತೆಂಟನೆಯ ಬಿನ್ನಪಂ —

ಕಂ || ಮಾಯಾತತ್ಕಾರ್ಯ್ಯಂಗಳ್ |
ನೀಯೊಡೆಯೊಳ್ಬಿಡಿಸಿಸಲಪುವೈನೀಚೆಂದಾ ||
ಮೂಯಿಮರಾಬರಗಣ್ಣಂ |
ಮಾಯಾತೀತಂಗೆಮಣಿಪುಬಿನ್ನತಿಗೆಯ್ದಂ ||

ಸಕಲಜೀವದಯಾಪರಾ! ಜೀವಾತ್ಮರ್ಪಲರಾಗಿ, ನಿತ್ಯರೆಂದುಂ ಮುಕ್ತರೆಂದುಂ ಬದ್ಧರೆಂದುಂ ಮೂರುಂ ತೆರನಾಗಿರ್ಪ್ಪರ್. ಅವರೊಳ್ ನಿತ್ಯರ್ ನಿನ್ನ ಸತ್ಯಸಂಕಲ್ಪದಿಂದೆ ಒರ್ಮೆಯುಂ ಪ್ರಕೃತಿಸಂಬಂಧಮಿಲ್ಲ ದೆ ಆವಗಂ ನಿನ್ನಯ ಸನ್ನಿಧಿಯೊಳಿರ್ದು ಕಲ್ಯಾಣಗುಣಂಗಳನನುಭವಿ ಸುತ್ತೆ ನಿನ್ನ ಪಲವೊಳಗದವರಾಗಿರ್ಪ್ಪರ್. ಮುಕ್ತರೆಂಬರ್ ಅನಾದಿ ಕಾಲದಿಂ ಸಂಸಾರದೊಳಿರ್ದ್ದು ನಿನ್ನ ಕಟಾಕ್ಷದಿಂ ಸತ್ವಗುಣಸಂಪನ್ನ ರಾಗಿ ಮುಕ್ತಿಯುಂ ಪಡೆದು ನಿತ್ಯರಂತೆ ನಿನ್ನೊಳಗದವರಾಗಿರ್ಪ್ಪರ್. ಬದ್ಧರೆಂಬವರ್ ಸಂಸಾರದೊಳ್ಕಟ್ಟುವಡೆದು ಪ್ರಕೃತಿ ಪರತಂತ್ರರಾಗಿ ರ್ಪ್ಪರ್. ಈ ಬದ್ಧರುಂ ಸಂಸಾರಿಗಳೆಂದುಂ ಮುಮುಕ್ಷುಗಳೆಂದುಂ ಎ ರಳ್ತೆರನಾಗಿರ್ಪ್ಪರ್. ಅಲ್ಲಿ ಸಂಸಾರಿಗಳೆಂಬವರ್ ನಿನ್ನಂ ಮರೆದು ವಿ ಷಯಾನುಭವಪರರಾಗಿರ್ಪರ್. ಮುಮುಕ್ಷುಗಳೆಂಬವರ್ ನಿನ್ನ ಕಟಾಕ್ಷ ದಿಂದೀ ವಿಷಯಂಗಳೊಳ್ ವೈರಾಗ್ಯಂ ಪುಟ್ಟದುದರಿಂ, ಈ ಪ್ರಕೃತಿ ಸಂಬನ್ಧಮಂ ಕಳೆಯವೇಳ್ಪುದೆಂದು ನಿನ್ನಂ ಮರೆವೊಕ್ಕರ್. ಈ ನಿತ್ಯ ರ್ಗ್ಗಂ ಮುಕ್ತರ್ಗ್ಗಮಪೇಕ್ಷಿತಮಪ್ಪ ನಿನ್ನೊಳಗಮಂ, ಮುಮುಕ್ಷುಗಳ್ಗ

ಪೇಕ್ಷಿತಮಪ್ಪ ಮೋಕ್ಷಮುಮಂ, ನೀನೆ ಮನಮೊಲ್ದು ಪಾಲಿಸುವೈ. ಸಂಸಾರಿಗಳ್ಗಮಪೇಕ್ಷಿತಮೆನಿಸುವ ಇಹಪರೈಶ್ವರ್ಯಂಗಳಂ ಅವರವರ್ ಪೂಜಿಪ ದೇವತಾನ್ತರ್ಯಾಮಿಯಾಗಿರ್ದುಂ ಪಾಲಿಸುವೈ. ಇಂತು ನೀಂ ಸಕಲಾತ್ಮವರ್ಗದೊಳಂ ದಯೆಗೈವುತ್ತಿರೆ, ಆನಿಂದು ನಿನ್ನಂ ಪ್ರಾರ್ಥಿಸುವ ಚಾಪಲಮಂ ಸೈರಿಸಿ ಸಲಪುವುದು ಸಲಪುವುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ! * *

(**************)

— ಈಪ್ಪತ್ತೊಂಭತ್ತನೆಯ ಬಿನ್ನಪಂ —

ಕಂ॥ ಸಿರಿಯನೆಲೆ ಸಿದ್ಧಭೋಗ್ಯಂ।
ನಿರವದ್ಯಂ ನಿನ್ನದಿವ್ಯವಿಗ್ರಹಮೆಂದಾ॥
ಧರಣೀವರಾಹಬಿರುದಂ।
ಚರಣಾಬ್ಜಕೆಮಣಿದುಚಲ್ವರಾಯಂಗೊರೆದಂ॥

ದಿವ್ಯಮಂಗಳವಿಗ್ರಹಾ! ಪುಟ್ಟುವಾಗಳ್ ನಿನ್ನ ಕಟಾಕ್ಷಮಂ ಪಡೆದು ಸಾತ್ವಿಕರಾದವರ್ ಪ್ರಾಕೃತಮಾದ ಶಬ್ದಾದಿವಿಷಯಂಗಳ್ ಹೇಯಂಗಳೆಂದು ತಿಳಿದು, ಅವರೊಳ್ ಪ್ರೀತಿಯನುಳಿದು, ಪರಮಭೋಗ್ಯಮಪ್ಪ ನಿನ್ನ ದಿವ್ಯಮಂಗಳವಿಗ್ರಹಮಂ ಬಯಸುವರ್. ಕುಮತಿಗಳ್ಕೆಲಂಬರ್ ನಿನಗೆ ವಿಗ್ರಹಮಿಲ್ಲೆಂದು ಅಪಲಪಿಸುವರ್. ಅವರ್ಪ್ಪೆವಣಿಸುವ ಕುಯುಕ್ತಿಗಳೆನ್ತೆನೆ:— ಪರಮಾತ್ಮಂಗೆ ಶರೀರಮುಂಟಾದೊಡೆ ಜೀವಾತ್ಮನಂತೆ ಕರ್ಮವಶ್ಯನಕ್ಕುಂ; ಶರೀರಾತ್ಮಭ್ರಮದಿಂ ಸಂಸಾರಿಯುಮಕ್ಕುಂ; ಶರೀರಮುಳ್ಳವಂಗೆ ಇಂದ್ರಿಯಸನ್ನಿಕೃಷ್ಟವಸ್ತುಸಾಕ್ಷಾತ್ಕಾರಮಲ್ಲದೆ ಸಕಲವಸ್ತುಸಾಕ್ಷಾತ್ಕಾರಮಿಲ್ಲದುದರಿಂ, ಸ್ವಾಧೀನಮಾಗಿಪ್ಪ ಕಾಲದೊಳ್ಕೃತಿಯಾಗಿಪ್ಪ ಕಾಲದೊಳಲ್ಲದೆ ಎಣಿಸಿದನ್ತೆಲ್ಲಮುಮೆಸಗಕೂಡದುದರಿಂದೆ ಅಲ್ಪ ಶಕ್ತಿಯುಮಕ್ಕುಂ; ಅದರಿಂದೆ, ಪರಮಾತ್ಮಂಗೆ ಶರೀರಮಿಲ್ಲೆಂದು ಪೇಳ್ವರ್. ಈ ಪಕ್ಷಂ ಯುಕ್ತಾಯುಕ್ತವಿಚಾರಂಗೈವ ಭಾವುಕರ್ಗೆ ಸೊಗಯಿಸದು. ಅದೆನ್ತೆನೆ:— ದೇವತಿರ್ಯಕ್‌ಸ್ಥಾವರರೂಪಮಾದ ಸಕಲಜೀವಶರೀರದೊಳನ್ತರ್ಯಾಮಿಯಾಗಿದ್ದುಂ ನಿರ್ಲೇಪನಾಗಿಪ್ಪವಂಗೆ ತನಗೆಂದು ಬಂದು ಶರೀರ

ಮುಂಟಾದೊಡೆ ಮುಪ್ಪೇಳ್ದ ದೋಷಂ ಬರ್ಕುಮೆಂಬುದು ಯುಕ್ತ ಮಲ್ತು. ದೇವಮನುಷ್ಯಾದಿಗಳ್ ತಂತಮ್ಮ ಪೂರ್ವಕರ್ಮಾನುಗುಣವಾದ ಶರೀರದೊಳಿರ್ದು ಕರ್ಮಫಲಮನನುಭವಿಸುವುದರಿಂದವರ್ಗೆ ಶರೀರಸಂಬಂಧಂ ದೋಷಾವಹಮಾದುದು. ಪರಮಾತ್ಮಂ ತಾಂ ಕರ್ಮಪರವಶನಲ್ಲದೊಡೆ ಜೀವಾತ್ಮರಂ ತತ್ತದ್ವ್ಯಾಪಾರದೊಳ್ ಕರ್ಮಾನುಗುಣವಾಗಿ ಪ್ರೇರಿಸುವುದಕ್ಕಾಗಿ ದೇವಮನುಷ್ಯಾದಿಶರೀರದೊಳಿಪ್ಪುದು ದೋಷಾವಹಮಲ್ತು. ಇಂತು ಹೇಯಮಾದ ದೇವಾದಿಶರೀರದೊಳಿರ್ದುಂ ನಿರ್ದೋಷನಾಗಿಪ್ಪ ಅಪ್ರಾಕೃತಮಾದ ನಿನ್ನ ದಿವ್ಯವಿಗ್ರಹಸಂಬಂಧದಿಂ ದೋಷಲೇಶಪ್ರಸಕ್ತಿಯಿಲ್ಲ. ಮತ್ತಂ, ನಿನ್ನ ದಿವ್ಯಮಂಗಳವಿಗ್ರಹಂ ನಿನ್ನ ಮೈಮೆಗೆ ತಕ್ಕುದಾಗಿ ನಿನ್ನ ಮನಂಬಂದುದುಮಾದ ಸುಗನ್ಧಮುಂ ಕಾನ್ತಿಯುಂ ಯೌವನಮುಂ ಮುಂತಾದ ಸಕಲಗುಣಂಗಳಂ ಪಡೆದು ಜ್ಞಾನಬಲೈಶ್ವರ್ಯವೀರ್ಯಶಕ್ತಿತೇಜಸ್ಸೌಶೀಲ್ಯಾದಿಸ್ವರೂಪಗುಣಂಗಳ್ಗೆ ಪ್ರಕಾಶಮಾಗಿ ಲಕ್ಷ್ಮೀನಿವಾಸಸ್ಥಾನಮಾಗಿ ನಿನ್ನ ನೆನೆದುತಿಪ್ಪುದರಿಂ ನಿನಗತಿಶಯಾವಹಮೆಂದು ಪಿರಿಯರ್ ಪೇಳ್ವರ್. ಅಂತಪ್ಪ ದಿವ್ಯ ಮಂಗಳವಿಗ್ರಹ ಸಾಕ್ಷಾತ್ಕಾರರಸಸರ್ವಸ್ವದಾನದಿಂದೆನ್ನ ಮನೋರಥಮಂ ಸಲಿಪುದು ಸಲಿಪುದನನ್ಯಜನಸುಲಭ, ಶ್ರೀ ಯದುಶೈಲವಲ್ಲಭಾ! * *

— ಮೂವತ್ತನೆಯ ಬಿನ್ನಪಂ —

ಕಂ ॥ ಶ್ರೀನಾಥನಿತ್ಯನಿರವಧಿ।
ಕಾನನ್ದಾನನ್ತನಿನ್ನಸೇವೆಯೆ ಫಲಮೆಂ॥
ದಾನಿರ್ಮಲನಡಿಗೊರೆದಂ।
ನಾನಾವಿಧಮಕುಟಮಣ್ಡಲೀಕರಗಣ್ಡಂ॥

ಸಕಲಕಲ್ಯಾಣಗುಣಾತ್ಮಕಾ! ನಿನಗಾಮೇಳೇಳ್ತರದಿಂ ಪಲವೂಳಿಗದವರಾದುದರಿಂದಾವಗಂ ನಿನ್ನ ಸಿರಿಯಡಿಯೂಳಿಗಮನೊಡರ್ಚುವುದೆಮಗೆ ಸ್ವತಸ್ಸಿದ್ಧಮೆಂಬುದು ಮಾತ್ರಮಲ್ತು. ಮತ್ತಂ ನಿನ್ನಡಿಯೂಳಿಗದವರೊಳ್ನೀಂ ಪೊರೆಯಿಲ್ಲದೊಡವೆರದಿರ್ದುಂ ತಣಿಯದೆ ಅರ್ಜುನಾದಿಗಳೊಳಾಳರಸುತನಮಂ ಪಲ್ಲಟಂಗೆಯ್ದು ನಲಿವ ಸುಶೀಲ

ನೆಂದುಂ, ಅವರೊಳ್ತೋರಿದ ತಪ್ಪುಂ ಸೈರಿಪುದಲ್ಲದೆಯುಂ ಭೃಗು ಮುನಿಮೊದಲಾದವರೊಳ್ನೀನೇ ತಪ್ಪಿದವನಂತೆ ಬಡಂಬಡಿಸುವ ಕಡು ಸೈರಣೆಯುಳ್ಳವನೆಂದುಂ, ಅವರ್ಗ್ಗಡಸಿದ ಎಡರಂ ನೀನಿರ್ದ್ದೆಡೆಯೊಳೇಯಿರ್ದುಂ, ಸಂಕಲ್ಪಮಾತ್ರದಿಂ ಪರಿಹರಿಪುದಲ್ಲದೆಯುಂ ಗಜೇಂದ್ರನ ಮೊರೆಯನಾಲಿಸಿದಂದು ಕದುಬುಗೊಣ್ಡು ನೀಂ ಭರದೊಳೊದವಿದ ಕಟ್ಟೆರಕದವನೆಂದುಂ, ಅವರೆಸಗುವ ಪ್ರತಿಜ್ಞೆಯುಂ ಸಲಿಪುದಲ್ಲದೆಯುಂ ಭೀಷ್ಮನೊಳ್ನಿನ್ನ ಪ್ರಜ್ಞಾಹಾನಿಯುಮನಂಗೀಕರಿಸಿದ ಭಕ್ತಪ್ರಯೋಜನೈಕಪರನೆಂದುಂ, ಅವರರ್ಚನಾವಿಧಿಯೊಳ್ನಿವೇದನಂ ಗೈದುದೇನಾದೊಡಮಾರೋಗಿಪುದಲ್ಲದೆ ಸುಚರಿತನ ಕುವರಂ ಬರಿದೆ ತಂದು ಮುಂದಿಟ್ಟ ಭಿಕ್ಷಾನ್ನಮುಂ ಪ್ರತ್ಯಕ್ಷದೊಳ್ಸೇವಿಸಿದ ಸುಲಭನೆಂದುಂ, ಅವರ್ಗ್ಗೀವುದೆಲ್ಲಮನಿತ್ತುಂ ಮತ್ತುಂ ತಣಿಯದೆ ರಾಮಾನುಜಾಚಾರ್ಯರ್ಗ್ಗೆ ನಿನ್ನನೇ ಇತ್ತು ಯತಿರಾಜಕುಮಾರನೆನಿಸಿದ ಕಪಚಾಗಿಯೆಂದುಂ, ಅವರ್ಗ್ಗೆ ದೇಶವಿಶೇಷದೊಳ್ ಸಾಯುಜ್ಯಮನೀವುದಲ್ಲದೆ, ಇಲ್ಲಿಪ್ಪರೆಲ್ಲರುಂ ಕಾಣ್ಬನ್ತೆನ್ನ ರಾಜನ್ಯಪಾಲನುಂ ನಿನ್ನ ಚಾರ್ವಿಗ್ರಹದ ಮೆಲ್ಲಡಿದಾವರೆಯೊಳ್ಸೇರಿಸಿದ ಪರಮರಕ್ಷಕನೆಂದುಂ, ಇವುಮೊದಲಾದ ನಿನ್ನ ಕಲ್ಯಾಣಗುಣಂಗಳಂ ಕೇಳ್ದು ತಿಳಿದು ಸಂತಸಂಬಡೆದು ಈ ವೊಡೆಯಂಗೆ ಗೂಳಿಗಮನೆಸಗುವುದರಿಂದೆಯುಂ ಪರತೊಂದಾನಂದಮಿಲ್ಲೆಂದು ಸ್ವರುಚಿಯಿಂದೀಗಳಾಂ ಪ್ರಾಸವೊಳಗದವನುಮೆನಿಸಿ ಸೇರಿದೆಂ. ಎನ್ನನಾಳ್ಗೊಂಬುದು ಆಳ್ಗೊಂಬುದು ಅನನ್ಯಜನಸುಲಭ ಶ್ರೀ ಯದುಶೈಲವಲ್ಲಭಾ! * *

* *

ಮೂವತ್ತುಂ ಬಿನ್ನಪಂ ಸಮಾಪ್ತಮ್.

ಇದು– ಸಕಲಜಗದುದಯವಿಭವಾದಿಲೀಲನುಂ, ಲಕ್ಷ್ಮೀಲೋಲನುಂ, ಅಖಿಲಹೇಯಪ್ರತ್ಯನೀಕನುಂ, ಅಪ್ರಾಕೃತಪ್ರತೀಕನುಂ, ಅವಾಪ್ತಸಮಸ್ತಕಾಮನುಂ, ಅನಂತಕಲ್ಯಾಣಗುಣಗಣಾರಾಮನುಂ, ಸಾರಸಭವಪೂಜಿತನುಂ, ಸನಕಮುನಿಸಭಾಜಿತನುಂ, ಯದುಶಿಖರಿಶಿಖರಾಲಂಕಾರನುಂ, ಯತಿರಾಜಸಂಪತ್ಕುಮಾರನುಂ, ಆಶ್ರಿತರಕ್ಷಾಪರಾಯಣನುಮಪ್ಪ ನಾರಾಯಣನಡಿದಾವರೆಯಾಳಗದೊಳ್ಬೆಳೆದೇಳ್ಗೆದಳೆವ ಯಾದವಕುಲೋದ್ಧಾರಕನುಂ, ಶುಭಗುಣೋದ್ಧಾರಕನುಮಾದ ದೇವರಾಜನೃಪಾಲಪೌತ್ರನುಂ, ಅತ್ರಿಗೋತ್ರಪವಿತ್ರನುಂ, ದೊಡ್ಡದೇವರಾಜಗರ್ಭಾಮ್ಬುಧಿಕಲಾಧರನುಂ, ಸಕಲಕಲಾಧರನುಂ, ಅಶ್ವಾರೋಹಣಕಲಾರೇವನ್ತನುಂ, ಗಜಾರೋಹಣಮಘವನ್ತನುಂ, ಅಸ್ತ್ರವಿದ್ಯಾಭೃಗುರಾಮನುಂ, ಅಪ್ರತಿಮಧಾಮನುಂ, ಕರ್ಣಾಟಕಭೂಮಂಡಲಾಧೀಶನುಂ, ದೇವಸಂಕಾಶನುಂ, ಪಶ್ಚಿಮರಂಗಪುರ ಸಿಂಹಾಸನಾಧಿಷ್ಠಿತನುಂ, ಸುಪ್ರತಿಷ್ಠಿತನುಂ, ದೇವಬ್ರಾಹ್ಮಣ ಪರಿಪಾಲನೈಕಾನ್ತನುಂ, ಸಕಲಪ್ರಜಾಕಾನ್ತನುಂ, ಅಸಕೃದಾವರ್ತಿತಷೋಡಶಮಹಾದಾನನುಂ, ಆಶ್ರಿತಸರ್ವಶ್ರೇಯೋನಿದಾನನುಂ, ರಸಿಕಜನಕರ್ಣರಸಾಯನೀಕೃತಸಂಗೀತವಿಸ್ತರನುಂ, ಸಾಹಿತ್ಯವಿದ್ಯಾನಿಕಷಪ್ರಸ್ತರನುಂ, ಪೂರ್ವದಿಗ್ವಿಜಯಯಾತ್ರಾವಿತ್ರಾಸಿತ ಚೇದಮಂಗಲೋಪಾನ್ತಕಾನ್ತಾರೋಪಗೂಢ ವ್ಯೂಢಸೇನಾಭಿಗುಪ್ತ ಪಾಂಡ್ಯಸೇನಾಧಿಪ ಸುಗರಕಿರೀಟ ವೆಂಕಟಕೃಷ್ಣಶಿಬಿರ ಸರ್ವಸ್ವಹರಣಸಮಸಮಯ ಸಮಾಕ್ರಾನ್ತ ಮಳಲಿ ಪರಮತಿ ಶಾಲೆಯ ಚೇದಿ ಮಂಗಲ ಕೊಂಗು ಧಾರಾಪುರಾದಿಪಾಂಡ್ಯನೃಪದುರ್ಗಮದುರ್ಗಸ್ತೋಮನುಂ, ಸಂಗರಭೀಮನುಂ ಉದ್ವೃತ್ತ ಸುರತ್ರಾಣ ಚಮೂ ವಿಕ್ಷೋಭಣ ವಿಚಕ್ಷಣ ವಿಕಟ ಮರಾಟ ಶಿವಾಜಿವಾಜಿಸೇನಾಧಿಪ ಜಯತಜಿಕಾಟಕ ದಾದಜಿಕಾಕಡ ಪ್ರಮುಖ ಕಂಠನಾಳೋಚ್ಚಲದ್ರಕ್ತಧಾರಾಸಿಕ್ತ ಕೃಪಾಣಸುದರ್ಶನ ವಿಲೀನ ಹರಜಿ ಸಂತಜಿಮುಖ್ಯ ಮಹಾರಾಷ್ಟ್ರ ನೃಪಪ್ರವೇಕನುಂ, ಅಪ್ರತ್ಯನೀಕನುಂ, ಗಂಭೀರೋನ್ನತ ಪರಿಘಾಪರಾಭೀಷಣ ಶತಘ್ನೀ ಶತಸಂಕುಲಮತ್ತಮಾವಳೀಸೇನಾವಳೀವರ್ಮಿತ ಧರ್ಮಪುರೀಪ್ರಸಭಾಕ್ರಮಣಶ್ರವಣನಿರ್ಜನೀಕೃತ ಕೆಂಗೇರಿ ವಾಮಲೂರು ಬೇವುಹಳ್ಳಿ ಬೈರನೆತ್ತಕುನ್ನತ್ತೂರ್ಮುಖದುರ್ಗವರ್ಗ ನಿರಾಯಾಸಾಕ್ರಮಣ ನಿರ್ವರ್ತಿತ ನಿಜ

ಸೈನಿಕಸಮೂಹನುಂ, ಆಹವಕಲಾ ಶ್ವೇತವಾಹನನುಂ, ದಕ್ಷಿಣದಿಗ್ವಿಜಯಯಾತ್ರಾ ವಿತ್ರಾಸಿತ ಪಲಾಯಿತ ಪಾಂಡ್ಯಬಲಾನುಧಾವನ ಶ್ರಾನ್ತ ನಿಜಬಲ ವಿಶ್ರಾನ್ತಿಸ್ಥಾನೀಕೃತ ಜಲಧಿವೇಲಾತಮಾಲಾರಣ್ಯನುಂ, ಆನತಜನಶರಣ್ಯನುಂ, ಪಶ್ಚಿಮದಿಗ್ವಿಜಯ ಪ್ರಸ್ಥಾನ ಭೇರೀ ರವಾಕರ್ಣನಸಂಭ್ರಾನ್ತ ದುರ್ದಾನ್ತ ಹುಶಾನಖಾನಸನಾಥ ಕೆಳದಿನೃಪ ಸಮರ್ಪಿತ ಸರ್ವಸ್ವನಿರ್ವಾಪಿತಕೋಪನುಂ, ಅಮಿತಪ್ರತಾಪನುಂ, ಉತ್ತರದಿಗ್ವಿಜಯ ಸಮಯಾಭಿಯಾತ ಕುತುಪಶಾಹವಾಹಿನೀ ವಿಮರ್ದನ ಕ್ಷಣಾಕ್ರಾಂತ ಕಂಬಿಕೆರೆ ಚಿಕ್ಕನಾಯಕನಹಳ್ಳಿ ಹೊನ್ನವಳ್ಳಿ ಸಾರತವಳ್ಳಿ ತುರುಗೆರೆ ಪ್ರಮುಖದುರ್ಗ್ಗಹಪ್ರಕಾರನುಂ, ಅಸಹಾಯಶೂರನುಂ, ಜಡಕನದುರ್ಗ್ಗಹಠಾದ್ಗ್ರಹಣವೇಳಾ ನಿಖಾತಸುರಂಗಾಮುಖಾನಲೋತ್ಕ್ಷಿಪ್ತ ಗುಂಡೋತ್ಪಲಪಾತ ನಿರ್ಧೂತ ಬಿಜ್ಜವರ ಮದ್ದಗಿರಿ ಚನ್ನರಾಯದುರ್ಗ ವೀರಣದುರ್ಗಾದ್ಯಸಂಖ್ಯದುರ್ಗವರ್ಗಕ್ರಮಣಾನಂತರಾವನತ ಸಾಮಂತನೃಪಾಲಮೌಳಿಮಣಿಘೃಣಿ ನೀರಾಜಿತ ಪದರಾಜೀವನುಂ, ಮಹಾನುಭಾವನುಂ, ಸಹಸಿಮುಖ ಮರಾಟನೃಪರಾಜಧಾನೀ ಕೃತಾಭಂಗುರಬೆಂಗಳೂರ್ ಹರಣ ನಿಷ್ಪ್ರಣಿತ ಶಂಭುಜಿ ಸಾಹಜಿ ಸಂತಜಿ ಹರಜಿಪ್ರಮುಖ ಮಹಾರಾಷ್ಟ್ರನೃಪಾಲಜಾಲನುಂ, ರಿಪುಕುಲಕಾಲನುಂ, ಸಂಗ್ರಾಮರಾಮನುಂ, ಸಾಹಸೋದ್ದಾಮನುಂ, ಘ್ರಾಘನ್ರತಾಪನುಂ, ಪ್ರಕಟಿತಾಟೋಪನುಂ, ಅಮಿತಪರಾಕ್ರಮನುಂ, ಅಭೇದ್ಯವಿಕ್ರಮನುಂ ಕರ್ಣ್ಣಾಟಕಚಕ್ರವರ್ತ್ತಿಯುಂ, ಕಲ್ಯಾಣಕೀರ್ತ್ತಿಯುಂ, ಲೋಕೈಕವೀರನುಂ, ವೀರರೊಳ್ಗಂಡನುಂ, ಗಂಡರೊಳ್ಗಂಡನುಂ, ಅಂತೆಂಬರ ಗಂಡನುಮೆನಿಸಿ ನೆಗಳ್ದ ಶ್ರೀಮದಪ್ರತಿಮವೀರ ನರಪತಿ ಶ್ರೀ ಚಿಕದೇವಮಹಾರಾಜ ವಿರಚಿತಮಪ್ಪ ಪದ್ಯಪ್ರಬಂಧಂಗಳೊಳ್

'ಚಿಕದೇವರಾಜಬಿನ್ನಪಕ್ಕೆ'

ಜಯಮಂಗಳಂ.